بِسْمِ اللّٰهِ الرَّحْمٰنِ الرَّحِيْمِ نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 03

ಕನ್ನಡ **ಬದರ್** ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 06

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

**10 ಫೆಬ್ರವರಿ 2022, 10 ತಬ್ಲೀಗ್ 1401 ತಬ್‌ಲೀಗ್ ಹಿಜರಿ ಶಮ್‌ಸಿ, 08 ರಜಬ್ 1443 ಹಿಜರಿ ಖಮರಿ.**


### ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ وَبَارِكْ لَنَا فِيْ عُمُرِهٖ وَاَمْرِهٖ

### ಅಲ್ಲಾಹನ ಉಪದೇಶ

وَمَنْ يَّعْمَلْ مِنَ الصّٰلِحٰتِ مِنْ ذَكَرٍ اَوْ اُنْثٰى وَهُوَ مُؤْمِنٌ فَاُولٰٓئِكَ يَدْخُلُوْنَ الْجَنَّةَ وَلَا يُظْلَمُوْنَ نَقِيْرًا (النساء: 125)

**(ಅಲ್‌ಅನ್‌ಆಂ : 22)**

**ಅಂದರೆ: ಸತ್ಯವಿಶ್ವಾಸಿಯಾಗಿರುವ ಪುರುಷನಾಗಲಿ ಸ್ತ್ರೀಯಾಗಲಿ, ಅವರು ಸತ್ಕರ್ಮಗಳನ್ನು ಮಾಡಿದರೆ, ಅವರು ಸ್ವರ್ಗದಲ್ಲಿ ಪ್ರವೇಶಿಸುವರು. ಅವರಿಗೆ ಲವಲೇಶವಾದರೂ ಅನ್ಯಾಯವಾಗದು.**

# ಅಹ್ಮದಿಯಾ ಜಮಾಅತಿನ ಕೇಂದ್ರ ಖಾದಿಯಾನ್ ದಾರುಲ್ ಅಮಾನ್‌ನಲ್ಲಿ 126ನೇ ವಾರ್ಷಿಕ ಸಮ್ಮೇಳನ ಅನುಗ್ರಹಪೂರ್ಣವಾದ ಯಶಸ್ವಿ ಆಯೋಜನೆ.

ಕೋವಿಡ್ ಮಹಾಮಾರಿಯು ಹೃದಯಗಳಲ್ಲಿರುವ ದ್ವೇಷ ದೂರ ಮಾಡಲಿಲ್ಲ? ಅಲ್ಲಾಹನ ಈ ಮುನ್ನೆಚ್ಚರಿಕೆಯಿಂದ ಮನುಷ್ಯನು ಯಾವುದೇ ಪಾಠವನ್ನು ಕಲಿಯುತ್ತಿಲ್ಲ. ಇದೆ ವರ್ತನೆ ಮುಂದುವರಿದರೆ ಅದರ ಭಯಂಕರವಾದ ಪರಿಣಾಮಗಳನ್ನು ಕಾಣಬಹುದು.

**ಇಂದು ನಾನು ಇಸ್ಲಾಮಿನ ಶಾಂತಿ ಶಿಕ್ಷಣಗಳ ಕುರಿತು ಕೆಲವು ನಿದರ್ಶನಗಳನ್ನು ಪ್ರಸ್ತುತಪಡಿಸುವೆನು. ಅದರಂತೆ ನಡೆದುಕೊಂಡರೆ ಲೋಕವು ಶಾಂತಿ ಮತ್ತು ಸಮಾಧಾನಗಳ ತಾಣವಾಗಬಹುದು.**

* ಇಸ್ಲಾಮ್ ಅನ್ಯಧರ್ಮಿಯರ ಸ್ಥಾಪಕರಿಗೆ ತಪ್ಪು ಆರೋಪಗಳನ್ನು, ನಿಂದನೆ ಮಾಡುವುದರಿಂದ ತಡೆಯುತ್ತದೆ.
* ಇಸ್ಲಾಮ್ ಎಲ್ಲಾ ಧರ್ಮಗಳನ್ನು ಸುಳ್ಳು ಎಂದು ಹೇಳುವುದಿಲ್ಲ. ಇಸ್ಲಾಂ ಹೇಳುವುದು ಪ್ರತಿ ಸಮುದಾಯದಲ್ಲೂ ಪ್ರವಾದಿಗಳು ಆಗಮಿಸಿರುವರು. ಪವಿತ್ರ ಖುರ್‌ಆನ್‌ನ ವಚನ **"ವ ಇಮ್ಮಿನ್ ಉಮ್ಮತಿನ್ ಇಲ್ಲಾ ಖಲಾ ಫೀಹಾ ನಝೀರ್"** ಪ್ರಕಾಶದಲ್ಲಿ ಒಬ್ಬ ಮುಸಲ್ಮಾನನು ಹಝ್‌ರತ್ ಈಸಾ(ಅ) ರನ್ನು, ಹಝ್‌ರತ್ ಮೂಸಾ(ಅ) ರನ್ನು ಅಥವಾ ಹಿಂದೂ ಅವತಾರಪುರುಷರನ್ನು ಗೌರವ ದೃಷ್ಟಿಯಿಂದ ನೋಡಲು ಬಾಧ್ಯಸ್ಥನಾಗಿರುತ್ತಾನೆ.
* ಇಸ್ಲಾಮ್ ಹೇಳುವುದು ಎಲ್ಲ ಧರ್ಮಗಳ ಅನುಯಾಯಿಗಳನ್ನು ಗೌರವಿಸಬೇಕು ಮತ್ತು ಎಲ್ಲ ಧರ್ಮಗಳ ಸ್ಥಾಪಕರನ್ನು ಗೌರವಿಸಬೇಕು.
* ಇಸ್ಲಾಮಿನ ಕುರಿತು ಒಂದು ತಪ್ಪು ಕಲ್ಪನೆ ಸೃಷ್ಟಿಸಲಾಗಿದೆ. ಇಸ್ಲಾಮ್ ಉಗ್ರವಾದದ ಧರ್ಮವಾಗಿದೆ. ಮತ್ತು ಪ್ರಾರಂಭದಲ್ಲಿ ದೌರ್ಜನ್ಯದಿಂದ ಮುಸಲ್ಮಾನರನ್ನಾಗಿ ಮಾಡಲಾಗಿದೆ. ನಿಜ ಹೇಳಬೇಕಾದರೆ ಇಸ್ಲಾಮ್ ಅದನ್ನು ಅಲ್ಲಗಳೆಯುತ್ತದೆ. ಈ ಲೋಕದಲ್ಲಿ ಇಸ್ಲಾಮ್ ಧರ್ಮವನ್ನು ಸ್ವೀಕರಿಸದ ಯಾರನ್ನೂ ಸಹ ಇಸ್ಲಾಮ್ ಶಿಕ್ಷಿಸಲಿಲ್ಲ. ಇಂದು ಸಹ ಮುಸಲ್ಮಾನರ ನಡತೆ ಇಸ್ಲಾಮಿನ ಶಿಕ್ಷಣದನ್ವಯ ಆದರೆ ಲೋಕದ ದೃಷ್ಟಿ ಇಸ್ಲಾಮ್‌ನತ್ತ ತಿರುಗಬಹುದು.

ಜಲ್ಸದ ಅನುಗ್ರಹಗಳನ್ನು ಭಾಗಿದಾರರು ಜೊತೆಯಲ್ಲಿ ಕೊಂಡು ಹೋಗುವವರಾಗಬೇಕು. ಲೋಕದ ಎಲ್ಲ ಕಡೆಯಿಂದಲು ಈ ಜಲ್ಸದ ಕಾರ್ಯಕ್ರಮಗಳನ್ನು ಆಲಿಸುವವರು. ಒಂದು ಉತ್ಸಾಹ ತಮ್ಮೊಳಗೆ ಸೃಷ್ಟಿಸಿಕೊಳ್ಳಬೇಕು ಮತ್ತು ತಮ್ಮ ಕ್ಷೇತ್ರಗಳಲ್ಲಿ ಇಸ್ಲಾಮಿನ ಪವಿತ್ರವಾದ ಶಿಕ್ಷಣಗಳ ಪ್ರಕಾಶದಲ್ಲಿ ಒಂದು ಕ್ರಾಂತಿಯನ್ನು ಹುಟ್ಟು ಹಾಕುವವರಾಗಬೇಕು.

**ಮುಸ್ಲಿಮ್ ಟೆಲಿವಿಷನ್ ಅಹ್ಮದಿಯಾ ಇಂಟರ್ ನ್ಯಾಶನಲ್ ಮೂಲಕ ಸಯ್ಯದ್‌ನಾ ಹಝ್‌ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್ (ಅಬಿಅ) ರವರು ಸಮ್ಮೇಳನವನ್ನುದ್ದೇಶಿಸಿ ಮಾಡಿದ ಅನುಗ್ರಹಪೂರ್ಣ ಸಂಬೋಧನೆ**

* ಕೋವಿಡ್ ಪರಿಸ್ಥಿತಿಗಳಿಂದಾಗಿ ಹುಝೂರ್ ಅನ್ವರ್(ಅತಬಿಅ) ಅವರ ಮಾರ್ಗದರ್ಶನದ ಮೇರೆಗೆ ಮತ್ತು ಸರಕಾರದ ಕೋವಿಡ್ ನಿಯಮಗಳನ್ವಯ ಸೀಮಿತ ನೆಲೆಯಲ್ಲಿ ಸಮ್ಮೇಳ ಆಯೋಜಿಸಲಾಗಿತ್ತು. * ಆದರೆ Live Streaming ಮೂಲಕ ಸಮ್ಮೇಳನದ ವಿಶಾಲವಾದ ನೆಲೆಯಲ್ಲಿ ಪ್ರಯೋಜನ ಪಡೆಯಲಾಯಿತು. * Live Streaming ಮೂಲಕ ಒಂದು ಲಕ್ಷ ಆರು ಸಾವಿರದ ಆರುನೂರ ನಲವತ್ತಾರು ಜನರು ಸಮ್ಮೇಳನದ ಕಾರ್ಯಕ್ರಮಗಳನ್ನು ನೋಡಿ, ಆಲಿಸಿ ಆನಂದಪಟ್ಟರು. * ಎಂಟು ದೇಶಗಳ ಜನರು ಪ್ರತಿನಿಧಿಸಿದ್ದರು. * ನಮಾಝ್ ತಹಜ್ಜುದ್ ಖುರ್‌ಆನ್ ಪಾಠ ಮತ್ತು ದೇವಸ್ಮರಣೆಯಿಂದ ವಾತಾವರಣ ತುಂಬಿತ್ತು. * ಉಲಮಾಅಗಳ (ಮತಪಂಡಿತರ) ಅರ್ಥಪೂರ್ಣ ಭಾಷಣಗಳು, ಆರು ಅನ್ಯದೇಶಿಯ ಭಾಷೆಗಳಲ್ಲಿ ಜಲ್ಸ ಕಾರ್ಯಕ್ರಮಗಳ ಅನುವಾದ, ಜಮಾಅತ್ ಬಾಂಧವರ ಹೆಚ್ಚಿನ ಜ್ಞಾನಾರ್ಜನೆಗಾಗಿ, ತರಬೇತಿ ಆಧಾರವಾಗಿ Documentary ಮತ್ತು ವಿವಿಧ ಮಾಹಿತಿಗಾಗಿ ವಸ್ತು ಪ್ರದರ್ಶನಗಳ ಆಯೋಜನೆ. * ವಿವಾಹಗಳ ಘೋಷಣೆ, ಪ್ರಿಂಟ್ ಮತ್ತು ಎಲೆಕ್ಟ್ರಾನಿಕ್ ಮೀಡಿಯಾದವರಿಂದ ಜಲ್ಸ ಸಮಾಚಾರಗಳ ಪ್ರಸಾರ. * ಹೀಗೆ ಶಾಂತಿಪೂರ್ಣ ಹಾಗೂ ಆಹ್ಲಾದಕರ ಪರಿಸರದಲ್ಲಿ ಜಲ್ಸದ ಎಲ್ಲ ಕಾರ್ಯಕ್ರಮಗಳು ಅಂತ್ಯಗೊಂಡವು.

***ವರದಿ: ಮನ್ಸೂರ್ ಅಹ್ಮದ್ ಮಸ್ರೂರ್ (ಮುನ್‌ತಝಿಮ್ ರಿಪೋರ್ಟಿಂಗ್)***

**(ಭಾಗ-3, ಅಂತಿಮ ಭಾಗ)**

ಸುಮಾರು ನಾಲ್ಕು ಕಾಲು ಗಂಟೆಗೆ ಜಲ್ಸ ಸಾಲಾನಾದ ಆ ಅಮೃತ ಘಳಿಗೆ ಬಂತು. ಆಗ ಖಾದಿಯಾನ್ ಮತ್ತು ಯು.ಕೆಯಿಂದ ಉತ್ಸಹಭರಿತ ಘೋಷಣೆಗಳ ನಂತರ ಹಝ್‌ರತ್ ಖಲೀಫತುಲ್ ಮಸೀಹ್ ಅಲ್ ಖಾಮಿಸ್(ಅಬಿಅ) ತಮ್ಮ ಭಾಷಣ ಪ್ರಾರಂಭಿಸಿದರು. ತಶಹುದ್ ತವ್ವೂಝ್ ಮತ್ತು ಸೂರಃ ಫಾತಿಹಾ ಪಾರಾಯಣದ ನಂತರ ಹುಝೂರ್ ಅನ್ವರ್(ಅಬಿಅ) ನುಡಿದರು.

* ಇಂದು ಜಲ್ಸ ಸಾಲಾನ ಖಾದಿಯಾನಿನ ಅಂತಿಮ ಅಧಿವೇಶನವಾಗಿದೆ. ಅದೇ ರೀತಿ ಆಫ್ರಿಕಾದ ಒಂದು ದೇಶ ಗಮುಸಾನ್ ನಲ್ಲಿಯೂ ಸಹ ಜಲ್ಸ ನಡೆಯುತ್ತಿದೆ. ಅವರು ಸಹ ವಿನಂತಿಸಿಕೊಂಡಿದ್ದರು. ನಮ್ಮಲ್ಲಿಯು ಸಹ ಭಾಗವಹಿಸಿಕೊಳ್ಳಬೇಕೆಂದು ಅಲ್ಲಾಹನ ಅನುಗ್ರಹದಿಂದ ಇನ್ನಿತರ ದೇಶಗಳಲ್ಲಿಯೂ ಜಲ್ಸ ನಡೆಯುತ್ತಿರಬಹುದು. ಮತ್ತು ನಡೆಯುತ್ತಿದೆ. ಖಾದಿಯಾನಿನ ಜಲ್ಸ ಜೊತೆಯಲ್ಲಿ ಅವರ ಜಲ್ಸವೂ ಸಹ ಇದ್ದ ಕಾರಣ ಅವರ ವಿವರ ಬಂತು.

* ಹುಝೂರ್ ಅನ್ವರ್ ಹೇಳಿದರು. ನಮ್ಮ ವಾದವೇನೆಂದರೆ ಇಸ್ಲಾಮಿನ ಶಿಕ್ಷಣವೇ ತಮ್ಮ ನೈಜಸ್ಥಿತಿಯಲ್ಲಿ ಇದ್ದ ಕಾರಣ ಒಂದು ಸುಂದರ ಸಮಾಜದ ನಿರ್ಮಾಣ ಮಾಡಲು ಅತ್ಯುತ್ತಮ ಶಿಕ್ಷಣವಾಗಿದೆ ಎಂದು. ಈ ಶಿಕ್ಷಣದಂತೆ ನಡೆದುಕೊಂಡರೆ ಅದು ಅಲ್ಲಾಹನ ಸಾನಿಧ್ಯವನ್ನು ದೊರಕಿಸಿಕೊಳ್ಳುತ್ತದೆ ಮತ್ತು ಅವನ ಸಾನಿಧ್ಯದಿಂದಾಗಿ ಅಲ್ಲಾಹನ ಸಂತುಷ್ಟಿ ಪಡೆಯುವ ಅಭಿಲಾಷೆ ಮತ್ತು ಪ್ರಯತ್ನದಿಂದಾಗಿ ಓರ್ವ ಯಥಾರ್ಥ ಮುಸಲ್ಮಾನನ್ನು ಇನ್ನೊಬ್ಬರ ಹಕ್ಕುಗಳನ್ನು ಪಾಲನೆಯು ಶಾಂತಿ ಮತ್ತು ನೆಮ್ಮದಿಯ ಸಾಕ್ಷ್ಯವಾಗಿದೆ. ಇತ್ತೀಚೆಗೆ ಶಾಂತಿ ಸಮಾಧಾನ ಕುರಿತು ಮಾತುಗಳಾಗುತ್ತವೆ. ಹೀಗೆ ಶಾಂತಿ ಸಮಾಧಾನ ಹುಟ್ಟು ಹಾಕಬೇಕೆಂದು.

* ಹುಝೂರ್ ಅನ್ವರ್ ಹೇಳಿದರು. ಕೋವಿಡ್ ಮಹಾಮಾರಿಯು ಹೃದಯಗಳ ದ್ವೇಷಗಳನ್ನು ದೂರ ಮಾಡಲಿಲ್ಲ. ಅಲ್ಲಾಹನ ಈ ಮುನ್ನೆಚ್ಚರಿಕೆಯಿಂದ ಮನುಷ್ಯನು ಯಾವ ಪಾಠವನ್ನು ಕಲಿಯುತ್ತಿಲ್ಲ. ಅದೇ ವರ್ತನೆ ಮುಂದುವರೆದರೆ ಭಯಂಕರವಾದ ಪರಿಣಾಮಗಳನ್ನು ಎದುರಿಸಬೇಕಾದೀತು. ಇಂದು ನಾನು ಇಸ್ಲಾಮಿನ ಶಾಂತಿ ಹಾಗೂ ಸಮಾಧಾನದ ಕುರಿತಾದ ಕೆಲ ಶಿಕ್ಷಣಗಳ ಬಗ್ಗೆ ವಿವರ ನೀಡುವೆನು. ಅದರಂತೆ ನಡೆದುಕೊಂಡರೆ ಲೋಕವು ಶಾಂತಿ ಸಮಾಧಾನದ ತಾಣವಾಗುವುದು.

* ಹುಝೂರ್ ಅನ್ವರ್ ಹೇಳಿದರು. ಅದಾಗ್ಯೂ ಲೋಕವು ಧರ್ಮದಿಂದ ದೂರವಾಗುತ್ತಿದೆ. ಆದರೂ ಸಹ ಒಂದು ವರ್ಗ ಹೀಗಿದೆ. ಅದು ಧರ್ಮದ ಹೆಸರಿನಲ್ಲಿ ಇನ್ನೊಂದು ಧರ್ಮವನ್ನು ಆಕ್ಷೇಪಕ್ಕೆ ಗುರಿಮಾಡುತ್ತವೆ ಇಸ್ಲಾಂ ಹೇಳುತ್ತದೆ ಇನ್ನೊಬ್ಬರ ಧರ್ಮದ ಸ್ಥಾಪಕರ ಬಗ್ಗೆ ತಪ್ಪು ಆರೋಪಗಳನ್ನು ಹಚ್ಚಬೇಡಿರಿ ಎಂದು. ಇಸ್ಲಾಂ ಹೇಳುತ್ತದೆ. ಇಸ್ಲಾಂ ಅಂತಿಮ ಧರ್ಮವಾಗಿದೆ. ಆದರೆ ಬಾಕಿ ಧರ್ಮಗಳೆಲ್ಲ ಸುಳ್ಳು ಧರ್ಮಗಳಾಗಿದ್ದವು ಎಂದು ಹೇಳುವುದಿಲ್ಲ. ಇಸ್ಲಾಂ ಹೇಳುತ್ತದೆ. ಎಲ್ಲ ಸಮುದಾಯಗಳಲ್ಲೂ ಪ್ರವಾದಿಗಳು ಆಗಮಿಸಿದ್ದಾರೆ ಪವಿತ್ರ ಖುರ್ಆನ್‌ನ ವಚನ ವಇನ್ ಮಿನ್ ಉಮ್ಮತಿನ್ ಎಲ್ಲ ಖಲಾಫೀಹಾ ನಝೀರ್, ಅಡಿಯಲ್ಲಿ ಒಬ್ಬ ಮುಸಲ್ಮಾನರು ಹಝ್ರತ್ ಈಸಾ(ರ) ರನ್ನು, ಹಝ್ರತ್ ಮೂಸಾ(ಅ) ರನ್ನು ಅಥವಾ ಹಿಂದೂಗಳ ಅವತಾರ ಪುರುಷರನ್ನು ಗೌರವದಿಂದ ಕಾಣುತ್ತಾರೆ.

* ಹುಝೂರ್ ಅನ್ವರ್ ಹೇಳಿದರು. ಎಲ್ಲ ಸಮುದಾಯಗಳಲ್ಲೂ ಪ್ರವಾದಿಗಳು ಬಂದಿರುತ್ತಾರೆ. ಪ್ರಾರಂಭದಲ್ಲಿ ಎಲ್ಲಾ ದರ್ಮಗಳ ಬುನಾದಿ ಸತ್ಯ ಮೇಲೆಯೇ ಇದ್ದವು ಆದರೆ ಬರಬರುತ್ತಾ ಅದರ ಶಿಕ್ಷಣದಲ್ಲಿ ಪರಿವರ್ತನೆ ಉಂಟಾದವು. ಅಲ್ಲಾಹನ ಕೃಪೆ ಸಾರ್ವಜನಿಕವಾಗಿದೆ. ಅದು ಎಲ್ಲಾ ಸಮುದಾಯಗಳಿಗೂ ಎಲ್ಲಾ ದೇಶಗಳಿಗೂ ಮತ್ತು ಎಲ್ಲಾ ಕಾಲಗಳಿಗೂ ಆವರಿಸಿಕೊಂಡಿದೆ. ಏಕೆಂದರೆ ಯಾವ ಸಮುದಾಯ ಅಥವಾ ಕಾಲ ವಂಚಿತವಾಗಬಾರದು. ಆದುದರಿಂದ ಇಸ್ಲಾಮ್ ಹೇಳುತ್ತದೆ. ಎಲ್ಲ ಧರ್ಮಗಳ ಅನುಯಾಯಿಗಳನ್ನು ಗೌರವಿಸಬೇಕು ಮತ್ತು ಎಲ್ಲ ಧರ್ಮಗಳ ಸ್ಥಾಪಕರನ್ನು ಗೌರವಿಸಬೇಕು.

* ಇಸ್ಲಾಮ್ ಧರ್ಮ ಕುರಿತು ಒಂದು ತಪ್ಪು ಕಲ್ಪನೆ ಹಣೆಯಲಾಗಿದೆ. ಇಸ್ಲಾಂ ಉಗ್ರವಾದದ ಧರ್ಮವಾಗಿದೆ. ಪ್ರಾರಂಭದಲ್ಲಿ ಬಲಾತ್ಕಾರವಾಗಿ ಮುಸಲ್ಮಾನರನ್ನಾಗಿ ಮಾಡಲಾಗಿದೆ ಎಂದು. ಅದರೆ ಇಸ್ಲಾಮ್ ಅದನ್ನು ಅಲ್ಲಗಳೆಯುತ್ತದೆ. ಪವಿತ್ರ ಖುರ್ಆನ್‌ನಲ್ಲಿದೆ. **ವಲೌಶಾಅ ರಬ್ಬುಕ ಲಆಮನ ಮನ್ ಫೀಲ್ ಅರ್ಝಿ ಕುಲ್ಲುಹುಮ್ ಜಮೀಅ, ಅಫಅನ್‌ತ ತುಕ್ರಿಹುನ್ನಾಸ ಹತ್ತಾ ಯಕೂನು ಮುಮಿನೀನ.** (ಯೂನೂಸ್– 100)

* ಹುಝೂರ್ ಅನ್ವರ್ ನುಡಿದರು. ಇಸ್ಲಾಮಿನಲ್ಲಿ ಪ್ರಚಾರ ಮಾಡುವ ಆಜ್ಞೆಯಿದೆ. ಸಂದೇಶ ತಲುಪಿಸುವ ಮತ್ತು ಮಾರ್ಗದರ್ಶನ ಮಾಡುವ ಆಜ್ಞೆ ಇದೆ. ಅದಾದ ನಂತರದ ಆಜ್ಞೆ **ವಖುಲಿಲ್ ಹಖ್ಖು ಮಿನ್‌ರಬ್ಬಿಕುಮ್. ಫಮನ್ ಶಾಅ ಫಲ್‌ಯುಮಿನ್ ವಮನ್‌ಶಾಅ ಫಲ್‌ಯಕ್‌ಫುರ್** (ಅಲ್ ಕಹಫ್–30) ಅಂದಹಾಗೆ ಇಸ್ಲಾಂ ಈ ಲೋಕದಲ್ಲಿ ವಿಶ್ವಾಸ ತರದ ಕಾರಣದಿಂದ ಯಾರನ್ನು ಶಿಕ್ಷಿಸಲಿಲ್ಲ. ಇಂದು ಸಹ ಮುಸಲ್ಮಾನರು ಈ ಶಿಕ್ಷಣದಂತೆ ನಡೆದುಕೊಂಡರೆ ಲೋಕವು ಇಸ್ಲಾಮಿನತ್ತ ದೃಷ್ಟಿ ಬೀರಬಹುದು, ಅದರಿಂದ ಲೋಕದಲ್ಲಿ ಶಾಂತಿ ಸ್ಥಾಪನೆಯಾಗುವುದು ಮತ್ತು ಮುಸಲ್ಮಾನರ ಗೌರವವು ಉಳಿಯುವುದು.

* ಲೋಕದಲ್ಲಿ ಶಾಂತಿ ಸ್ಥಾಪಿಸಲು ಇರುವ ಇನ್ನೊಂದು ತತ್ವವೇನೆಂದರೆ ಒಬ್ಬರ ತಪ್ಪು ಅಥವಾ ಶತ್ರುತ್ವವನ್ನು ಕ್ಷಮಿಸಬೇಕಾದರೆ ಅಥವಾ ಶಿಕ್ಷಿಸಬೇಕಾದರೆ ಅಲ್ಲಾಹನು ಪವಿತ್ರ ಖುರ್ಆನ್‌ನಲ್ಲಿ ಹೇಳಿದನು. **ವ ಜಝಾವು ಸಯ್ಯಿಅತುನ್ ಸಯ್ಯಿಅತುನ್ ಮಿಸ್‌ಲುಹಾ, ಫಮನ್ ಅಫಾ ಫಅಜ್ರುಹೂ ಅಲಲ್ಲಾಹ್, ಇನ್ನಹೂ ಲಾಯುಹಿಬ್ಬುಝ್ಝಾಲಿಮೀನ್** (ಅಶ್ಶೂರಾಅ–41) ಕೆಡುಕಿಗಿರುವ ಪ್ರತಿಫಲ ಅದಕ್ಕೆ ಸಮಾನವಾದ ಕೆಡುಕಾಗಿದೆ. ಆದರೆ ಯಾರಾದರೂ ಕ್ಷಮೆ ನೀಡಿದರೆ (ಮತ್ತು ಅದರ ಪರಿಣಾಮವಾಗಿ) ಒಳಿತುಂಟಾದರೆ ಅದರ ಪ್ರತಿಫಲ ಅವನಿಗೆ ಅಲ್ಲಾಹನಿಂದ ಲಭಿಸುವುದು.

* ಹುಝೂರೆ ಅನ್ವರ್ ನುಡಿದರು. ಶಾಂತಿ ಸ್ಥಾಪಿಸಲು ಹಝ್ರತ್ ರಸೂಲುಲ್ಲಾಹ್(ಸ) ರವರು ನಮಗೆ ಒಂದು ಸವರ್ಣಿಯ ತತ್ವ ತೋರಿಸಿಕೊಟ್ಟಿದ್ದಾರೆ. ದುಷ್ಕರ್ಮಿ ಹಾಗೂ ಪೀಡಿತನ ಎರಡರ ಮೇಲೂ ಅನುಕಂಪ ತೋರಿಸಿರಿ ಎಂದು. ದುಷ್ಕರ್ಮಿಯ ಮೇಲೆ ಅನುಕಂಪ ತೋರಿಸುವುದೆಂದರೆ ಅವನಿಗೆ ದುಷ್ಕರ್ಮದಿಂದ ತಡೆಯುವುದು ಆಗಿದೆ. ಇತ್ತ ಕಡೆ ಕಡಿಮೆ ಗಮನ ಕೊಡಲಾಗುತ್ತದೆ. ಅಂದಹಾಗೆ ದೀರ್ಘಕಾಲದ ಶಾಂತಿ ಸ್ಥಾಪನೆಯಾಗಬೇಕಾದರೆ ಎಲ್ಲಾ ಅಧಿಕಾರಸ್ಥ ಜನರು ಸಮತೋಲನದ ಹಾದಿ ಹಿಡಿಯಬೇಕಾಗುತ್ತದೆ.

* ಇನ್ನೊಂದು ಕೆಡುಕನ್ನು ಇಸ್ಲಾಂ ತೀವ್ರವಾಗಿ ಖಂಡಿಸುತ್ತದೆ. ಅದು ಸಂಶಯವಾಗಿದೆ. ಅಲ್ಲಾಹನು ಹೇಳಿದನು. ಎಲೈ ವಿಶ್ವಾಸಿಗಳೇ, ಮಿತಿಮೀರಿ ಸಂಶಯಪಡುವುದರಿಂದ ನೀವು ದೂರವಿರಿ. ನಿಶ್ಚಯವಾಗಿಯೂ ಕೆಲವು ಸಂಶಯಗಳು ಪಾಪಕರವಾಗಿವೆ. ನೀವು ಪರಸ್ಪರ ಗೂಢಚಾರಿಕೆ ಮಾಡಬೇಡಿರಿ. (ಪರಸ್ಪರ) ಹಿಂದಿನಿಂದ ದೂಷಿಸಬೇಡಿರಿ. ತನ್ನ ಮೃತ ಸಹೋದರನ ಮಾಂಸವನ್ನು ತಿನ್ನಲು ನಿಮ್ಮಲ್ಲಿ ಯಾರಾದರೂ ಇಷ್ಟಪಡುವರೇ? ಖಂಡಿತವಾಗಿಯೂ ನೀವು ಅದನ್ನು ಅಸಹ್ಯತೆಯಿಂದ ಕಾಣುವಿರಿ. ನೀವು ಅಲ್ಲಾಹನಿಗೆ ಭಯಭಕ್ತಿಯನ್ನು ತೋರಿಸಿರಿ. ದಿಟವಾಗಿಯೂ ಅಲ್ಲಾಹನು ಪಶ್ಚಾತ್ತಾಪವನ್ನು ಸ್ವೀಕರಿಸುವವನೂ, ಕಾರುಣ್ಯನಿಧಿಯೂ ಆಗಿದ್ದಾನೆ.

* ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಕೆಲ ಪಾಪಗಳು ಎಷ್ಟೊಂದು ಸೂಕ್ಷ್ಮವಾಗಿರುತ್ತವೆ ಎಂದರೆ ಮನುಷ್ಯನು ಅದರಲ್ಲಿ ಅರಿಯದೇ ಲುಪ್ತನಾಗಿರುತ್ತಾನೆ. ಯುವಕನಿಂದ ವೃದ್ಧನಾಗುತ್ತಾನೆ. ಆದರೆ ತನ್ನ ಪಾಪ ಅರಿಯುವುದಿಲ್ಲ. ಉದಾಹರಣೆಗೆ ಚಾಡಿ ಹೇಳುವ ಹವ್ಯಾಸ, ಇಂತಹ ಜನರು ಅದನ್ನು ಒಂದು ಸಾಮಾನ್ಯ ಮಾತು ಎಂದು ತಿಳಿದುಕೊಳ್ಳುತ್ತಾರೆ. ಅದಾಗ್ಯೂ ಪವಿತ್ರ ಖುರ್ಆನ್ ಅದನ್ನು ಅತ್ಯಂತ ಕೆಟ್ಟದೆಂದು ಸಾರಿದೆ.

* ಹುಝೂರೆ ಅನ್ವರ್(ಅಬಿಅ) ಹೇಳಿದರು. **ವಲಾ ತಖುಲೂ ಅಮ್ವಾಲಕುಮ್ ಬೈನಕುಮ್ ಬಿಲ್‌ಬಾತಿಲಿ** ಅಂದರೆ ತನ್ನ ಸಂಪತ್ತೇ ಇದ್ದರೂ ತನ್ನೊಡನೆಯೇ ಸುಳ್ಳು ಮೋಸದಿಂದ ಕಬಳಿಸಬೇಡಿರಿ. ಹೇಳಿದರು. ಇದು ದುಷ್ಕರ್ಮವಾಗಿದೆ. ಅದರಿಂದ ಆತಂಕ ಮತ್ತು ಜಗಳಗಳಾಗುತ್ತವೆ ನಾವು ನೋಡುತ್ತಿದ್ದೇವೆ.. ಸಮಾಜದಲ್ಲಿ ಭೌತಿಕತೆಯ ರೇಸು ಹೆಚ್ಚಾಗಿದೆ. ಮೋಸ ಮಾಡಿ ಇನ್ನೊಬ್ಬರ ಸ್ವತ್ತನ್ನು ವಶಪಡಿಸಲು ನೋಡುತ್ತಾರೆ. ಅಂತರಾಷ್ಟ್ರೀಯ ಮಟ್ಟದಲ್ಲೂ ಈ ದುಷ್ಕರ್ಮ ನಡೆಯುತ್ತಿವೆ. ಶ್ರೀಮಂತ ದೇಶಗಳು ಬಡ ದೇಶದ ಸಂಪತ್ತನ್ನು ತಪ್ಪು ವಿಧಾನದಿಂದ ವಿವಿಧ ನೆಪಗಳನ್ನು ಒಡ್ಡಿ ಕಬಳಿಸುತ್ತಿದ್ದಾರೆ.

* ಹುಝೂರ್ ಅನ್ವರ್(ಅಬಿಅ) ನುಡಿದರು ನಾವು ನೋಡುತ್ತಿದ್ದೇವೆ. ಕೆಲ ವ್ಯವಹಾರಗಳು ದುಷ್ಕರ್ಮಕ್ಕೆ ನಾಂದಿಯಾಗುತ್ತವೆ ಸಣ್ಣ ಪ್ರಮಾಣದಲ್ಲೂ ಮತ್ತು ದೊಡ್ಡ ಉದ್ದಿಮೆ ನೆಲೆಯಲ್ಲೂ. ಹಾಗೆ ಅಲ್ಲಾಹನು ಹೇಳಿದನು. ವೈಲುಲ್ ಲಿಲ್ . . ಅಳತೆಯಲ್ಲಿ ಕಮ್ಮಿ ಮಾಡಿ ಕೊಡುವವರಿಗೆ ಮಹಾನಾಶ. ಅವರು (ಬೇರೆ) ಜನರಿಂದ ಅಳೆದು ಪಡೆಯುವಾಗ ಪೂರ್ಣವಾಗಿ ಪಡೆಯುತ್ತಾರೆ. ಆದರೆ ಅವರು ಬೇರೆಯವರಿಗೆ ಅಳೆದು ಅಥವಾ ತೂಕಮಾಡಿ ಕೊಡುವಾಗ ಕಡಿಮೆ ಮಾಡುತ್ತಾರೆ. ಇಸ್ಲಾಮ್ ಹೇಳುವುದು ಎಲ್ಲಾ ರೀತಿಯ ವ್ಯವಹಾರದಲ್ಲಿ ಇತರರ ಹಕ್ಕುಗಳ ಬಗ್ಗೆ ಗಮನಕೊಡಬೇಕಾಗಿದೆ.

* ಹುಝೂರ್ ಅನ್ವರ್ ಹೇಳಿದರು. ಶಾಂತಿ ಸಮಾಧಾನ ನಶಿಸಲು ಅಹಂಕಾರವು ಒಂದು ದೊಡ್ಡ ಕಾರಣವಾಗಿದೆ ಇಸ್ಲಾಮ್ ಅದನ್ನು ತೀವ್ರವಾಗಿ ಖಂಡಿಸುತ್ತದೆ ಅಲ್ಲಾಹನು ಹೇಳಿದನು. **ವಲಾ ತಮ್‌ಶಿಫಿಲ್ ಅರ್ಝಿ ಮರಹನ್, ಇನ್ನಹಕ ಲನ್ ಲಖ್ಲಿಖಿಲ್‌ಅರ್ಝು ವಲನ್ ತಬ್‌ಲುಗಲ್ ಜಿಬಾಲ ತೂಲ.** ಅಂದರೆ ನೀನು ಭೂಮಿಯ ಮೇಲೆ ಗರ್ವದಿಂದ ಎದೆಯುಬ್ಬಿಸಿ ನಡೆಯಬೇಡ. ದಿಟವಾಗಿಯೂ ನೀನು ಅದನ್ನು ನೀಡಲಾರ ಮತ್ತು ಪರ್ವತದ ಎತ್ತರವನ್ನು ಸಾಧಿಸಲಾರೆ. ಅಲ್ಲಾಹನು ಹೇಳಿದನು. ಅಹಂಕಾರ ಮಾಡಿ ಯಾರೂ ಸಹ ಯಥಾರ್ಥ ಸ್ಥಾನ ಪಡೆಯಲಾರನು. ವಿನಯದಿಂದ ಮಾತ್ರ ಯಥಾರ್ಥ ನಾಯಕತ್ವ ಸಾಧಿಸಲು ಸಾಧ್ಯ. ಅದರಿಂದ ಮಾತ್ರ ದೀರ್ಘಕಾಲದ ಶಾಂತಿಸ್ಥಾಪನೆ ಸಾಧ್ಯ.

* ಅಲ್ಲಾಹನು ಹೇಳಿದನು. **ವಅ್‌ಬುದುಲ್ಲಾಹ ವಲಾ ತುಶ್ರಿಕೂ ಬಿಹೀ ಶೈಅವ್ವ ಬಿಲ್ ವಾಲಿದೈನಿ ಇಹ್ಸಾನ ವ್ವಬಿಝಿಲ್ ಖುರ್ಬಾ ವಲ್ ಯತಾಮ ವಲ್ ಮಸಾಕೀನಿ ವಲ್‌ಜಾರಿ ಝಿಲ್ ಖುರ್ಬಾ ವಲ್ ಜಾಲಿಲ್**

*(ಪುಟ 09ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಅಲ್ಲಾಹನ ಪರವಾಗಿ ಒಂದು ಉತ್ಸಾಹದಿಂದ ಮಾಡಲಾದ ತ್ಯಾಗಗಳೇ ಅಲ್ಲಾಹನ ಅನುಗ್ರಹಗಳನ್ನು ಸೆಳೆಯುತ್ತವೆ. ನಮ್ಮ ಪ್ರತಿಯೊಂದು ಕೃತ್ಯದ ಮೇಲೆ ಅಲ್ಲಾಹನ ನೋಟವಿದೆ. ಒಟ್ಟಿನಲ್ಲಿ ಈ ಗುರಿಯನ್ನು ನಾವು ಸದಾ ಮುಂದಿರಿಸಬೇಕು. ನಾವು ಮಾಡುವ ಪ್ರತಿಯೊಂದು ಕೆಲಸ ಅಲ್ಲಾಹನಿಗಾಗಿ ಮಾಡಬೇಕು. ಈ ಚಿಂತೆ ಉಂಟಾದರೆ ಮಾತ್ರ ನಾವು ಅಲ್ಲಾಹನ ಅನುಗ್ರಹಗಳ ನೈಜ ವಾರಸುದಾರರಾಗಲು ಸಾಧ್ಯ.**

**ವಕ್ಫ್–ಎ–ಜದೀದ್ ಯೋಜನೆಯ 64ನೇ ವರ್ಷದಲ್ಲಿ ಜಾಗತಿಕ ಅಹ್ಮದಿಯಾ ಜಮಾತ್‌ನಿಂದ 1 ಕೋಟಿ ಹನ್ನೆರಡು ಲಕ್ಷ ಯಪ್ಪತ್ತೇಳು ಸಾವಿರ ಪೌಂಡ್‌ನ ಅಭೂತಪೂರ್ವ ತ್ಯಾಗಗಳ ಪ್ರಸ್ತಾವನೆ**

**ಅಲ್ಲಾಹನು ನಮ್ಮ ಹೃದಯಗಳ ಸ್ಥಿತಿಯನ್ನು ಅರಿಯುತ್ತಾನೆ. ನಿಮ್ಮ ಉದ್ದೇಶಗಳನ್ನು ಅರಿಯುತ್ತಾನೆ. ಆದ್ದರಿಂದ ಯಾರು ಹಿರಿಯ ತ್ಯಾಗಗಳನ್ನು ಮಾಡಿರುವರು ಅಥವಾ ಯಾರು ಕಿರಿಯ ತ್ಯಾಗಗಳನ್ನು ಮಾಡಿರುವರು ಎಂದು ಅವನು ನೋಡುವುದಿಲ್ಲ. ಹೆಚ್ಚು ಹಣ ತ್ಯಾಗ ಮಾಡಿರುವನೋ ಅಥವಾ ಕಡಿಮೆ ಮಾಡಿರುವನೋ ಎಂದು ನೋಡುವುದಿಲ್ಲ. ಬದಲಾಗಿ ಅವನು ಉದ್ದೇಶಗಳ ಪ್ರಕಾರ ಪ್ರತಿಫಲ ನೀಡುತ್ತಾನೆ.**

**ದೈವಿಕ ವಾಗ್ದಾನಗಳ ಪ್ರಕಾರ ಹಝ್ರತ್ ಮಸೀಹ್ ಮೌಊದ್(ಅ)ರ ಜಮಾಅತ್ ಹರಡಲು, ಹೂ ಬಿಡಲು ಮತ್ತು ಪ್ರಗತಿ ಹೊಂದಿಲಿಕ್ಕಾಗಿಯೇ ಸ್ಥಾಪನೆಗೊಂಡಿದೆ. ಶತ್ರುಗಳಿಗೆ ಇದಕ್ಕೆ ಯಾವುದೇ ಹಾನಿಯುಂಟುಮಾಡಲು ಸಾಧ್ಯವಿಲ್ಲ.**

**ಅಲ್ಲಾಹನ ಅನುಗ್ರಹಗಳ ಅನೇಕ ಘಟನೆಗಳಿವೆ. ಅಲ್ಲಾಹನು ನಿಜವಾದ ವಾಗ್ದಾನಗಳನ್ನು ಪಾಲಿಸುವವನಾಗಿದ್ದಾನೆ. ಆತನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ನೊಂದಿಗೆ ಮಾಡಿದ ವಾಗ್ದಾನಗಳನ್ನು ಪೂರೈಸುತ್ತಿದ್ದಾನೆ ಮತ್ತು ಅವನು ಅದೃಶ್ಯದಿಂದ ಸಹಾಯವನ್ನು ನೀಡುತ್ತಿದ್ದಾನೆ ಮತ್ತು ನೀಡುವನು ಇನ್‌ಶಾಅಲ್ಲಾಹ್, ನಾವು ಅಲ್ಲಾಹನ ಅನುಗ್ರಹಗಳನ್ನು ಆನುವಂಶಿಕವಾಗಿ ಪಡೆಯಲು ಆತನ ಸಂತೋಷವನ್ನು ಪಡೆಯಲು ಆತನ ಮಾರ್ಗದಲ್ಲಿ ಖರ್ಚು ಮಾಡುವ ಅವಕಾಶವನ್ನು ನೀಡುತ್ತಿದ್ದಾನೆ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **07–01–2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ- بِسْمِ اللّٰهِ الرَّحْمٰنِ الرَّحِيمِ-

اَلْحَمْدُ لِلّٰهِ رَبِّ الْعٰلَمِيْنَ○ الرَّحْمٰنِ الرَّحِيْمِ○ مٰلِكِ يَوْمِ الدِّيْنِ○ إِيَّاكَ نَعْبُدُ وَإِيَّاكَ نَسْتَعِيْنُ○ اِهْدِنَا الصِّرَاطَ الْمُسْتَقِيْمَ○ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ○

وَمَثَلُ الَّذِيْنَ يُنْفِقُوْنَ أَمْوَالَهُمُ ابْتِغَآءَ مَرْضَاتِ اللّٰهِ وَتَثْبِيْتًا مِّنْ أَنْفُسِهِمْ كَمَثَلِ جَنَّةٍ بِرَبْوَةٍ أَصَابَهَا وَابِلٌ فَآتَتْ أُكُلَهَا ضِعْفَيْنِ فَإِنْ لَّمْ يُصِبْهَا وَابِلٌ فَطَلٌّ وَاللّٰهُ بِمَا تَعْمَلُوْنَ بَصِيْرٌ○ (البقرة:266)

ಈ ವಚನಗಳ ಅನುವಾದ ಹೀಗಿದೆ: ಅಲ್ಲಾಹನ ಪ್ರೀತಿಯನ್ನು ಗಳಿಸಲಿಕ್ಕಾಗಿ ಮತ್ತು ತಮ್ಮ ಆತ್ಮಗಳನ್ನು ದೃಢಪಡಿಸಲಿಕ್ಕಾಗಿ ತಮ್ಮ ಧನವನ್ನು ವ್ಯಯಮಾಡುವವರ ಸ್ಥಿತಿ ಪೀಠಭೂಮಿಯ ಮೇಲಿರುವ ತೋಟದಂತೆ. ಅದರ ಮೇಲೆ ಭಾರೀ ಮಳೆ ಸುರಿದಾಗ ಇಮ್ಮಡಿ ಫಲಗಳು ಉತ್ಪಾದಿಸಲ್ಪಡುತ್ತವೆ. ಸಮೃದ್ಧವಾದ ಮಳೆ ಅದರ ಮೇಲೆ ಬೀಳದಿದ್ದರೆ ಲಘುವಾದ ಮಳೆ ಅದಕ್ಕೆ ಸಾಕಾಗುತ್ತದೆ. ನೀವು ಮಾಡುವುದನ್ನೆಲ್ಲ ಅಲ್ಲಾಹನು ಕಾಣುತ್ತಾನೆ.

ಸತ್ಯವಿಶ್ವಾಸಿಗಳು ಅಲ್ಲಾಹನ ಮಾರ್ಗದಲ್ಲಿ ಅಲ್ಲಾಹನ ಸಂಪ್ರೀತಿಯ ಬಯಕೆಯಿಂದ ಖರ್ಚು ಮಾಡುವುದರ ಅವಸ್ಥೆಯ ನಕಾಶೆಯನ್ನು ಅಲ್ಲಾಹನು ಈ ವಚನದಲ್ಲಿ ತೆಗೆದಿದ್ದಾನೆ. ಎಂದರೆ ಈ ಜನರು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವುದೇಕೆಂದರೆ, ಒಂದು ಅಲ್ಲಾಹನ ಆದೇಶ ಪ್ರಕಾರ ಈ ಮಾರ್ಗದಲ್ಲಿ ಖರ್ಚು ಮಾಡಿ ಅಲ್ಲಾಹನ ಸಂಪ್ರೀತಿ ಮತ್ತು ಸಂತುಷ್ಟಿಯನ್ನು ಗಳಿಸುವವರಾಗಲು. ಎರಡನೆಯದಾಗಿ ತನ್ನ ಸಮುದಾಯ ಮತ್ತು ತನ್ನ ಮಿಶನನ್ನು ಎಂದರೆ, ತನ್ನ ಸಮುದಾಯದ ಕೆಲಸವನ್ನು ಸುದೃಢಗೊಳಿಸಲು. ಈ ಕಾಲದಲ್ಲಿ ಇಸ್ಲಾಮಿನ ಅಧ್ಯಾಪನೆ ಮತ್ತು ಸಂದೇಶವನ್ನು ಹರಡುವ ಕೆಲಸ ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಒಪ್ಪಿಸಲಾಗಿದೆ ಮತ್ತು ಹಝ್ರತ್ ಮಸೀಹ್ ಮೌಊದ್(ಅ)ರ ಮಿಶನನ್ನು ಈಡೇರಿಸಲಿಕ್ಕಾಗಿ ಜೀವ, ಸಂಪತ್ತು ಮತ್ತು ಸಮಯುವನ್ನು ತ್ಯಾಗ ಮಾಡುವುದು ಅವರನ್ನು ನಂಬುವವರ ಕೂಡ ಕರ್ತವ್ಯವಾಗಿದೆ. ಪ್ರತಿ ಕಾಲಘಟ್ಟದಲ್ಲೂ ಪ್ರತಿ ಸಮುದಾಯದಲ್ಲೂ ಆಗಮಿಸುವ ಪ್ರವಾದಿಗಳು ತಮ್ಮನ್ನು ನಂಬುವವರೊಡನೆ ಧನತ್ಯಾಗ ಮಾಡಲು ಉಪದೇಶಿಸುತ್ತಾರೆ. ನೀವು ಧರ್ಮದ ಸೇವೆಗಾಗಿ ಧರ್ಮದ ಮಾರ್ಗದಲ್ಲಿ ತಮ್ಮ ಸಂಪತ್ತಿನಿಂದ ಸ್ವಲ್ಪ ಪಾಲು ನೀಡಬೇಕು. ಆಗಲೇ ನೈಜ ವಿಶ್ವಾಸದ ಬಗ್ಗೆ ಗೊತ್ತಾಗುವುದು ಎಂದು ಹಝ್ರತ್ ಮಸೀಹ್ ಮೌಊದ್(ಅ) ಸಹ ಹೇಳಿರುವರು. ಸತ್ಯವಿಶ್ವಾಸಿಗಳು ಖಂಡಿತವಾಗಿಯೂ ಧರ್ಮಕ್ಕಾಗಿ ಧನತ್ಯಾಗ ಮಾಡುತ್ತಾರೆ. ಅವರ ತ್ಯಾಗದ ಉದ್ದೇಶ ಯಾರ ಮೇಲಾದರೂ ಔದಾರ್ಯ ಮಾಡುವುದಲ್ಲ. ಬದಲಾಗಿ ನಮ್ಮ ದೇವ ಹೇಗಾದರೂ ನಮ್ಮೊಂದಿಗೆ ಸಂಪ್ರೀತನಾಗಬೇಕು, ನಮ್ಮ ಆತ್ಮಕ್ಕೆ ಸ್ಥಿರತೆ ಉಂಟಾಗಲಿ ಮತ್ತು ನಾವು ನಮ್ಮ ಸತ್ಯವಿಶ್ವಾಸದಲ್ಲಿ ಸುದೃಢವಾಗಲಿ ಎಂದಾಗಿರುತ್ತದೆ. ನಮ್ಮ ಸಮುದಾಯ ಪ್ರಗತಿ ಹೊಂದುವುದಾಗಿರಬೇಕು, ನಾವು ಸಾಧ್ಯವಾಗುವಷ್ಟರ ಮಟ್ಟಿಗೆ ನಮ್ಮ ಸಂಪತ್ತನಂದಲೂ ಬಲಹೀನತೆಗಳನ್ನು ದೂರೀಕರಿಸಬೇಕು ಮತ್ತು ಯಾವ ಉದ್ದೇಶಕ್ಕಾಗಿ ನಾವು ಈ ಕಾಲಘಟ್ಟದ ಇಮಾಂ ಮತ್ತು ಹಝ್ರತ್ ಪೈಗಂಬರ್(ಸ)ರ ಸತ್ಯಸಂಧ ಗುಲಾಮರಾದ ಮಸೀಹ್ ಮೌಊದ್(ಅ)ರನ್ನು ಬೈಅತ್ ಮಾಡಿದ್ದೇವೋ ಅದನ್ನು ಗಳಿಸುವವರಾಗಬೇಕು ಎಂದಾಗಿರುತ್ತದೆ.

ಒಟ್ಟಿನಲ್ಲಿ ಇಂತಹ ಜನರು ಸ್ವಾರ್ಥ ಯೋಚನೆಗಳಿಲ್ಲದೇ ಚಿಂತಿಸುವವರಾಗಿರುತ್ತಾರೆ. ಅವರ ಮನಸ್ಸು ಅವರನ್ನು ತ್ಯಾಗಗಳನ್ನು ಮಾಡಿ ಅಲ್ಲಾಹನ ಸಂಪ್ರೀತಿ ಗಳಿಸುವ ಕಡೆಗೆ ಗಮನ ಸೆಳೆಯುತ್ತದೆ. ಅನಂತರ ಅವರು ತ್ಯಾಗಗಳ ಉನ್ನತ ಮಟ್ಟವನ್ನು ಗಳಿಸುತ್ತಾರೆ ಅಥವಾ ಗಳಿಸಲು ಪ್ರಯತ್ನಿಸುತ್ತಾರೆ. ಆಗ ಅಲ್ಲಾಹನು ಕೂಡ ಇಂತಹ ಜನರ ತ್ಯಾಗಗಳನ್ನು ಸ್ವೀಕರಿಸುತ್ತಾನೆ ಮತ್ತು ತನ್ನ ಕೃಪೆಗಳಿಂದ ಅನುಗ್ರಹಿಸುತ್ತಾನೆ.

ಅಲ್ಲಾಹನು ನಮ್ಮ ಹೃದಯಗಳ ಸ್ಥಿತಿಯನ್ನು ಅರಿಯುತ್ತಾನೆ. ನಮ್ಮ ಉದ್ದೇಶಗಳನ್ನು ಅರಿಯುತ್ತಾನೆ. ಆದ್ದರಿಂದ ಯಾರು ಹಿರಿಯ ತ್ಯಾಗಗಳನ್ನು ಮಾಡಿರುವರು ಅಥವಾ ಯಾರು ಕಿರಿಯ ತ್ಯಾಗಗಳನ್ನು ಮಾಡಿರುವರು ಎಂದು ಅವನು ನೋಡುವುದಿಲ್ಲ. ಹೆಚ್ಚು ಹಣ ತ್ಯಾಗ ಮಾಡಿರುವನೋ ಅಥವಾ ಕಡಿಮೆ ಮಾಡಿರುವನೋ ಎಂದು ನೋಡುವುದಿಲ್ಲ. ಬದಲಾಗಿ ಅವನು ಉದ್ದೇಶಗಳ ಪ್ರಕಾರ ಪ್ರತಿಫಲ ನೀಡುತ್ತಾನೆ. ಆದ್ದರಿಂದ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವವರ ಉದಾಹರಣೆ ಎರಡು ರೀತಿಯದ್ದಾಗಿರುತ್ತವೆ ಎಂದು ಅಲ್ಲಾಹನು ಈ ವಚನದಲ್ಲಿ ಹೇಳಿದ್ದಾನೆ. ಒಂದು ದಪ್ಪದ ಹನಿಗಳೊಂದಿಗೆ ಬರುವ ಭಾರಿ ಮಳೆ ಮತ್ತೊಂದು ಲಘುವಾದ ಮಳೆಯಾಗಿರುತ್ತದೆ. ಮಂಜಿನಂತೆಯಾಗಿರುತ್ತದೆ. ಹೆಚ್ಚು ಸಂಪನ್ನ ವ್ಯಕ್ತಿ ಧರ್ಮಕ್ಕಾಗಿ ಬಹಳ ಖರ್ಚು ಮಾಡುತ್ತಾನೆ ಅಥವಾ ಮಾಡಲು ಸಾಧ್ಯ. ಶ್ರೀಮಂತನು ಹೆಚ್ಚು ಹಣವನ್ನು ಕೊಟ್ಟು ಧನತ್ಯಾಗದಲ್ಲಿ ಮುಂದಾಗುತ್ತಾನೆ ಮತ್ತು ಅಲ್ಲಾಹನ ಸಂಪ್ರೀತಿಯನ್ನು ಗಳಿಸುವವನಾಗುತ್ತಾನೆ ಹಾಗೂ ಅಲ್ಲಾಹನ ಸಾಮೀಪ್ಯವನ್ನು ಗಳಿಸುವವನಾಗಿದ್ದಾನೆ ಅಥವಾ ಗಳಿಸಲು ಪ್ರಯತ್ನಿಸುತ್ತಿದ್ದಾನೆ ಎಂದು ಒಬ್ಬ ಬಡ ವ್ಯಕ್ತಿ ಬಹಳ ದುಃಖದಿಂದ ಯೋಚಿಸಬಹುದಾಗಿದೆ. ನನ್ನ ಬಳಿ ಇರುವುದಾದರೋ ಸ್ವಲ್ಪವೇ ಹಣ, ನಾನು ಹೇಗೆ ಅವನಗೆ ಸಮಾನವಾಗುವೆನು ಎಂದು ಯೋಚಿಸಬಹುದಾಗಿದೆ. ಆದರೆ ಅಲ್ಲಾಹನು ಹೇಳುತ್ತಾನೆ: ಯಾವ ರೀತಿಯಲ್ಲಿ ಹಚ್ಚುಹಸುರು ಭೂಮಿಗೆ ಸ್ವಲ್ಪ ಮಳೆ ಅಥವಾ ಮಂಜಿನಿಂದಲೇ ಪ್ರಯೋಜನ ಲಭಿಸುತ್ತದೋ ಅದೇ ರೀತಿಯಲ್ಲಿ ಸಿರಿವಂತರಲ್ಲದವರ ಸಣ್ಣ ತ್ಯಾಗವು ಲಘು ಮಳೆಯ ಪದವಿಯನ್ನು

ಹೊಂದಿದೆ. ಆ ಸಣ್ಣ ತ್ಯಾಗವು ಹೂ ಹಣ್ಣು ಬಿಡುವುದರಲ್ಲಿ ದೊಡ್ಡ ಪಾತ್ರವಹಿಸುತ್ತದೆ. ತ್ಯಾಗಗಳ ಪ್ರತಿಫಲ ಅಲ್ಲಾಹನೇ ನೀಡುತ್ತಾನೆ. ಪ್ರತಿಯೊಂದು ಕೃತ್ಯದ ಫಲವನ್ನು ಅಲ್ಲಾಹನೇ ನೀಡಬೇಕಾಗಿದೆ. ಅಲ್ಲಾಹನು ನಿಮ್ಮ ಸ್ಥಿತಿಗತಿಗಳು ಮತ್ತು ನಿಮ್ಮ ಉದ್ದೇಶಗಳನ್ನು ಅರಿಯುತ್ತಾನೆ. ಅದ್ದರಿಂದ ನಿಮ್ಮ ಸಣ್ಣ ತ್ಯಾಗಗಳನ್ನು ಕೂಡ ದುಪ್ಪಟ್ಟು ಅಥವಾ ಅದಕ್ಕಿಂತ ಹೆಚ್ಚು ಫಲ ನೀಡುವುದಾಗಿ ಮಾಡಬಹುದಾಗಿದೆ.

ಹಝ್ರತ್ ಪೈಗಂಬರ್(ಸ) ಒಂದು ಸಂದರ್ಭದಲ್ಲಿ ಹೀಗೆ ಹೇಳಿದರು: ಇಂದು ಒಂದು ದಿರ್ಹಂ ಒಂದು ಲಕ್ಷ ದಿರ್ಹಮ್‌ಗಿಂತ ಮುಂದಾಯಿತು. ಅದು ಹೇಗಾಯಿತು ಎಂದು ಸಹಾಬರು ಕೇಳಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಒಬ್ಬ ವ್ಯಕ್ತಿಯ ಬಳಿ ಎರಡು ದಿರ್ಹಂ ಇದ್ದುವು. ಅವನು ಅದರಿಂದ ಒಂದು ದಿರ್ಹಮಿನ ತ್ಯಾಗವನ್ನು ಮಾಡಿದನು. ಮತ್ತೊಬ್ಬ ವ್ಯಕ್ತಿಯ ಬಳಿ ಅಪರಿಮಿತ ಸಂಪತ್ತುಗಳು ಮತ್ತು ಸೊತ್ತುಗಳಿದ್ದುವು. ಅವನು ಅದರಿಂದ ಒಂದು ಲಕ್ಷ ದಿರ್ಹಮಿನ ತ್ಯಾಗ ಮಾಡಿದನು. (ಸನನ್ ಅನ್ನಿಸಾಯಿ, ಕಿತಾಬುಝ್ಝಕಾತ್, ಹದೀಸ್–2528)

ಅವನ ಒಂದು ಲಕ್ಷದ ತ್ಯಾಗ ಅವನ ಸಂಪತ್ತಿನ ಮುಂದೆ ಬಹಳ ಕಡಿಮೆಯಾಗಿತ್ತು. ಒಟ್ಟಿನಲ್ಲಿ ಅಲ್ಲಾಹನು ಉದ್ದೇಶಗಳಿಗೆ ಪ್ರತಿಫಲ ನೀಡುತ್ತಾನೆ. ಯಾವ ಸ್ಥಿತಿಯಲ್ಲಿ ಮಾಡಲಾಯಿತು ಎಂಬ ಪ್ರಕಾರ ಅವರ ಕೃತ್ಯಕ್ಕೆ ಅಲ್ಲಾಹನು ಪ್ರತಿಫಲ ನೀಡುತ್ತಾನೆ. ಬಡವನ ಸಣ್ಣ ತ್ಯಾಗಕ್ಕೆ ಯಾವುದೇ ಬೆಲೆಯಿಲ್ಲವೆಂದು ತಿಳಿಯಬಾರದು ಎಂದು ಹೇಳಿ ದರಿದ್ರನನ್ನು ಸಮಾಧಾನ ಪಡಿಸುತ್ತಾನೆ. ಈ ಸಣ್ಣ ತ್ಯಾಗ ಅವನ ವಿಶ್ವಾಸವನ್ನು ದೃಢಗೊಳಿಸುವುದರ ಜೊತೆಗೆ ಜಮಾಅತಿನ ಸುದೃತೆಗೂ ಉಪಕಾರಿಯಾಗಿದೆ.

ಆದ್ದರಿಂದ ಅಲ್ಲಾಹನ ಪರವಾಗಿ ಒಂದು ಉತ್ಸಾಹದಿಂದ ಮಾಡಲಾದ ತ್ಯಾಗಗಳೇ ಅಲ್ಲಾಹನ ಅನುಗ್ರಹಗಳನ್ನು ಸೆಳೆಯುತ್ತವೆ. ನಮ್ಮ ಪ್ರತಿಯೊಂದು ಕೃತ್ಯದ ಮೇಲೆ ಅಲ್ಲಾಹನ ನೋಟವಿದೆ. ಒಟ್ಟಿನಲ್ಲಿ ಈ ಗುರಿಯನ್ನು ನಾವು ಸದಾ ಮುಂದಿರಿಸಬೇಕು. ನಾವು ಮಾಡುವ ಪ್ರತಿಯೊಂದು ಕೆಲಸ ಅಲ್ಲಾಹನಿಗಾಗಿ ಮಾಡಬೇಕು. ಈ ಚಿಂತೆ ಉಂಟಾದರೆ ಮಾತ್ರ ನಾವು ಅಲ್ಲಾಹನ ಅನುಗ್ರಹಗಳ ನೈಜ ವಾರಸುದಾರರಾಗಲು ಸಾಧ್ಯ. ಹಝ್ರತ್ ಮಸೀಹ್ ಮೌಊದ್(ಅ)ರ ಕಾಲದಲ್ಲಿ ಅವರನ್ನು ನಂಬಿದವರಲ್ಲಿ ಹೆಚ್ಚಿನವರು ಬಡವರಾಗಿದ್ದರು. ಆದರೆ ಅವರು ತ್ಯಾಗಗಳಲ್ಲಿ ಎಷ್ಟು ಮುಂದಿದ್ದರು ಎಂದರೆ, ಒಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಅವರನ್ನು ಶ್ಲಾಘಿಸುತ್ತಾ ಹೇಳಿದರು: ಮೈಯಲ್ಲಿ ಸರಿಯಾಗಿ ಬಟ್ಟೆ ಕೂಡ ಇರದ ನೂರಾರು ಜನರು ನಮ್ಮ ಜಮಾಅತಿನಲ್ಲಿದ್ದಾರೆ. ಅವರಿಗೆ ಹೊದಿಕೆ ಅಥವಾ ಪೈಜಾಮು ಕೂಡ ಇರುವುದಿಲ್ಲ. ಅವರಿಗೆ ಯಾವುದೇ ಸೊತ್ತಿರುವುದಿಲ್ಲ. ಆದರೆ ಅವರಿಂದ ಪದೇ ಪದೇ ಪ್ರಕಟವಾಗುವ ಅಪರಿಮಿತವಾದ ನಿಷ್ಠೆ, ನಂಬಿಕೆ, ಸ್ನೇಹ, ಪ್ರಾಮಾಣಿಕತೆ ಮತ್ತು ವಿಶ್ವಾಸದ ಆವೇಶವನ್ನು ನೋಡಿಕೊಂಡು ಸ್ವತಃ ನಮಗೂ ಆಶ್ಚರ್ಯ ಮತ್ತು ಸೋಜಿಗವಾಗುತ್ತದೆ. ಅದರ ಲಕ್ಷಣಗಳು ಅವರ ಮುಖಗಳಿಂದ ಹೊರಹೊಮ್ಮುತ್ತವೆ. ಅವರು ತಮ್ಮ ನಂಬಿಕೆಯಲ್ಲಿ ಎಷ್ಟು ಸುದೃಢ ಮತ್ತು ಸತ್ಯವಿಶ್ವಾಸದಲ್ಲಿ ಎಷ್ಟು ಸತ್ಯವಂತರು ಮತ್ತು ಸ್ಥಿರಚಿತ್ತರು ಹಾಗೂ ನಿಷ್ಠಾವಂತರೂ ಪ್ರಾಮಾಣಿಕರೂ ಆಗಿರುವರು ಎಂದರೆ, ಶ್ರೀಮಂತರಿಗೆ ಮತ್ತು ಭೌತಿಕ ಅಭಿಲಾಷೆಯುಳ್ಳವರಿಗೆ ಇದರ ಅರಿವು ಉಂಟಾದರೆ, ಅದಕ್ಕಾಗಿ ಅವರು ಅವರ ಬಳಿಯಲ್ಲಿರುವ ಎಲ್ಲವನ್ನು ಕೊಡಲು ತಯಾರಾಗುವರು." (ಮಲ್‌ಫೂಝಾತ್, ಸಂಪುಟ–10, ಪುಟ–306–307)

ಮತ್ತೊಂದೆಡೆ ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ: "ಈ ಜಮಾಅತ್ ನಿಷ್ಠೆ ಮತ್ತು ಪ್ರೀತಿಯಲ್ಲಿ ಬಹಳ ಪ್ರಗತಿಗೊಂಡಿದೆ ಎಂದು ನಾವು ನೋಡುತ್ತೇವೆ. ಕೆಲವೊಮ್ಮೆ ಜಮಾಅತಿನ ವಿಶ್ವಾಸದ ಆವೇಶವನ್ನು ನೋಡಿಕೊಂಡು ಸ್ವತಃ ನಮಗೂ ಅಚ್ಚರಿ ಮತ್ತು ವಿಸ್ಮಯುವಾಗುತ್ತದೆ. ಎಲ್ಲಿಯು ವರೆಗೆ ಎಂದರೆ ಶತ್ರುಗಳು ಸಹ ದಂಗಾಗಿರುವರು." (ಮಲ್‌ಫೂಝಾತ್, ಸಂಪುಟ–10, ಪುಟ–334)

ಪ್ರಾಮಾಣಿಕತೆ ಮತ್ತು ನಿಷ್ಠೆಯಲ್ಲಿ ಅಭಿವೃದ್ಧಿ ಮತ್ತು ವಿಶ್ವಾಸದ ಆವೇಶದ ಅಸಾಮಾನ್ಯ ಮಟ್ಟದ ಕರ್ಮಪರವಾದ ಪ್ರಕಟಣೆ ಇಂದು ಕೂಡ ಹಝ್ರತ್ ಮಸೀಹ್ ಮೌಊದ್(ಅ)ರ ಜಮಾಅತಿನ ವ್ಯಕ್ತಿಗಳಲ್ಲಿ ಕಾಣುತ್ತಿದೆ. ನವ ಅಹ್ಮದಿಗಳು ಕೂಡ ಸ್ವಲ್ಪ ಕಾಲದಲ್ಲೇ ಎಷ್ಟೊಂದು ಅಭಿವೃದ್ಧಿಗೊಂಡಿರುವರು ಎಂದರೆ ಶತ್ರುಗಳು ಸಹ ಈ ಪರಿವರ್ತನೆಯನ್ನು ಕಂಡು ವಿಸ್ಮಯಗೊಳ್ಳುತ್ತಾರೆ. ಉತ್ತಮ ಸ್ವಭಾವ, ಒಳ್ಳೆಯ ಪ್ರಕೃತ, ಬೈಅತಿನ ಹಕ್ಕಿನ ಈಡೇರುವಿಕೆ ಮತ್ತು ಖಲೀಫತುಲ್ ಮಸೀಹ್‌ರೊಡನೆ ನಿಷ್ಠೆಯ ಸಂಬಂಧದ ಪ್ರಕಟನೆ ಧನತ್ಯಾಗ ಮಾಡುವವರ ಮಾತು ಮತ್ತು ಕೃತಿಯಿಂದ ಬಹಿರಂಗವಾಗುತ್ತದೆ. ಈ ಜನರಿಗೆ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿ, ಅಲ್ಲಾಹನ ಸಂಪ್ರೀತಿ ಗಳಿಸುವುದರ ಅರಿವು ಆಗುವಾಗ ಧನತ್ಯಾಗಗಳನ್ನು ಮಾಡಿ ಇತರರಿಗಿಂತ ಮುಂದಾಗಲು ಪ್ರಯತ್ನಿಸುತ್ತಾರೆ.

ಒಟ್ಟಿನಲ್ಲಿ ದೈವಿಕ ವಾಗ್ದಾನಗಳ ಪ್ರಕಾರ ಹಝ್ರತ್ ಮಸೀಹ್ ಮೌಊದ್(ಅ)ರ ಜಮಾಅತ್ ಹರಡಲು, ಹೂ ಬಿಡಲು ಮತ್ತು ಪ್ರಗತಿ ಹೊಂದಿಲಿಕ್ಕಾಗಿಯೇ ಸ್ಥಾಪನೆಗೊಂಡಿದೆ. ಶತ್ರುಗಳಿಗೆ ಇದಕ್ಕೆ ಯಾವುದೇ ಹಾನಿಯುಂಟುಮಾಡಲು ಸಾಧ್ಯವಿಲ್ಲ.

ಧನತ್ಯಾಗದ ಪ್ರಸ್ತಾಪ ನಡೆಯುತ್ತಿದೆ. ಈ ಸಂಬಂಧವಾಗಿ ಕೆಲವು ಘಟನೆಗಳನ್ನು ಹೇಳುತ್ತೇನೆ. ಯಾವ ರೀತಿಯಲ್ಲಿ ಜನರು ತ್ಯಾಗಗಳನ್ನು ಮಾಡಿ ತಮ್ಮ ನಂಬಿಕೆ ಮತ್ತು ದೃಢವಿಶ್ವಾಸವನ್ನು ಪ್ರಕಟಿಸುತ್ತಾರೆ ಮತ್ತು ಅನಂತರ ಅಲ್ಲಾಹನು ಸಹ ಅವರ ವಿಶ್ವಾಸಗಳಿಗೆ ಹೇಗೆ ಸ್ಥಿರತೆ ನೀಡುತ್ತಾನೆ ಎಂದು ಇವುಗಳಿಂದ ಗೊತ್ತಾಗುವುದು.

ಸೀರಾಲಿಯೋನ್ ಆಫ್ರಿಕದ ವಿದೂರ ಪ್ರದೇಶದ ಒಬ್ಬ ವ್ಯಕ್ತಿಯ ಬಗ್ಗೆ ಅಲ್ಲಿ ಲೋಕಲ್ ಮಿಶನರಿ ಹೇಳುತ್ತಾರೆ: ತಿಂಗಳ ಕೊನೆಯಲ್ಲಿ ಅಲ್ಲಿಯ ಒಂದು ಜಮಾಅತಿನ ಸಹೋದರರನ್ನು ಮಸೀದಿಯಲ್ಲಿ ವಖ್ಫೇ ಜದೀದಿನ ಕಡೆಗೆ ಗಮನ ಸೆಳೆಯಲಾಯಿತು. ಆಗ ಅಲ್ಲಿಯ ಇಮಾಂ ಶೇಖ್ ಉಸ್ಮಾನ್ ಸಾಹಿಬ್‌ರು ಒಟ್ಟುಗೂಡಿಸಿದ ಹಣವನ್ನು ಚಂದಾಗಾಗಿ ನೀಡಿಕೊಂಡು ಹೀಗೆ ಹೇಳಿದರು: ನಾವು ನಮ್ಮ ವಾಗ್ದಾನವನ್ನು ಈಡೇರಿಸಲು ಸಾಧ್ಯವಾಗಿಲ್ಲ. ನಮ್ಮ ವಾಗ್ದಾನದ ಟಾರ್ಗಟನ್ನು ಈಡೇರಿಸಲು ನಮಗೆ ಮನಸ್ಸಾರೆ ಬಯಕೆಯಿದೆ. ಆದರೆ ಈಗ ನಮ್ಮ ಬಳಿ ಯಾವುದೇ ಮಾರ್ಗವಿಲ್ಲ. ಹೇಗಿದ್ದರೂ ದುಆ ಮಾಡಲು ಮುಅಲ್ಲಿಮ್ ಸಾಹಿಬ್‌ರೊಡನೆ ಹೇಳಿದರು. ದುಆ ಮಾಡಿದಾಗ ಎಲ್ಲರೂ ಉಚ್ಚ ಸ್ವರದಲ್ಲಿ ಆಮೀನ್ ಎಂದು ಹೇಳಿದರು. ಅನಂತರ ಮೋಟರ್ ಸೈಕಲಲ್ಲಿ ಮಿಶನ್ ಹೌಸಿಗೆ ಮರಳಿ ಬಂದೆನು. ಮಿಶನ್ ಹೌಸಿಗೆ ತಲುಪುವುದಕ್ಕೆ ಮುಂಚಿತವಾಗಿ ಅದೇ ಇಮಾಂ ಸಾಹಿಬ್‌ರ ಫೋನ್ ನನಗೆ ಬಂತು. ಭೇಟಿಯಾಗಲು ಮಿಶನ್ ಹೌಸಿಗೆ ಬರುತ್ತಿದ್ದೇನೆ ಎಂದು ಹೇಳಿದರು. ಈಗಷ್ಟೇ ಅಲ್ಲಿಂದ ಬಂದಿರುವೆನು ಅಷ್ಟರಲ್ಲಿ ಫೋನ್ ಕೂಡ ಬಂತು ಎಂದು ಯೋಚಿಸಿ ನಾನು ಆಶ್ಚರ್ಯಗೊಂಡೆನು. ಹೀಗೆ ಆ ಲೋಕಲ್ ಇಮಾಂ ನನ್ನ ಬಳಿಗೆ ಬಂದು ಹೇಳಿದರು: ನಾವು ಮಾಡಿದ ದುಆದ ಪ್ರಭಾವವೇನಾಯಿತು ಎಂದರೆ, ಸ್ವಲ್ಪ ಸಮಯದಲ್ಲೇ ನನ್ನೊಬ್ಬ ಸಂಬಂಧಿಕ ಬಂದನು. ಅವನು ತನ್ನ ಜೇಬಿಗೆ ಕೈ ಹಾಕಿ ಒಂದು ಲಕ್ಷ ಲಿಯೋನ್ ನನ್ನ ಕೈಯಲ್ಲಿ ಕೊಟ್ಟರು. ಯಾವುದೋ ಒಂದು ವಿಷಯದಲ್ಲಿ ನನ್ನೊಡನೆ ದುಆ ಮಾಡಲು ಹೇಳಿದರು. ಇದನ್ನು ನೋಡಿ ನಾನು ಅಲ್ಲೇ ಅಲ್ಲಾಹು ಅಕ್ಬರ್ ಎಂದು ಉಚ್ಚವಾಗಿ ಹೇಳಲು ಶುರುವಾಡಿದೆ. ನಿನಗೇನಾಯಿತು ಎಂದು ಬಂದ ಸಂಬಂಧಿಕನು ಆಶ್ಚರ್ಯಗೊಂಡು ಕೇಳಿದನು. ಆಗ ನಾನು ಅವನೊಡನೆ ಹೇಳಿದೆ: ನಮ್ಮ ವಖ್ಫೇ ಜದೀದ್ ಚಂದಾದ ಒಂದು ವಾಗ್ದಾನವಿತ್ತು. ಅದರಲ್ಲಿ ಸ್ವಲ್ಪ ಹಣ ಕೊಡಲು ಬಾಕಿಯಿತ್ತು. ನಾವು ಈಗಷ್ಟೇ ಅದಕ್ಕಾಗಿ ದುಆ ಮಾಡಿದ್ದೆವು. ಅಷ್ಟರಲ್ಲಿ ಅಲ್ಲಾಹನು ನಿನ್ನನ್ನು ಕಳುಹಿಸಿದನು. ಹೀಗೆ ಇಮಾಂ ಶೇಖ್ ಉಸ್ಮಾನ್ ಸಾಹಿಬ್‌ರು ಒಂದು ಲಕ್ಷ ಲಿಯೋನ್ ಹಣವನ್ನು ಪೂರ್ತಿಯಾಗಿ ಬೇಗನೇ ವಖ್ಫೇ ಜದೀದ್ ಚಂದಾವಾಗಿ ಕೊಟ್ಟರು. ಇದು ಅಲ್ಲಾಹನ ಅನುಗ್ರಹಗಳನ್ನು ಸೆಳೆಯುವಂತಹ ಬಹಳ ದೊಡ್ಡ ತ್ಯಾಗವಾಗಿದೆ. ಬಂದ ಹಣವನ್ನು ಪ್ರಾಮಾಣಿಕವಾಗಿ ಕೊಟ್ಟರು. ಅವರ ಆವಶ್ಯಕತೆಗಳು ಸಹ ಇರುತ್ತವೆ. ಆದರೆ ಅದನ್ನು ತನಗಾಗಿ ಇರಿಸಲಿಲ್ಲ. ಬದಲಾಗಿ ಬೇಗನೇ ಬಂದು ಚಂದಾವಾಗಿ ಕೊಟ್ಟರು. ಒಂದು ದಿರ್ಹಂ ಒಂದು ಲಕ್ಷ ದಿರ್ಹಮ್‌ಗಿಂತ ಮೇಲಾಗುವಂತಹ ಉದಾರಹರಣೆಗಳು ಇವೇ ಆಗಿವೆ.

ಖಂಡಿತವಾಗಿಯೂ ಅಲ್ಲಾಹನು ಅವರ ಮೇಲೆ ತನ್ನ ಪ್ರೀತಿಯ ನೋಟವನ್ನು ಬೀರಿರಬಹುದು. ತ್ಯಾಗದ ಮಟ್ಟ ಒಂದು ಜಾಗದಲ್ಲಿ ಮಾತ್ರವಲ್ಲ, ಅದೇ ರೀತಿಯಲ್ಲಿ ಪುರುಷರಲ್ಲಿ ಮಾತ್ರವಲ್ಲ ಸ್ತ್ರೀಯರಲ್ಲೂ ಕಾಣಬಹುದಾಗಿದೆ.

ಚಾಡ್ ಎಂಬ ದೇಶದಲ್ಲೂ ಅಲ್ಲಾಹನ ಅನುಗ್ರಹದಿಂದ ಬಹಳ ನಿಷ್ಠಾವಂತರು ಜಮಾಅತಿನಲ್ಲಿ ಉಂಟಾಗುತ್ತಿದ್ದಾರೆ. ಚಾಡ್ ಜಮಾಅತಿನ ಹೆಚ್ಚಿನವರು ನವ ಅಹ್ಮದಿಯರು ಆಗಿರುವರು. ಮುಬಲ್ಲಿಗ್ ಹೇಳುತ್ತಾರೆ: ಉಮ್ಮೀ ಹಾನಿ ಎಂಬ ಹೆಸರಿನ ಮಹಿಳೆ 70 ಸಾವಿರ ಫ್ರಾಂಕಿನ ವಾಗ್ದಾನವನ್ನು ವಖ್ಫೇ ಜದೀದಿಗಾಗಿ ನೀಡಿದರು. ಅದನ್ನು ಈಡೇರಿಸುವ ಏರ್ಪಾಡು ಆಗಲಿಲ್ಲ. ಅವರ ಬಳಿ ಒಂದು ಒಂಟೆಯಿತ್ತು. ಆ ಒಂಟೆಯನ್ನು ಒಂದು ಲಕ್ಷ 70 ಸಾವಿರ ಫ್ರಾಂಕಿಗೆ ಮಾರಾಟ ಮಾಡಿದರು ಮತ್ತು ವಖ್ಫೇ ಜದೀದಿನ ವಾಗ್ದಾನವನ್ನು ಈಡೇರಿಸಿದರು. ಉಳಿದ ಹಣವನ್ನು ತನ್ನ ಬಳಿ ಇರಿಸಲಿಲ್ಲ. ಬೇರೆ ಬೇರೆ ಚಂದಾಗಳಲ್ಲಿ ನೀಡಿದರು.

ಟೋಗೊ ದೇಶದ ಒಬ್ಬ ಅಹ್ಮದಿಯಾದ ಇಬ್ರಾಹೀಮರು ಜನರ ಆಡು ದನ ಇತ್ಯಾದಿಗಳನ್ನು ಮೇಯಿಸುತ್ತಾರೆ. ಬರುವ ಆದಾಯದಿಂದ ಬಹಳ ಉತ್ಸಾಹದಿಂದ ತ್ಯಾಗವನ್ನು ಮಾಡುತ್ತಾರೆ. ಅಲ್ಲಿ ಅವರು ಚಂದಾದ ವಾಗ್ದಾನ ಮಾಡಿದರು. ಆದರೆ ವಾಗ್ದಾನವನ್ನು ಈಡೇರಿಸಲು ಸಾಧ್ಯವಾಗಲಿಲ್ಲ. ಸಮೀಪದಲ್ಲೇ ನದಿಯಿದೆ. ನದಿಯಿಂದ ಮರಳು ತೆಗೆಯಲಾಗುತ್ತದೆ. ಅವರು ರಾತ್ರಿ ಸಮಯದಲ್ಲಿ ಎರಡು ಟ್ರಕ್ ಮರಳನ್ನು ತುಂಬಿಸಿ ಅದರಿಂದ ಆದ

ಆಮದನ್ನು ವಖ್ಫೇ ಜದೀದಿನ ಚಂದಾವಾಗಿ ನೀಡಿದರು. ಅವರು ಏಕೆ ಇಷ್ಟು ಪರಿಶ್ರಮ ಪಟ್ಟರು. ಇಷ್ಟು ಪರಿಶ್ರಮದ ನಂತರ ಲಭಿಸಿದ ಹಣದಿಂದ ಏನನ್ನೂ ತನಗಾಗಿ ಇರಿಸಲಿಲ್ಲ. ಅಲ್ಲಾಹನ ಸಂಪ್ರೀತಿ ಲಭಿಸುವುದರ ಅರಿವು ಅವರಿಗೆ ಇರುವ ಕಾರಣದಿಂದ ಹಾಗೆ ಮಾಡಿದರು.

ಈ ತ್ಯಾಗದ ಮಟ್ಟ ಪುರುಷರು, ಸ್ತ್ರೀಯರು, ಹಿರಿಯರಲ್ಲಿ ಮಾತ್ರವಲ್ಲ, ಬದಲಾಗಿ ಯೌವ್ವನಕ್ಕೆ ಹೆಜ್ಜೆ ಹಾಕುತ್ತಿರುವ ಬಾಲಕರದ್ದೂ ಇದೇ ಸ್ಥಿತಿಯಾಗಿದೆ.

ಬೇಲೀಸ್ ಎಂಬುದು ಸೆಂಟ್ರಲ್ ಅಮೇರಿಕದ ಒಂದು ದೇಶವಾಗಿದೆ. ಇಲ್ಲಿಂದ ಅದು ಸಾವಿರಾರು ಮೈಲುಗಳಷ್ಟು ದೂರವಿದೆ. ಅಲ್ಲಿಗೆ ಎಂದಿಗೂ ಖಲೀಫರು ಹೋಗಿಲ್ಲ. ಎಲ್ಲರೂ ನವ ಅಹ್ಮದಿಯರು. ಆದರೆ ಅವರ ಯೋಚನೆ ಒಂದಾಗಿದೆ.

ಆಫ್ರಿಕದಾದರೂ ಅಮೇರಿಕದಾದರೂ ದ್ವೀಪವಾಸಿಗಳಾದರರೂ ಏಶ್ಯಾದ್ದಾದರೂ ಒಂದೇ ಯೋಚನೆ. ಇದು ಹಝ್ರತ್ ಮಸೀಹ್ ಮೌಊದ್(ಅ) ಉಂಟುಮಾಡಿದ ಪರಿವರ್ತನೆಯಾಗಿದೆ. ಘಟನೆ ಹೀಗಿದೆ: 14 ವರ್ಷ ಪ್ರಾಯದ ಒಬ್ಬ ಬಾಲಕನಿದ್ದಾನೆ. ಅವನು ತಹ್ರೀಕ್ ಜದೀದಿನ ಚಂದಾ ನೀಡಿದನು. ಅವನ ಬಗ್ಗೆ ನಾನು ಪ್ರಸ್ತಾಪಿಸಿದ್ದೆ. ಆಗ ಜನರು ಅವನಿಗೆ ಶುಭಾಶಯ ಕೋರಿದರು. ಕೆನಡದಿಂದ ಯಾರೋ ಒಬ್ಬರು ಅವನಿಗೆ 200 ಡಾಲರ್ ಕೊಡುಗೆಯಾಗಿ ಸಹ ಕೊಟ್ಟರು. ನೀನು ಮಾಡಿದ ತ್ಯಾಗಕ್ಕೆ ನನ್ನ ಕೊಡುಗೆ ಎಂದು ಹೇಳಿದರು. ಈಗ ಆ ಬಾಲಕನ ಸ್ಥಿತಿ ನೋಡಿರಿ. 14ನೇ ವಯಸ್ಸಿಗೆ ಹೆಜ್ಜೆ ಹಾಕುವ ಯುವ ಬಾಲಕ. ಈ ವಯಸ್ಸಿನಲ್ಲಿ ಇಲ್ಲಾದರೋ ಬೇಗನೇ ಗೇಮ್‌ಗಳನ್ನು ಖರೀದಿ ಮಾಡುವ ಅಭಿರುಚಿ ಇರುತ್ತದೆ. ಅವನು ತನ್ನ ಸೋಶಿಯಲ್ ಸೆಕ್ಯೂರಿಟಿ ಗಾರ್ಡಿಗೆ ಮುವತ್ತು ಡಾಲರ್ ಇರಿಸಿದನು. ಉಳಿದ 170 ಡಾಲರ್ ಚಂದಾವಾಗಿ ನೀಡಿದನು. ಬಡ ಮನೆತನದ ಹುಡುಗ. ಅವನೊಡನೆ ಅದನ್ನು ತನ್ನ ಆವಶ್ಯಕತೆಗಾಗಿ ಇರಿಸಲು ಒತ್ತಾಯಿಸಲಾಗಿತ್ತು. ಆದರೆ ಅವನು ಅವನು ಅದನ್ನೆಲ್ಲ ಚಂದಾವಾಗಿ ನೀಡಿದನು. ಇದಾಗಿದೆ ದೀನಿಗೆ ಭೌತಿಕತೆ ಮೇಲೆ ಆದ್ಯತೆ ನೀಡುವುದು. ಅಲ್ಲಾಹನು ಈ ಚಿಂತೆ ಅವನಲ್ಲಿ ಸದಾ ನೆಲೆನಿಲ್ಲಿಸಲಿ. ಈ ಲೌಕಿಕ ವಾತಾವರಣದಿಂದ ಅಲ್ಲಾಹನು ಆ ಬಾಲಕನನ್ನು ರಕ್ಷಿಸಲಿ.

ಜಮೈಕ ದೇಶದ ಒಬ್ಬ ಯುವಕ. ಅವನ ಹೆಸರು ಯಾಸೀನ್ ಎಂದಾಗಿದೆ. ದೀರ್ಘಕಾಲದಿಂದ ನಿರುದ್ಯೋಗಿಯಾಗಿದ್ದನು. ಗಲ್ಲಿಗಳಲ್ಲಿ ಸಣ್ಣಮಟ್ಟ ವಸ್ತುಗಳಾದ ಟಾಫಿ, ಚಾಕ್ಲೇಟ್ ಇತ್ಯಾದಿಗಳನ್ನು ಮಾರಾಟ ಮಾಡಿ ಜೀವನ ಸಾಗಿಸುತ್ತಿದ್ದರು. ಈ ಅವಸ್ಥೆಯಲ್ಲೂ ಧನತ್ಯಾಗ ಮಾಡುವುದರ ಚಿಂತೆ ಅವರಿಗೆ ಇತ್ತು. ವಖ್ಫೇ ಜದೀದಿನ ಚಂದಾದ ವಾಗ್ದಾನ ಮಾಡಿದ್ದೇನೆ, ವರ್ಷ ಕೊನೆಗೊಳ್ಳುತ್ತಿದೆ. ತನ್ನ ಬಳಿ ಏನೂ ಇಲ್ಲವೆಂಬ ಚಿಂತೆಯಿತ್ತು ಅವನಿಗೆ. ಕೊನೆಗೆ ಒಂದು ದಿನ ಸಂಜೆ ಡಿಸೆಂಬರಿನ ಕೊನೆಗೆ ಮಿಶನರಿ ಬಳಿಗೆ ಬಂದು ಹೇಳಿದನು: ಇಂದು ನನಗೆ ನಾನ್ನೂರು ಜಮೈಕನ್ ಡಾಲರಿನ ಆದಾಯ ಆಗಿದೆ. ಅದರಿಂದ ಶೇಕಡಾ 25 ತೆಗೆದು ನೂರು ಡಾಲರ್ ನಿಮಗೆ ವಖ್ಫೇ ಜದೀದ್ ಚಂದಾವಾಗಿ ನೀಡುತ್ತೇನೆ.

ಇನ್ನೊಂದು ಬಡದೇಶದ ಅಹ್ಮದಿಯ ನಿಷ್ಠೆ, ಪ್ರಾಮಾಣಿಕತೆ ಮತ್ತು ಅಲ್ಲಾಹನ ಸಂಪ್ರೀತಿ ಮತ್ತು ಸ್ನೇಹದ ಅಸಾಮಾನ್ಯ ಉದಾಹರಣೆ ನೋಡಿರಿ. ಇವರು ಅವಿದ್ಯಾವಂತರು ಎಂದು ಜನರು ಹೇಳುತ್ತಾರೆ. ಆದರೆ ಅವರು ವಿದ್ಯಾವಂತರಿಗಿಂತ ಹೆಚ್ಚು ಧರ್ಮದ ಅರಿವನ್ನು ಹೊಂದಿರುವರು ಮತ್ತು ಹೃದಯದ ಸಿರಿವಂತರಾಗಿರುವರು.

ಗಿನಿಕನಾಕರಿಯ ಮುಬಲ್ಲಿಗ್ ಇಂಚಾರ್ಜ್ ಬರೆಯುತ್ತಾರೆ: ವಖ್ಫೇ ಜದೀದಿನ ಆರ್ಥಿಕ ವರ್ಷದ ಕೊನೆಯ ಹತ್ತು ದಿವಸದಲ್ಲಿ ವಖ್ಫೇ ಜದೀದಿನ ಪ್ರಾಮುಖ್ಯತೆ ಮತ್ತು ಅನುಗ್ರಹಗಳ ಬಗ್ಗೆ ಖುತ್ಬ ನೀಡಿದೆ. ನಾನು ನೀಡಿದ ಅನೇಕ ಖುತ್ಬಗಳಿಂದ ಉಲ್ಲೇಖಗಳನ್ನು ನೀಡಿ ಜಮಾಅತನ್ನು ಉಪದೇಶಿಸಿದೆ. ಧನತ್ಯಾಗದ ಬಗ್ಗೆ ಗಮನ ಸೆಳೆದೆ. ಖುತ್ಬದ ಕೊನೆಯಲ್ಲಿ ಒಬ್ಬ ಬಡ ಆದರೆ ಅತ್ಯಂತ ನಿಷ್ಠಾವಂತ ಅಹ್ಮದಿಯಾದ ಮೂಸಾ ಸಾಹಿಬ್‌ರು ತನ್ನ ಜೇಬಿನಲ್ಲಿದ್ದ ಸುಮಾರು 2 ಲಕ್ಷ 18 ಸಾವಿರ 500 ಫ್ರಾಂಕ್ ಗಿನಿಕನಾಕುರಿ ಹೊರತೆಗೆದು ವಖ್ಫೇ ಜದೀದ್ ಚಂದಾವಾಗಿ ಪಾವತಿ ಮಾಡಿದರು. ನೀವು ಹೆಚ್ಚು ಹಣ ಕೊಟ್ಟಿದ್ದೀರಿ, ಕಳೆದ ವರ್ಷ ಸಹ ಹೆಚ್ಚು ಹಣ ಕೊಟ್ಟಿದ್ದೀರಿ. ಇದಕ್ಕೆ ಕಾರಣವೇನೆಂದು ನಾನು ಕೇಳಿದಾಗ ಅವರು ಹೇಳಿದರು: ಒಂದು ಹೃದಯದಲ್ಲಿ ಎರಡು ಸ್ನೇಹಗಳು ಇರಲು ಸಾಧ್ಯವಿಲ್ಲವೆಂಬ ಖಲೀಫತುಲ್ ಮಸೀಹ್‌ರ ಮಾತು ನನ್ನ ಹೃದಯದಲ್ಲಿ ನೆಲೆಯೂರಿದೆ. ಒಂದೋ ದೇವನೊಂದಿಗೆ, ಇಲ್ಲದಿದ್ದರೆ ಸಂಪತ್ತಿನೊಂದಿಗೆ. ಆದ್ದರಿಂದ ನನ್ನ ಕೃತ್ಯಗಳಿಂದಲೂ ಇದನ್ನು ಪ್ರಕಟಿಸಲು ನನಗೆ ಸಂದರ್ಭ ಸಿಗುವಾಗ ಪ್ರಯತ್ನಿಸುತ್ತೇನೆ. ಮನೆಯ ಎಲ್ಲ ಸಂಪತ್ತನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿದ ಹಝ್ರತ್ ಅಬೂಬಕರ್(ರ)ರ ವಿಶ್ವಾಸದಂತೆ ನನ್ನ ವಿಶ್ವಾಸ ಆಗಲು ಸಾಧ್ಯವಿಲ್ಲ. ಆದರೆ ಜೇಬಿನಲ್ಲಿರುವ ಎಲ್ಲ ಹಣವನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಲು ಸಾಧ್ಯವಿದೆ. ಅಲ್ಲಾಹನು ನನಗೆ ಹಝ್ರತ್ ಅಬೂಬಕರ್‌ರಂತಹ(ರ) ವಿಶ್ವಾಸವನ್ನು ನೀಡಲು ದುಆ ಮಾಡಲು ಸಹ ಅವರು ವಿನಂತಿಸಿದರು. ಅವರು ಹೇಳಿದರು: ಇನ್ನೊಂದು ಕಾರಣವೇನೆಂದರೆ, ನಾನು ಧನತ್ಯಾಗದಲ್ಲಿ ಭಾಗಿಯಾಗಲು ಶುರುವಾಗಿನಿಂದ ಅಲ್ಲಾಹನು ನನಗೆ ವಿಶ್ವಾಸದ ಸಂಪತ್ತಿನಿಂದ ನನ್ನನ್ನು ತುಂಬಿಸಿದ್ದಾನೆ. ನನ್ನ ವಿಶ್ವಾಸದಲ್ಲಿ ವರ್ಧನೆಯುಂಟಾಗಲು ಶುರುವಾಗಿದೆ. ನನ್ನಲ್ಲಿ ಅಸಾಧಾರಣವಾದ ಪರಿವರ್ತನೆ ಉಂಟಾಗಿದೆ. ಈ ಚಿಂತೆ ಮತ್ತು ಅರಿವು ಅನೇಕ ವಿದ್ಯಾವಂತರಲ್ಲೂ ಇರುವುದಿಲ್ಲ.

ಅಲ್ಲಾಹನು ವಿಶ್ವಾಸದಲ್ಲಿ ವರ್ಧಿಸಲು ಹೇಗೆ ಏರ್ಪಾಡು ಮಾಡುತ್ತಾನೆ ಎಂಬುದರ ಒಂದು ಘಟನೆಯಿದೆ.

ಗಿನಿಕನಾಕುರಿ ದೇಶದ ಒಬ್ಬ ನಿಷ್ಠಾವಂತ ಶ್ರೀಮಂತ ಅಹ್ಮದಿಯಾದ ಅಲ್‌ಹಸನ್ ಸಾಹಿಬ್ ಹೇಳುತ್ತಾರೆ: ನಾನು ಚಂದಾದ ಹಣವನ್ನು ಒಂದು ಕವರಿನಲ್ಲಿ ಹಾಕಿ ನನ್ನ ಟೇಬಲಿನಲ್ಲಿ ಇರಿಸಿದೆ. ಬಿಸಿನಸ್‌ನಲ್ಲಿ ನಿರತನಾದ ಕಾರಣದಿಂದ ಅದನ್ನು ಮಿಶನ್ ಹೌಸಿಗೆ ಕಳುಹಿಸಲು ಸಾಧ್ಯವಾಗಲಿಲ್ಲ. ಅಚಾನಕ್ಕಾಗಿ ನೆನಪಾದಾಗ ಆ ಹಣವನ್ನು ಮಿಶನ್ ಹೌಸಿಗೆ ತಲುಪಿಸಲು ನನ್ನ ಡ್ರೈವರಿಗೆ ಕೊಟ್ಟೆ. ಹೀಗೆ ನಾನು ನನ್ನ ಕೆಲಸಕ್ಕೆ ಸಂಬಂಧಪಟ್ಟು ಹೊರಗೆ ಹೋದೆನು. ಅದೇ ವೇಳೆ ಅವರ ನೆರೆಕರೆಯಲ್ಲಿರುವ ಆಫೀಸಿಗೆ ಬೆಂಕಿ ತಗುಲಿತು. ಅದು ಸುಟ್ಟು ಬೂದಿಯಾಯಿತು. ನಿನ್ನ ಆಫೀಸಿಗೆ ಬೆಂಕಿ ತಗುಲಿದೆ ಎಂದು ನನಗೆ ಫೋನ್ ಬರಲು ಶುರುವಾಯಿತು. ನಾನು ಬೇಗನೇ ಅಲ್ಲಿಗೆ ತಲುಪಿದೆ. ನಾನು ಅಲ್ಲಾಹನ ಮಾರ್ಗದಲ್ಲಿ ತ್ಯಾಗಮಾಡುವವನಾಗಿದ್ದೇನೆ. ಇದು ಹೇಗೆ ಆಗಲು ಸಾಧ್ಯವೆಂದು ನಾನು ಮನಸ್ಸಲ್ಲಿ ಯೋಚಿಸುತ್ತಿದ್ದೆ. ಆದರೆ ಅಲ್ಲಾಹನ ದೃಷ್ಟಾಂತವನ್ನು ನೋಡಿರಿ. ನನ್ನ ಆಫೀಸಿನ ಗೋಡೆ ನೆರೆಕರೆ ಆಫೀಸಿಗೆ ಸೇರಿಕೊಂಡಿದ್ದರೂ ನನ್ನ ಆಫೀಸ್ ಸಂಪೂರ್ಣವಾಗಿಯೂ ಸುರಕ್ಷಿತವಾಗಿತ್ತು. ನನ್ನ ಆಫೀಸಿನಲ್ಲಿ ಆ ಸಮಯದಲ್ಲಿ ಕಂಪೆನಿಯ ಬಹಳಷ್ಟು ಹಣವು ಇತ್ತು. ಅದಕ್ಕೆ ಸೇರಿಕೊಂಡಿದ್ದ ಎರಡು ಆಫೀಸ್‌ಗಳು ಸುಟ್ಟುಹೋಯಿತು. ಇದು ಚಂದಾದ ಅನುಗ್ರಹವಾಗಿದೆ ಎಂದು ನನಗೆ ತಕ್ಷಣ ಅನಿಸಿತು. ಅವರಿಗೆ ಅರಿವು ಸಹ ಇದೆ. ಅರಿವು ಇಲ್ಲದವರಲ್ಲ. ಅವರು ಹೇಳುತ್ತಾರೆ: ಬೆಂಕಿ ನಿನ್ನ ಗುಲಾಮ. ಮಾತ್ರವಲ್ಲ ನಿನ್ನ ಗುಲಾಮರ ಗುಲಾಮ ಎಂಬ ಹಝ್ರತ್ ಮಸೀಹ್ ಮೌಊದ್(ಅ)ರ ದಿವ್ಯವಾಣಿ ಕಡೆಗೂ ನನ್ನ ಯೋಚನೆ ಹೋಯಿತು. ಹೇಗಿದ್ದರೂ ಈ ರೀತಿಯಲ್ಲಿ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ)ರ ಒಬ್ಬ ಕಿರಿಯ ಗುಲಾಮನನ್ನು ನಷ್ಟದಿಂದ ಸುರಕ್ಷಿತಗೊಳಿಸಿದನು.

ಮತ್ತೊಂದು ಘಟನೆಯನ್ನು ಗ್ಯಾಂಬೀಯದ ಅಮೀರ್ ಸಾಹಿಬ್‌ರು ಹೇಳುತ್ತಾರೆ: ನಮ್ಮ ಜಮಾಅತಿನ ಒಬ್ಬ ಸಹೋದರನಾದ ಸಂಬೂಬ ಸಾಹಿಬ್ ಎಂಬವರು ವಖ್ಫೇ ಜದೀದಿನ ಕಳೆದ ವರ್ಷದ ಖಲೀಫತುಲ್ ಮಸೀಹ್‌ರ ಖುತ್ಬವನ್ನು ಆಲಿಸಿದಾಗ ಅವರು 500 ಡಿಲಾಸಿ ಪಾವತಿ ಮಾಡಿದ್ದರು. ಇದರಿಂದ ಅವರ ಮೇಲೆ ಎಂತಹ ಅನುಗ್ರಹವಾಯಿತು ಎಂದರೆ ಈ ವರ್ಷ ಅವರ ಫಸಲು ದುಪ್ಪಟ್ಟಾಯಿತು. ಆಗ ತನ್ನ ವಾಗ್ದಾನದ 500 ಡಿಲಾಸಿಗೆ ಬದಲಾಗಿ 1000 ಡಿಲಾಸಿ ಪಾವತಿ ಮಾಡಿದರು. ಫಸಲಿನ ಝಕಾತ್ ಮೊತ್ತವನ್ನು ಕೂಡ ಪಾವತಿ ಮಾಡಿದರು. ಅಹ್ಮದಿಯೇತರ ಸಹೋದರರು ಕೂಡ ಹೀಗೆ ಹೇಳುತ್ತಾರೆ: ಅಹ್ಮದಿಯಾ ಜಮಾಅತಿನಲ್ಲಿ ಏನೋ ಇದೆ. ಅಹ್ಮದಿಯರು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವಾಗಲೆಲ್ಲ ಅವರ ಫಸಲಿನ ಉತ್ಪಾದನೆ ವರ್ಧಿಸುತ್ತದೆ.

ಆಫ್ರಿಕದ ಬಡ ದೇಶದ ಅಹ್ಮದಿಯರು ಮತ್ತು ನವ ಅಹ್ಮದಿಯರ ಘಟನೆಗಳು ಮಾತ್ರವಲ್ಲ, ಶ್ರೀಮಂತ ದೇಶಗಳ ಸತ್ಯವಿಶ್ವಾಸದ ಅನುಗ್ರಹ ಲಭಿಸಿದ ಪ್ರಾದೇಶಿಕ ಜನರ ತ್ಯಾಗಗಳ ಉದಾಹರಣೆಗಳೂ ಸಹ ಇವೆ.

ಜರ್ಮನಿಯ ಮುಬಲ್ಲಿಗ್ ಸಾಹಿಬ್‌ರು ಬರೆಯುತ್ತಾರೆ: ರೂಡರ್‌ಝುಹಾಇಮ್ ಜಮಾಅತಿನಲ್ಲಿ ಚಂದಾ ವರ್ಧಿಸುವುದರ ಮತ್ತು ತಮ್ಮ ಕೊರತೆಗಳನ್ನು ದೂರ ಮಾಡುವುದರ ಬಗ್ಗೆ ಉಪದೇಶಿಸಲಾಗಿತ್ತು. ಆಗ ಜರ್ಮನಿಯ ಅಹ್ಮದಿ ಮಹಿಳೆಯೊಬ್ಬಳು 19 ಸಾವಿರ ಯೂರೋ ಪಾವತಿ ಮಾಡಿದರು. ಅವರು ಹೇಳಿದರು: ಇದನ್ನು ನಾನು ಕಾರು ಖರೀದಿ ಮಾಡಲು ಇರಿಸಿದ್ದೆ. ಆದರೆ ನಮ್ಮ ಜಮಾಅತಿನ ಹೆಸರು ಖಲೀಫತುಲ್ ಮಸೀಹ್‌ರ ಮುಂದೆ ಬರಲಿ ಮತ್ತು ಅಲ್ಲಾಹನ ಸಂಪ್ರೀತಿ ಲಭಿಸುವಂತಾಗಲಿ ಎಂಬ ಆವೇಶ ನನಗೆ ಉಂಟಾಯಿತು. ಆದ್ದರಿಂದ ಇದನ್ನು ಕೊಡುತ್ತಿದ್ದೇನೆ.

ಅದೇ ರೀತಿಯಲ್ಲಿ ಜರ್ಮನಿಯಿಂದಲೇ ಒಬ್ಬ ವಿದ್ಯಾರ್ಥಿ 500 ಯೂರೋದ ವಾಗ್ದಾನ ಬರೆಸಿದರು. ನೀನು 500 ಯುರೋ ಹೇಗೆ ಪಾವತಿ ಮಾಡುವಿಯಾ ಎಂದು ಅವರ ತಂದೆತಾಯಂದಿರು ಕೇಳಿದರು. ಹೇಗಿದ್ದರೂ ನಾನು ಅದನ್ನು ಪಾವತಿ ಮಾಡುತ್ತೇನೆ ಎಂದು ಹೇಳಿದನು. ಇದರ ಉತ್ತರ ಬೇಗನೇ ಅಲ್ಲಾಹನ ಕಡೆಯಿಂದ ಹೇಗೆ ಲಭಿಸಿತ್ತು ಎಂದರೆ, ಒಂದು ವಾರದೊಳಗೆ ನನಗೆ ಯೂನಿವರ್ಸಿಟಿಯಿಂದ ಹೀಗೆ ಫೋನ್ ಕರೆ ಬಂತು: ನಾವು 40 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿದ್ದೇವೆ. ಅವರಿಗೆ

ಯೂನಿವರ್ಸಿಟಿ ವತಿಯಿಂದ ವಿದ್ಯಾರ್ಥಿ ವೇತನ ಲಭಿಸುವುದು. ವೇತನ ಕಳುಹಿಸಲಿಕ್ಕಾಗಿ ನಿನ್ನ ಅಕೌಂಟ್ ನಂಬರ್ ಕಳುಹಿಸು. ಅದು 1000 ಯೂರೋ ಆಗಿತ್ತು. ಅಲ್ಲಾಹನು ಅದನ್ನು ದುಪ್ಪಟ್ಟು ಮಾಡಿ ಕೊಟ್ಟನು.

ಯು.ಕೆ.ಯ ಒಂದು ಉದಾಹರಣೆಯಿದೆ. ನಮ್ಮ ಬಾಲಮ್ ಬೇಗ್ ಸಾಹಿಬ್‌ರ ವಖ್ಫೇ ಜದೀದ್ ಟಾರ್ಗಟಿನಲ್ಲಿ ಸ್ವಲ್ಪ ಕೊರತೆಯಿತ್ತು. ಮತ್ತೊಂದು ಕಡೆ ಸರ್ವಿಸ್ ಚಾರ್ಜಸಿನ ವತಿಯಿಂದ ಒಂದು ಪತ್ರ ಬಂದಿತ್ತು. ಅಲ್ಲೂ ಹೆಚ್ಚು ಹಣ ಕೊಡಬೇಕಾಗಿತ್ತು. ಹೀಗೆ ಮೊದಲು ವಖ್ಫೇ ಜದೀದಿನ ಚಂದವನ್ನು ಪಾವತಿ ಮಾಡಿದೆ. ಅದರ ಮರುದಿನವೇ ಕ್ಷಮೆ ಕೋರಿ ಕೌನ್ಸಿಲ್‌ರಿಂದ ಪುನಃ ಪತ್ರ ಬಂತು. ನಾವು ಹಣವನ್ನು ಡಿಮಾಂಡ್ ಮಾಡಿ ಕಳುಹಿಸಿದ ಪತ್ರ ತಪ್ಪಾಗಿ ಬಂದಿತ್ತು. ಎಡ್‌ಜಸ್ಟ್‌ಮೆಂಟ್ ನಂತರ ಸತ್ಯದಲ್ಲಿ ಹಣ ಕೊಡಬೇಕಾದದ್ದು ನೀವಲ್ಲ, ಬದಲಾಗಿ ನಾವು ನಿಮಗೆ ಕೊಡಬೇಕಾಗಿದೆ. ಬೇಗ್ ಸಾಹಿಬ್‌ರು ಹೇಳುತ್ತಾರೆ: ಅದು ನಾನು ಪಾವತಿ ಮಾಡಿದ ವಖ್ಫೇ ಜದೀದ್ ಚಂದಾದ ಹತ್ತು ಪಟ್ಟು ಅಧಿಕವಾಗಿತ್ತು. ಈ ರೀತಿಯಲ್ಲಿ ಅಲ್ಲಾಹನು ವಿಶ್ವಾಸವನ್ನು ಸುದೃಢಗೊಳಿಸಲಿಕ್ಕಾಗಿ ಅದನ್ನು ಮರಳಿ ನೀಡುತ್ತಾನೆ.

ಅಲ್ಲಾಹನು ಬೇಗನೇ ದಯಪಾಲಿಸುವುದರ ಒಂದು ಉದಾಹರಣೆ ಭಾರತದ ಯಾದಗೀರ ಜಮಾಅತಿನದ್ದಾಗಿದೆ. ವಖ್ಫೇ ಜದೀದಿನ ಸಾಂಪತ್ತಿಕ ವರ್ಷದ ಕೊನೆಯಲ್ಲಿ ಇನ್ಸ್‌ಪೆಕ್ಟರ್ ಸಾಹಿಬ್‌ರು ಒಬ್ಬ ಯುವಕನೊಡನೆ ವಖ್ಫೇ ಜದೀದ್ ಪಾವತಿಸುವುದರ ಬಗ್ಗೆ ಮಾತನಾಡಿದಾಗ ಯುವಕನು ಹೇಳಿದನು: ಈಗ ನನ್ನ ಜೇಬಿನಲ್ಲಿ ಸಾವಿರದ ಐನೂರು ರೂಪಾಯಿ ಮಾತ್ರವಿದೆ. ಅದನ್ನು ಒಬ್ಬನಿಗೆ ಕೊಡಲೇ ಬೇಕಾಗಿದೆ. ನಾನು ನಿಮಗೆ ಚಂದಾ ಪಾವತಿ ಮಾಡಿದರೆ, ಆ ವ್ಯಕ್ತಿಗೆ ಹೇಗೆ ಕೊಡುವುದು? ಮಾತ್ರವಲ್ಲ ಈಗ ಹೆಚ್ಚಿನ ಹಣದ ಏರ್ಪಾಡು ಬೇಗನೇ ಮಾಡಲು ಸಾಧ್ಯವಿಲ್ಲ. ಆದರೆ ಹೇಗಿದ್ದರೂ ಆ ಯುವಕನು ಸಾವಿರದ ಐನ್ನೂರು ರೂಪಾಯಿಯ ಚಂದಾ ಪಾವತಿ ಮಾಡಿದನು. ಮರುದಿನ ಇನ್ಸ್‌ಪೆಕ್ಟರ್ ಸಾಹಿಬ್‌ರು ವಖ್ಫೇ ಜದೀದ್ ಸೆಕ್ರಟರಿಯೊಂದಿಗೆ ಆ ಯುವಕನ ಅಂಗಡಿಗೆ ಅವನನ್ನು ಭೇಟಿಯಾಗಲು ಹೋದರು. ಯುವಕನು ತನ್ನ ಜೇಬಿನಿಂದ ಹಣವನ್ನು ಹೊರತೆಗೆದಾಗ ದುಡ್ಡಿನ ರಾಶಿಯಿತ್ತು. ಯುವಕನು ಹೇಳಿದನು: ನಿನ್ನೆ ನಾನು ಚಂದಾ ಪಾವತಿ ಮಾಡಿ ಮನೆಗೆ ತಲುಪಿದಾಗ ಜನರು ನನಗೆ ಕೊಡಬೇಕಾಗಿದ್ದ, ಆದರೆ ಇಷ್ಟರ ವರೆಗೆ ಕೊಡದೇ ಇದ್ದವರಿಂದ ನನಗೆ ಹಣ ಬಂದುವು. ಇಂದು ನನ್ನ ಬಳಿ ಅನೇಕ ಸಾವಿರ ರೂಪಾಯಿಗಳು ಇವೆ. ಹೀಗೆ ಅಲ್ಲಾಹನು ಅನುಗ್ರಹ ವರ್ಷಿಸಿದನು.

ಅದೇ ರೀತಿಯಲ್ಲಿ ಶ್ರೀಮಂತರೂ ಇರುವರು. ಅವರು ಲೌಕಿಕರ ದೃಷ್ಟಿಯಲ್ಲಿ ಅಷ್ಟು ಶ್ರೀಮಂತರಲ್ಲ. ಆದರೆ ಜಮಾಅತಿನ ಮಟ್ಟದಲ್ಲಿ ಶ್ರೀಮಂತರಾಗಿರುವರು. ಕರುಳಾಯಿ ಜಮಾಅತಿನ ಒಬ್ಬ ಸಹೋದರನು ಹತ್ತು ಲಕ್ಷ ರೂಪಾಯಿಗಳ ಚಂದಾ ನೀಡಿದರು. ಅವರ ಪತ್ನಿ ಕ್ರೈಸ್ತಧರ್ಮದಿಂದ ಅಹ್ಮದಿಯ್ಯತಿಗೆ ಬಂದಿದವರಾಗಿದ್ದರು. ದುಆ ಮತ್ತು ನಮಾಝಿನಲ್ಲಿ ಬಹಳ ಅಭಿರುಚಿಯನ್ನು ಹೊಂದಿರುವ ಬಹಳ ನಿಷ್ಠವಂತೆ. ಪತಿ ಪತ್ನಿ ಇಬ್ಬರೂ ವಸಿಯ್ಯತ್ ಸಹ ಮಾಡಿರುವರು. ಚಂದಾ ವಸೂಲಿ ಮಾಡಲು ಹೋದವರು ಹೇಳುತ್ತಾರೆ: ನಾವು ಅವರ ಮನೆಗೆ ಹೋದೆವು. ಅವರ ಪತ್ನಿ ಐದು ಲಕ್ಷ ರೂಪಾಯಿಯ ಚೆಕ್ ಮುರಿದು ಕೊಟ್ಟರು. ಇನ್ಸ್‌ಪೆಕ್ಟರ್ ಸಾಹಿಬ್‌ರು ಹೇಳಿದರು: ನಿಮ್ಮ ಪತಿ ಮೊದಲೇ ಹತ್ತು ಲಕ್ಷ ನೀಡಿಯಾಗಿದೆ. ಹೀಗಿರುವಾಗ ಪುನಃ ನೀವೇಕೆ ಕೊಡುತ್ತಿದ್ದೀರಿ? ಆಗ ಆ ಮಹಿಳೆಯ ಉತ್ತರ ಹೀಗಿತ್ತು: ನಮಗೆ ಲಭಿಸಿರುವ ವರದಾನಗಳು ಚಂದಾದ ಅನುಗ್ರಹಗಳಿಂದ ಲಭಿಸಿವೆ. ಆದ್ದರಿಂದ ಪದೇ ಪದೇ ಚಂದಾ ನೀಡಲು ಮನಸ್ಸಾಗುತ್ತದೆ. ಅದರ ಅನುಗ್ರಹದಿಂದ ನಮ್ಮ ವ್ಯಾಪಾರದಲ್ಲಿ ಅಭಿವೃದ್ಧಿ ಲಭಿಸುತ್ತಿದೆ. ಆದ್ದರಿಂದ ನಾವು ಚಂದಾ ಪಾವತಿಯಿಂದ ಎಂದಿಗೂ ಹಿಂದೆ ಸರಿಯಲಿಕ್ಕಿಲ್ಲ.

ಮಾಲಿಯ ಮುಬಲ್ಲಿಗ್ ಸಾಹಿಬ್‌ರು ಬರೆಯುತ್ತಾರೆ: ಕಾಯಿ ಪಟ್ಟಣದಲ್ಲಿ ನಾವು ಜಮಾಅತಿನ ರೇಡಿಯೋ ಚಾನೆಲ್‌ನಲ್ಲಿ ಧನತ್ಯಾಗ ಮತ್ತು ವಖ್ಫೇ ಜದೀದಿನ ಪ್ರಾಮುಖ್ಯತೆ ಮತ್ತು ಉದ್ದೇಶಗಳ ವಿಷಯದಲ್ಲಿ ಒಂದು ಪ್ರೋಗ್ರಾಂ ಮಾಡಿದ್ದೆವು. ಅನಂತರ ಜಮಾಅತುಗಳಿಗೆ ಭೇಟಿಯಾದಾಗ ಎಲ್ಲ ಜಮಾಅತಿನವರು ಸಾಧ್ಯವಾದಷ್ಟು ಧನತ್ಯಾಗ ಮಾಡಿದರು. ಒಬ್ಬ ನವ ಅಹ್ಮದಿ ಹೇಳುತ್ತಾರೆ: ನಾನು ಚಂದಾದ ಬಗ್ಗೆ ಇರುವ ಪ್ರೋಗ್ರಾಮನ್ನು ಕೇಳಿದಾಗ ನನ್ನ ಬಳಿ ಹಣವಿರಲಿಲ್ಲ. ನಾನು ಕೂಡ ಅಹ್ಮದಿಯಾ ಜಮಾಅತಿಗೆ ಏನಾದರೂ ಕೊಡುವೆನು ಮತ್ತು ಇತರರಿಗಿಂತ ಹಿಂದೆ ಇರುವುದಿಲ್ಲವೆಂದು ನಾನು ತೀರ್ಮಾನಿಸಿದೆ. ನಾನು ಕಾಡಿಗೆ ಹೋದೆ ಮತ್ತು ಸಾಕಷ್ಟು ಕಟ್ಟಿಗೆಗಳನ್ನು ಒಟ್ಟುಗೂಡಿಸಿ ಅದರಿಂದ ಕಲ್ಲಿದ್ದಲು ತಯಾರು ಮಾಡಿದೆ. ಜಮಾಅತಿನ ಸಂಘ ಬಂದಾಗ ನಾನು 20 ಕಲ್ಲಿದ್ದಲಿನ ಗೋಣಿಯನ್ನು ಚಂದಾವಾಗಿ ಪಾವತಿ ಮಾಡಿದೆ. ಅದು ಸುಮಾರು 50 ಸಾವಿರ ಫ್ರಾಂಕ್ ಆಗಿತ್ತು. ನಾನು ಧನತ್ಯಾಗದಲ್ಲಿ ಭಾಗಿಯಾದೆ ಎಂಬ ಕಾರಣದಿಂದ ನಾನು ಬಹಳ ಸಂತೋಷಗೊಂಡಿದ್ದೇನೆ.

ಪೋಲೇಂಡಿನಿಂದ ಒಬ್ಬ ಸಹೋದರ ಬರೆಯುತ್ತಾರೆ: ವರ್ಷದ ಕೊನೆಯಲ್ಲಿ ಮುಬಲ್ಲಿಗ್ ಸಾಹಿಬ್‌ರು ವಖ್ಫೇ ಜದೀದ್ ಚಂದಾದ ಬಗ್ಗೆ ಹೇಳಿಕೊಟ್ಟರು. ನನ್ನ ಬಳಿ ಸುಮಾರು 100 ಝ್ಲೋತಿ ಪೋಲಿಶ್ ಕರೆನ್ಸಿ ಇತ್ತು. ಆ ದಿನ ಖಾದಿಯಾನಿನಲ್ಲಿ ಜಲ್ಸ ನಡೆಯುತ್ತಿತ್ತು. ಆ ದಿನ ಖಲೀಫತುಲ್ ಮಸೀಹ್‌ರ ಭಾಷಣವನ್ನು ಸಹ ಆಲಿಸಲಿಕ್ಕಿತ್ತು. ಮೊಬೈಲಿನ ಪ್ಯಾಕೇಜ್ ಕೊನೆಗೊಳ್ಳುತ್ತಿತ್ತು. ಖಲೀಫತುಲ್ ಮಸೀಹ್‌ರ ಭಾಷಣವನ್ನು ಖಂಡಿತ ಆಲಿಸಬೇಕು ಎಂದು ಬಯಸುತ್ತಿದ್ದೆ. ಹೇಗಿದ್ದರೂ 20 ಝ್ಲೂತಿಯ ಪ್ಯಾಕೇಜ್ ಮಾಡಿಸಿದೆ. 28 ಝ್ಲೂತಿ ತಲಾ ನನ್ನ, ನನ್ನ ಪತ್ನಿಯ ಮತ್ತು ಮಗನ ಚಂದಾ ಪಾವತಿ ಮಾಡಿದೆ. ಉಳಿದ ದಿನಗಳಲ್ಲಿ ಏನೂ ಖರೀದಿ ಮಾಡುವುದಿಲ್ಲವೆಂದೂ ಮನೆಯಲ್ಲಿರುವ ವಸ್ತುಗಳಿಂದಲೇ ದಿನ ಸಾಗಿಸುವೆವು ಎಂದು ತೀರ್ಮಾನಿಸಿದೆ. ಆದರೆ ಇನ್ನು ಹಣವಿದ್ದರೇ ಹೆಚ್ಚಿನ ಚಂದಾ ನೀಡುವ ಬಯಕೆಯಿತ್ತು. ನಾವು ದುಆ ಮಾಡಿದಾಗ ಅಲ್ಲಾಹನು ಕೃಪೆದೋರಿದನು. ಡಿಸೆಂಬರ್ 28ಗೆ ನಾನು ಕೆಲಸದಿಂದ ಮರಳಿ ಬರುತ್ತಿದ್ದಾಗ 12 ಝ್ಲೂತಿ ನನಗೆ ಕೊಡಬೇಕಾಗಿದ್ದ ಒಬ್ಬ ಸ್ನೇಹಿತನು ಭೇಟಿಯಾದನು. ಅವನು ಹೇಳಿದನು: ನನಗೆ ನೆನಪು ಇರುವುದಿಲ್ಲ. ಈಗ ಅದನ್ನು ಪಡೆಯಿರಿ. ಮನೆಗೆ ಬಂದು ಅಕೌಂಟ್ ನೋಡಿದಾಗ ವಿವಿಧ ಭಾಗಗಳಿಂದ ನನಗೆ 1290 ಝ್ಲೂತಿ ನನ್ನ ಅಕೌಂಟಿಗೆ ಬಂದಿತ್ತು. ನಾನು ಕೆಲಸ ಮಾಡುತ್ತಿದ್ದ ಫ್ಯಾಕ್ಟರಿ ಮಾಲಿಕನು ಮುಂದೆಂದೂ ಹೆಚ್ಚಿನ ಹಣವನ್ನು ಕೊಟ್ಟಿರಲಿಲ್ಲ. ಚಂದಾ ವಖ್ಫೇ ಜದೀದ್ ಕಾರಣದಿಂದ ನನ್ನ ಈ ಹಣ ನನ್ನ ಅಕೌಂಟಿನಲ್ಲಿ ಬಂದಿತು. ಹೀಗೆ ನನಗೆ 1300 ಝ್ಲೂತಿ ಲಭಿಸಿತು. ಹೀಗೆ ನಾನು 300 ಝ್ಲೂತಿ ಚಂದಾವಾಗಿ ನೀಡಿದೆ. ಬೇರೊಂದು ಅನುಗ್ರಹ ಹೀಗೆ ಉಂಟಾಯಿತು. ಅದೇನೆಂದರೆ, ನನ್ನ ಮಗನು ಕೆಲಸ ಮಾಡುತ್ತಿದ್ದ ಆಫೀಸಲ್ಲಿ ವರ್ಷದಲ್ಲಿ ಒಂದು ಸಲ ಅಕ್ಟೋಬರ್ ಅಥವಾ ನವೆಂಬರ್ ಸಂಬಳದಲ್ಲಿ ವರ್ಧನೆ ಉಂಟಾಗುತ್ತದೆ. ಈ ವರ್ಷ ಅಕ್ಟೋಬರ್‌ನಲ್ಲಿ ಸಂಬಳದಲ್ಲಿ ವರ್ಧನೆಯುಂಟಾಗಿತ್ತು. ಆದರೆ 31 ಡಿಸೆಂಬರಿಗೆ ಪುನಃ ಸಂಬಳದಲ್ಲಿ ಹೆಚ್ಚಿನ ವರ್ಧನೆಯುಂಟಾಯಿತು. ಈ ಸಂಗತಿ ನಮ್ಮ ವಿಶ್ವಾಸ ವರ್ಧನೆಗೆ ಕಾರಣವಾಯಿತು.

ತನ್ಸಾನಿಯದ ಶಿಯಾಂಗ ರೀಜನಿನ ಒಂದು ಜಮಾಅತಿದೆ. ಅಲ್ಲಿಯ ನವ ಅಹ್ಮದಿಯರು ಮೆಲ್ಲಮೆಲ್ಲನೇ ಸಾಂಪತ್ತಿಕ ವ್ಯವಸ್ಥೆಯಲ್ಲಿ ಭಾಗಿಯಾಗುತ್ತಿದ್ದಾರೆ. ಅಲ್ಲಿಯ ಮುಅಲ್ಲಿಮ್ ಸಾಹಿಬ್‌ರು ಬರೆಯುತ್ತಾರೆ: ಒಬ್ಬ ಸಹೋದರರಾದ ರಮಝಾನ್ ಸಾಹಿಬ್ ಕಳೆದ ವರ್ಷ ಬೈಅತ್ ಮಾಡಿದ್ದರು. ಅವರು ಅವರಿಗೆ ಸಾಧ್ಯವಿದ್ದಷ್ಟು ತಹ್ರೀಕ್ ಜದೀದ್ ಮತ್ತು ವಖ್ಫೇ ಜದೀದ್ ಚಂದಾ ಬರೆಸಿದರು. ವರ್ಷದ ಕೊನೆಯಲ್ಲಿ ಅವರು ವಾಗ್ದಾನ ಮಾಡಿದಕ್ಕಿಂತ ದುಪ್ಪಟ್ಟು ಹಣ ಪಾವತಿ ಮಾಡಿದರು. ಅದೇ ರೀತಿಯಲ್ಲಿ ಬೇರೊಂದು ಸಂದರ್ಭದಲ್ಲಿ ಅವರು ತನ್ನ ಕುಟುಂಬದ ವತಿಯಿಂದ ಒಂದು ಪ್ಲಾಟ್ ಸಹ ಜಮಾಅತಿನ ಹೆಸರಲ್ಲಿ ಮಾಡಿದರು ಅಲ್ಲಿಯ ಜನರಿಗೆ ಇದು ಬಹಳ ಆಶ್ಚರ್ಯಕರವಾದ ಸಂಗತಿಯಾಗಿತ್ತು. ಈ ವ್ಯಕ್ತಿ ಅವಸರದಲ್ಲಿ ತನ್ನ ಸಂಪತನ್ನು ಧರ್ಮದ ಮಾರ್ಗದಲ್ಲಿ ಕೊಟ್ಟು ಮುಗಿಸುವನು ಎಂದು ಕೆಲವರು ಹಾಸ್ಯವಾಗಿ ಅವರೊಡನೆ ಹೇಳಿದರು. ಆದರೆ ಸತ್ಯದಲ್ಲಿ ಅಹ್ಮದಿಯಾ ಜಮಾಅತಿಗೆ ಪ್ರವೇಶಿಸಿ ಅವರಿಗೆ ಧನತ್ಯಾಗದ ಪ್ರಾಮುಖ್ಯ ಮತ್ತು ಅರ್ಥ ಗೊತ್ತಾಗಿದೆ ಎಂದು ಅವರು ಮುಅಲ್ಲಿಂ ಸಾಹಿಬ್‌ರೊಡನೆ ಹೇಳಿದರು. ಅವರು ಅಲ್ಲಾಹನ ಮಾರ್ಗದಲ್ಲಿ ತ್ಯಾಗ ಮಾಡಲು ಶುರುವಾದ ಅಂದಿನಿಂಥ ಅವರ ಕೆಲಸದಲ್ಲಿ ಬಹಳ ಅನುಗ್ರಹ ಉಂಟಾಗಿದೆ. ಜನರು ಏನೇ ಹೇಳಿದರೂ ಈ ವರ್ಷದಲ್ಲಿ ಅನೇಕ ಜಾಗಗಳಲ್ಲಿ ಅವರಿಗೆ ಹೆಚ್ಚಿನ ಪ್ಲಾಟ್‌ಗಳನ್ನು ಖರೀದಿ ಮಾಡಲು ಮತ್ತು ಎರಡು ಮನೆಗಳನ್ನು ಮಾಡಲು ಅಲ್ಲಾಹನು ಸೌಭಾಗ್ಯ ನೀಡಿದನು. ಇವೆಲ್ಲವೂ ಅಲ್ಲಾಹನ ಮಾರ್ಗದಲ್ಲಿ ತ್ಯಾಗ ಮಾಡಿದ್ದರ ಮತ್ತು ಒಂದು ಪ್ಲಾಟ್ ಜಮಾಅತಿನ ಹೆಸರಲ್ಲಿ ಮಾಡಿದ್ದರ ಅನುಗ್ರಹವಾಗಿದೆ.

ವಿಶ್ವಾಸ ಮತ್ತು ನಿಷ್ಠೆಯಲ್ಲಿ ನವ ಅಹ್ಮದಿಯರು ಹೇಗೆ ಅಭಿವೃದ್ಧಿ ಹೊಂದುತ್ತಿದ್ದಾರೆ ಎಂಬುದರ ಘಟನೆ ನೋಡಿರಿ.

ಸೀರಾಲಿಯೋನಿನ ರೀಜನ್ ಪೋರ್ಟ್ ಲೋಗೋದ ಮಿಶನರಿ ಜಿಬ್ರೀಲ್ ಸಾಹಿಬ್‌ರು ಹೇಳುತ್ತಾರೆ: ಒಂದು ನವ ಅಹ್ಮದಿ ಜಮಾಅತಿನೊಡನೆ ವಖ್ಫೇ ಜದೀದಿಗೆ ಸಂಬಂಧಿಸಿ ಹುರಿದುಂಬಿಸಲಾಯಿತು. ಅದೇ ವೇಳೆ ಕಣ್ಣು ಕಾಣದ ಒಬ್ಬ ಮುದುಕಿ ಮಹಿಳೆ ಒಬ್ಬ ಹುಡುಗನ ನೆರವಿನೊಂದಿಗೆ ನನ್ನ ಬಳಿಗೆ ಬಂದರು. ಅವರು ಹೇಳಿದರು: ನಾನು ವಾಗ್ದಾನವನ್ನು ಬರೆಸಿಲ್ಲ. ಆದರೆ 2000 ಲಿಯೋನ್ ವಖ್ಫೇ ಜದೀದ್‌ಗಾಗಿ ಕೊಡಲು ಬಂದಿದ್ದೇನೆ. ನೀವು ಸ್ವತಃ ಏಕೆ ಬಂದಿದ್ದೀರಿ. ನನ್ನನ್ನು ಕರೆದಿದ್ದರೆ ಸಾಕಿತ್ತು ಎಂದು ನಾನು ಹೇಳಿದೆ. ಆ ಅವಿದ್ಯಾವಂತ ಬಡ ಮುದುಕಿಯ ಉತ್ತರವನ್ನು

ಕೇಳಿರಿ. ಅವರು ಹೇಳಿದರು: ನಾನಂತು ಬಹಳ ಕಡಿಮೆ ಹಣವನ್ನು ಕೊಡಲು ಬಂದಿರುವೆನು. ಅದನ್ನೂ ನಿಮ್ಮನ್ನು ಮನೆಗೆ ಕರೆಸಿ ಕೊಡಬೇಕೇ? ನಾನಂತು ಸಂಪೂರ್ಣ ಪ್ರತಿಫಲವನ್ನು ಕೊಡಲು ಬಯಸುತ್ತಿದ್ದೇನೆ. ಆದ್ದರಿಂದ ಸ್ವತಃ ನಡೆದುಕೊಂಡು ಬಂದಿದ್ದೇನೆ.

ಐವರಿಕೋಸ್ಟಿನ ರೀಜನ್ ಸಾನ್‌ಪೈದರಿನ ಮುಬಲ್ಲಿಗ್ ಸಾಹಿಬ್‌ರು ಹೇಳುತ್ತಾರೆ: ರಮಝ಼ಾನಿನಲ್ಲಿ ಚಂದಾ ನೀಡುವುದು ಮತ್ತು ವರ್ಧಿಸುವುದು ಆವಶ್ಯಕವೇ ಎಂದು ವಖ್ಫೇ ಜದೀದ್ ಕುರಿತು ಜಮಾಅತಿನ ಒಬ್ಬ ಸದಸ್ಯರಾದ ಕೋಲಿಬಾಲಿ ಸಾಹಿಬ್‌ರು ಕೇಳಿದರು. ನಾನು ಹೇಳಿದೆ: ರಮಝ಼ಾನಿನಲ್ಲಿ ಹೆಚ್ಚಾಗಿ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವುದು ಹಝ಼್ರತ್ ಪೈಗಂಬರ್(ಸ)ರ ಮತ್ತು ಹಝ಼್ರತ್ ಮಸೀಹ್ ಮೌಊದ್(ಅ)ರ ರೀತಿಯಾಗಿದೆ. ವಖ್ಫೇ ಜದೀದ್ ಮತ್ತು ತಹ್ರೀಕ್ ಜದೀದಿನ ಹಣ ಹೇಗೆ ಇಸ್ಲಾಮಿನ ಪ್ರಚಾರದಲ್ಲಿ ಖರ್ಚು ಮಾಡಲಾಗುತ್ತದೆ ಎಂಬುದರ ಬಗ್ಗೆ ಸಹ ಹೇಳಿಕೊಟ್ಟೆ. ಇದು ಕಡ್ಡಾಯವಲ್ಲ. ಆಧರೆ ರಮಝ಼ಾನಿನಲ್ಲಿ ಹೆಚ್ಚಾಗಿ ಧನತ್ಯಾಗದಲ್ಲಿ ಭಾಗಿಯಾಗಬೇಕೆಂದು ಹೇಳಿದೆ. ಹೇಗಿದ್ದರೂ, ಮೊದಲೇ ಪ್ರತಿ ತಿಂಗಳು 20 ಸಾವಿರ ಫ್ರಾಂಕ್ ಚಂದಾ ಕೊಡುತ್ತಿದ್ದ ಅವರು ರಮಜ಼ಾನಿನಲ್ಲಿ ಮಾತ್ರವಲ್ಲ ಪ್ರತಿ ತಿಂಗಳು ನಿಯತವಾಗಿ ತನ್ನ ಕಳೆದ ಚಂದದೊಂದಿಗೆ 30 ಸಾವಿರ ಫ್ರಾಂಕ್ ಕೊಡುವುದಾಗಿ ವಾಗ್ದಾನ ಮಾಡಿದ್ದರು. ಅಲ್ಲಾಹನ ಅನುಗ್ರಹದಿಂದ ಅವರು ರಮಝ಼ಾನಿನ ನಂತರ ಇಲ್ಲಿಯ ವರೆಗೂ ಪ್ರತಿ ತಿಂಗಳಿನ ಆರಂಭದಲ್ಲೇ ಬಹಳ ಕಾಳಜಿಯಿಂದ ಕಡ್ಡಾಯ ಚಂದಾದ ಪಾವತಿಯನ್ನು ಮಾಡುತ್ತಾರೆ.

ಇಸ್ಲಾಮಿನ ಪ್ರಚಾರದ ಮತ್ತು ಖರ್ಚಿನ ಮಾತು ನಡೆಯುತ್ತಿದೆ. ಈ ಸಂಬಂಧವಾಗಿ ಹೇಳುವುದಾದರೆ, ಕಳೆದ ವರ್ಷ ಅಲ್ಲಾಹನು ಜಮಾಅತಿಗೆ 187 ಮಸೀದಿಗಳ ನಿರ್ಮಾಣದ ಸೌಭಾಗ್ಯ ನೀಡಿದನು. ಆಫ್ರಿಕದಲ್ಲಿ 105 ಮಸೀದಿಗಳು ನಿರ್ಮಾಣದ ಹಂತದಲ್ಲಿವೆ. ಅದೇ ರೀತಿಯಲ್ಲಿ 144 ಮಿಶನ್ ಹೌಸ್‌ಗಳ ನಿರ್ಮಾಣವಾಯಿತು. ಅದರಲ್ಲಿ ಅಧಿಕಾಂಶ ಆಫ್ರಿಕದಲ್ಲಾಗಿದೆ. 45 ಮಿಶನ್ ಹೌಸ್‌ಗಳು ನಿರ್ಮಾಣವಾಗುತ್ತಿವೆ. ಅದಲ್ಲದೇ ಎಲ್ಲಿ ಬೇಗನೇ ಮಿಶನ್ ಹೌಸ್‌ಗಳನ್ನು ನಿರ್ಮಾಣ ಮಾಡಲು ಸಾಧ್ಯವಿಲ್ಲವೋ ಅಲ್ಲಿ ಬಾಡಿಗೆಗೆ ಕಟ್ಟಡಗಳನ್ನು ಖರೀದಿ ಮಾಡಲಾಗುತ್ತದೆ. ಆಫ್ರಿಕದ ದೇಶಗಳಲ್ಲಿ 731 ಮತ್ತು ಏಶ್ಯದ ದೇಶಗಳಲ್ಲಿ 632 ಮಿಶನ್ ಹೌಸ್‌ಗಳನ್ನು ಬಾಡಿಗೆಗೆ ಪಡೆಯಲಾಗಿವೆ. ಹೇಗಿದ್ದರೂ ಸಾಮಾನ್ಯವಾಗಿ ವಖ್ಫೇ ಜದೀದಿನ ಚಂದಾದ ಹೆಚ್ಚಿನ ಪಾಲು ಆಫ್ರಿಕದ ದೇಶಗಳಲ್ಲಿ ಖರ್ಚು ಮಾಡಲಾಗುತ್ತದೆ.

ಮಸೀದಿಯ ನಿರ್ಮಾಣದ ಕೆಲಸ ಅಷ್ಟು ಸುಲಭದಲ್ಲಿ ಆಗುವುದಿಲ್ಲ. ಎದುರಾಳಿಗಳ ವಿರೋಧವನ್ನು ಸಹ ಎದುರಿಸಬೇಕಾಗುತ್ತದೆ. ಆದರೆ ಅಲ್ಲಾಹನಿಗಾಗಿ ಈ ಎಲ್ಲ ಕೆಲಸಗಳನ್ನು ಜಮಾಅತ್ ಮಾಡುತ್ತಿದೆ. ಜಮಾಅತಿನ ಪ್ರಗತಿಯ ಬಗ್ಗೆ ಅಲ್ಲಾಹನ ವಾಗ್ದಾನ ಸಹ ಇದೆ. ಆದ್ದರಿಂದ ಅಲ್ಲಾಹನ ವಿಶೇಷ ಸಹಾಯವೂ ಇರುತ್ತದೆ.

ಕೋಂಗೋಕನ್ಸಾಶಾದ ಒಂದು ಘಟನೆ ಹೇಳುತ್ತೇನೆ. ಅಲ್ಲಿಯ ಮುಬಲ್ಲಿಗ್ ಸಾಹಿಬ್‌ರು ಬರೆಯುತ್ತಾರೆ: ಇಲ್ಲಿಯ ಬಂದೂ ರೀಜನಿನಲ್ಲಿ ಜಮಾಅತ್ ಸ್ಥಾಪಿತಗೊಂಡಿದೆ. ಎರಡು ವರ್ಷಗಳಿಂದ ಮಸೀದಿಯ ನಿರ್ಮಾಣ ಕೆಲಸ ಜಾರಿಯಲ್ಲಿದೆ. ಅಲ್ಲಿ ಸುನ್ನೀ ಮುಸ್ಲಿಮರು ಅಹ್ಮದಿಯರಿಗೆ ತೊಂದರೆ ಕೊಡುವುದರಲ್ಲಿ ಮತ್ತು ನಮ್ಮ ವಿರುದ್ಧ ಸರ್ಕಾರಿ ಆಫೀಸ್‌ಗಳಲ್ಲಿ ದೂರು ದಾಖಲಿಸುವುದರಲ್ಲಿ ಯಾವುದೇ ಕೊರತೆ ಮಾಡಿಲ್ಲ. ಯಾವುದೇ ತಂತ್ರ ಫಲಿಸದೇ ಇರುವಾಗ ಕೊಲ್ಲುವ ಬೆದರಿಕೆ ಕೂಡ ಕೊಡಲು ಆರಂಭಿಸಿದರು. ಹೇಗಿದ್ದರೂ ವಿರೋಧಿಗಳಿಗೆ ಯಾವುದೇ ಯಶಸ್ಸು ಸಿಗಲಿಲ್ಲ. ಮತ್ತೊಂದೆಡೆ ಮಸೀದಿಯ ನಿರ್ಮಾಣ ಕೆಲಸ ಜಾರಿಯಲ್ಲಿತ್ತು. ಮಸೀದಿ ನಿರ್ಮಾಣ ಕೆಲಸದ ಮೇಲ್ನೋಟವಹಿಸುವ ಅಹ್ಮದಿ ಸಹೋದರ ಹೇಳುತ್ತಾರೆ: ಮಸೀದಿ ನಿರ್ಮಾಣದ ವೇಳೆ ಒಂದು ದಿನ ಯುನಿವರ್ಸಿಟಿಯ ಒಬ್ಬ ಕ್ರೈಸ್ತ ಪ್ರೊಫೆಸ್ಸರ್ ನಮ್ಮ ಬಳಿಗೆ ಬಂದರು ಮತ್ತು ಮಸೀದಿ ನಿರ್ಮಾಣದ ಕೆಲಸದಲ್ಲಿ ಸಹಾಯ ಮಾಡಲು ಶುರುಮಾಡಿದರು. ಎಲ್ಲಿಯ ವರೆಗೆ ಎಂದರೆ, ಅಹ್ಮದಿಯರು ದೂರ ದೂರದಿಂದ ಮರಳು ತರುತ್ತಿದ್ದರು. ಅವರೊಂದಿಗೆ ಸೇರಿಕೊಳ್ಳುತ್ತಿದ್ದರು. ಒಂದು ಕಡೆ ವಿರೋಧಿಗಳು ತಮ್ಮ ಪಾತ್ರವನ್ನು ವಹಿಸುತ್ತಿದ್ದಾರೆ. ಮತ್ತೊಂದೆಡೆ ಅಲ್ಲಾಹನು ಅನ್ಯರ ಮೂಲಕವೂ ಕೆಲಸವನ್ನು ಮಾಡಿಸುತ್ತಾನೆ. ಉತ್ತಮ ಸ್ವಭಾವದವರು ಈ ಕಡೆಯೂ ಬರುತ್ತಾರೆ.

ಕೇಮರೂನಿನ ಒಂದು ಘಟನೆಯಿದೆ. ಅಲ್ಲಿಯ ಪಟ್ಟಣವಾದ ದೋಲದ ಮೊಹಲ್ಲವಾದ ಬವಾದಾ ಸೀಂಚಿನಲ್ಲಿ ಹೆಚ್ಚಿನವರು ಮುಸ್ಲಿಮರಾಗಿರುವರು. ಅಲ್ಲಿ ಎರಡು ವರ್ಷಗಳ ಹಿಂದೆ ಜಮಾಅತಿನ ಸ್ಥಾಪನೆಯಾಯಿತು. ಮಸೀದಿಯ ಕೆಲಸ ಶುರುಮಾಡಲಾಯಿತು. ಮಸೀದಿಯ ಕೆಲಸವನ್ನು ನಿಲ್ಲಿಸಲು ಆ ಪ್ರದೇಶದ ಅಡ್‌ಮಿನಸ್ಟ್ರೇಟರಿನ ಪತ್ರ ಬಂತು ಜಮಾಅತ್ ಕೆಲಸವನ್ನು ನಿಲ್ಲಿಸಿತು. ಅಹ್ಮದಿಯಾ ಜಮಾಅತ್ ಒಂದು ಭಯೋತ್ಪಾದಕ ಜಮಾಅತಾಗಿದೆ. ಅವರಿಗೆ ಇಸ್ಲಾಮಿನೊಂದಿಗೆ ಯಾವುದೇ ಸಂಬಂಧವಿಲ್ಲ. ಆದ್ದರಿಂದ ಅವರು ಮಸೀದಿಯನ್ನು ನಿರ್ಮಾಣ ಮಾಡಬಾರದು ಎಂದು ಮುಸ್ಲಿಮರ ಸಂಘಟನೆಯು ಗವರ್ನರ್ ಸಾಹಿಬ್ ಮತ್ತು ಸಂಬಂಧಪಟ್ಟ ಹುದ್ದೇದಾರರಿಗೆ ಪತ್ರ ಬರೆದಿದ್ದರು. ಹೇಗಿದ್ದರೂ ಅಲ್ಲಿಯ ಅಹ್ಮದಿಯರು ಸಹ ಅವರಿಗೆ ಪತ್ರ ಬರೆದರು ಮತ್ತು ದುಆದಲ್ಲಿ ನಿರತರಾದರು. ಸಂಪರ್ಕಗಳನ್ನು ಸಹ ಸ್ಥಾಪಿಸಿದರು. ಒಂದು ತಿಂಗಳ ನಂತರ ಎಡ್‌ಮಿನಿಸ್ಟ್ರೇಟರ್ ತನ್ನ ಆಫೀಸಿಗೆ ನಮ್ಮನ್ನು ಕರೆಸಿದರು. ಮುಸ್ಲಿಮರ ಅನೇಕ ಸಂಘಟನೆಗಳನ್ನು, ಚೀಫ್ ಇಮಾಮ್‌ರನ್ನು ಮತ್ತಿತ್ತರ ಜನರನ್ನು ಕರೆದರು. ಅನಂತರ ಒಂದು ರಿಪೋರ್ಟನ್ನು ಓದಿ ಹೇಳಿದರು. ಅವರು ಹೇಳಿದರು: ನಾವು ಮುಸ್ಲಿಮರ ದೂರಿನ ಮೇರೆಗೆ ಕೆಲಸವನ್ನು ನಿಲ್ಲಿಸಿದ್ದೆವು. ಆದರೆ ಕೇಮರೂನಿನ ವಿವಿಧ ಪ್ರದೇಶಗಳಿಂದ ರಿಪೋರ್ಟ್‌ಗಳನ್ನು ತರಸಿದೆವು. ಅಹ್ಮದಿಯಾ ಜಮಾಅತ್ ಒಂದು ಜಾಗತಿಕ ಜಮಾಅತ್ ಆಗಿದೆ. ಇನ್ನೂರಕ್ಕಿಂತ ಹೆಚ್ಚಿನ ದೇಶಗಳಲ್ಲಿ ಕೆಲಸ ಮಾಡುತ್ತಿದೆ. 15 ವರ್ಷಗಳಿಂದ ಕೇಮರೂನಿನಲ್ಲೂ ಕೆಲಸ ಮಾಡುತ್ತಿದೆ. ಕೇಮರೂನಿನಲ್ಲೂ ಅನೇಕ ಜಾಗಗಳಲ್ಲಿ ಮಸೀದಿಗಳ ನಿರ್ಮಾಣ ಮಾಡಿದೆ. ಈ ರೀತಿಯಾಗಿ ಧಾರ್ಮಿಕ ಸೇವೆಗಳನ್ನು ಮಾಡುತ್ತಿವೆ. ಅದಲ್ಲದೇ ಸೃಷ್ಟಿಗಳ ಸೇವೆಯ ಸಹ ಮಾಡುತ್ತಿದೆ. ಅನೇಕ ಪ್ರದೇಶಗಳಲ್ಲಿ ಶುದ್ಧ ನೀರಿನ ಬೋರ್‌ವೆಲ್ ಮತ್ತು ಪಂಪ್‌ಗಳನ್ನು ಅಳವಡಿಸಿದೆ. ಅನಾಥರ ಪರಿಪಾಲನೆ ಮಾಡುತ್ತಿದೆ. ವಿದ್ಯಾರ್ಥಿಗಳ ಕಲಿಕೆಯಲ್ಲಿ ಸಹಾಯ ಮಾಡುತ್ತಿದೆ. ಅದೇ ರೀತಿಯಲ್ಲಿ ಭಯೋತ್ಪಾದಕ ಸಂಘಟನೆಗಳ ವಿರುದ್ಧ ಸದಾ ಮಾತನಾಡುತ್ತದೆ. ಜಮಾಅತ್ ಶಾಂತಿ ಮತ್ತು ಸಹಭಾಳ್ವೆಯ ಪಾಠವನ್ನು ನೀಡುತ್ತದೆ. ಖಡ್ಗದ ಜಿಹಾದಿನ ಬದಲಾಗಿ ಲೇಖನಿಯ ಜಿಹಾದ್ ಮಾಡುತ್ತದೆ. ಮುಸ್ಲಿಮರ ಮುಖಂಡರು ಸಹ ಅವರ ಸಭೆಗಳಲ್ಲಿ ಭಾಗವಹಿಸುತ್ತಾರೆ. ಆದ್ದರಿಂದ ಅವರ ಮಸೀದಿ ನಿರ್ಮಾಣವನ್ನು ತಡೆಯಲು ತಕ್ಕುದಾದ ಕಾರಣವೇ ಇಲ್ಲ. ಅವರು ಇಲ್ಲೂ ಮಸೀದಿ ನಿರ್ಮಿಸಬಹುದಾಗಿದೆ ಎಂದು ಅಲ್ಲಿಯ ಮುಸ್ಲಿಮರನ್ನು ಅಧಿಕಾರಿ ಹೇಳಿದರು. ರಿಪೋರ್ಟ್ ಓದಿದ ನಂತರ ಅಲ್ಲಿದ್ದ ಎಲ್ಲ ಮುಸ್ಲಿಂ ಲೀಡರ್‌ಗಳು ಎದ್ದು ನಿಂತು ಹೇಳಿದರು: ಇವರು ಕಾಫಿರ್‌ಗಳು, ನಾವು ಇವರನ್ನು ಕಾಫಿರ್ ಎಂದು ಭಾವಿಸುತ್ತೇವೆ. ನಮ್ಮನ್ನು ಕೇಳದೇ ನೀವು ಈ ರಿಪೋರ್ಟ್ ತಯಾರು ಮಾಡಿದ್ದೀರಿ. ನಾವು ಇದನ್ನು ಅಂಗೀಕರಿಸುವುದಿಲ್ಲ. ಕೊನೆಗೆ ಎಡ್‌ಮಿನಸ್ಟ್ರೇಟರ್ ಕೋಪದಿಂದ ಅವರೊಡನೆ ಹೇಳಿದರು: ನಾನು ನನ್ನ ಕೆಲಸವನ್ನು ಬಲ್ಲನು. ಇಲ್ಲಿಂದ ಹೊರಟು ಹೋಗಿರಿ. ಹೇಗಿದ್ದರೂ ಆ ಜನರು ಸುಮ್ಮನಾದರು. ಮಸೀದಿಯ ನಿರ್ಮಾಣ ಮಾಡಲು ಜಮಾಅತಿನೊಂದಿಗೆ ಹೇಳಿದರು.

ಅಹ್ಮದಿಯಾ ಜಮಾಅತಿನ ಸೇವೆಗಳ ಉತ್ತಮ ಪರಿಣಾಮದಿಂದ ಜಮಾಅತನ್ನು ಪ್ರಶಂಸಿಲು ಪ್ರತಿಯೊಬ್ಬ ಬುದ್ಧಿವಂತನು ನಿರ್ಬಂಧಿತನಾಗುತ್ತಾನೆ. ಅಲ್ಲಾಹನ ಸಂಪ್ರೀತಿಯನ್ನು ಗಳಿಸಲಿಕ್ಕಾಗಿ ಕೆಲಸ ಮಾಡುವಾಗ ಅಲ್ಲಾಹನುಕ ಸಹಾಯಕರ ಸೈನ್ಯವನ್ನು ಕಳುಹಿಸುತ್ತಾನೆ. ಸ್ವತಃ ಎದುರಾಳಿಗಳ ಅಡೆತಡೆಗಳನ್ನು ನೀಗಿಸುತ್ತಾನೆ. ಯಾವ ರೀತಿಯಲ್ಲಿ ಅಲ್ಲಾಹನ ಅನುಗ್ರಹಗಳು ವರ್ಧಿಸುತ್ತವೆ ಎಂಬುದರ ಒಂದು ಘಟನೆ ಹೀಗಿದೆ:

ಐವರಿಕೋಸ್ಟಿನ ರೀಜನ್ ಘಾನದ ಒಂದು ರಿಪೋರ್ಟ್ ಇದೆ. ತಬ್ಲೀಗ್ ಮೂಲಕ ಅಲ್ಲಿ ಜಮಾಅತಿಗೆ 60ಕ್ಕಿಂತ ಹೆಚ್ಚು ಬೈಅತ್ ಲಭಿಸಿತು. ಗ್ರಾಮದಲ್ಲಿ ಜಮಾಅತಿಗೆ ಮಣ್ಣಿನ ಇಟ್ಟಿಗೆಯ ಒಂದು ಸಣ್ಣ ಮಸೀದಿಯಿತ್ತು. ನಮ್ಮ ಯಶಸ್ಸನ್ನು ಕಂಡು ಅಹ್ಮದಿಯೇತರರು ನಮ್ಮ ಮಸೀದಿಯ ನೇರ ಮುಂದಾಗಿ ಒಂದು ಸುಂದರವಾದ ಮಸೀದಿಯನ್ನು ನಿರ್ಮಿಸಿದರು. ಈ ಮಸೀದಿಯ ಮೂಲಕ ನಮ್ಮ ನವ ಅಹ್ಮದಿಯರನ್ನು ತಮ್ಮೆಡೆಗೆ ಸೆಳೆಯಲು ಅವರು ಪ್ರಯತ್ನಿಸಿದರು. ಕೆಲವು ದುರ್ಬಲ ಅಹ್ಮದಿಯರು ಅಲ್ಲಿಗೆ ಹೋದರು. ಅನಂತರ ಜಮಾಅತ್ ಸಹ ಅಲ್ಲಿ ಒಂದು ದೊಡ್ಡ ವೈಭವಶಾಲಿ ಮಸೀದಿಯನ್ನು ನಿರ್ಮಿಸಿತು. ಈಗ ಅಲ್ಲಾಹನ ಅನುಗ್ರಹದಿಂದ ನಮ್ಮ ಜಮಾಅತಿನ ಮೆಂಬರ್ ಅಲ್ಲದೇ ಅಹ್ಮದಿಯೇತರರು ಸಹ ಹೆಚ್ಚಾಗಿ ಬರಲು ಶುರುಮಾಡಿರುವರು. ನಮ್ಮ ಮಸೀದಿ ನಮಾಝಿಗಳಿಂದ ತುಂಬಿದೆ. ಅವರ ಮಸೀದಿ ಖಾಲಿಯಾಗುತ್ತಿದೆ. ಅಲ್ಲಾಹನ ಅನುಗ್ರಹದಿಂದ ನವ ಅಹ್ಮದಿಯರ ತಾಲೀಂ ಮತ್ತು ತರ್‌ಬಿಯತಿಗಾಗಿ ಅಲ್ಲಿ ದಿನಾಲೂ ಕ್ಲಾಸುಗಳು ಸಹ ನಡೆಯುತ್ತಿವೆ. ಇದರಿಂದ ದಿನ ಕಳೆದಂತೆ ಜಮಾಅತಿನ ಅಭಿವೃದ್ಧಿ ಆಗುತ್ತಿದೆ. ಅಲ್ಲಾಹನ ಅನುಗ್ರಹದಿಂದ ಇಂತಹ ಅನೇಕ ಘಟನೆಗಳಿವೆ. ಅಲ್ಲಾಹನು ಸತ್ಯವಾದ ವಾಗ್ದಾನಗಳನ್ನು ಮಾಡುವವನಾಗಿದ್ದಾನೆ. ಹಝ಼್ರತ್ ಮಸೀಹ್ ಮೌಊದ್(ಅ)ರೊಂದಿಗೆ ಅವನು ಮಾಡಿರುವ ವಾಗ್ದಾನಗಳನ್ನು ಈಡೇರಿಸುತ್ತಿದ್ದಾನೆ. ಅದೃಶ್ಯವಾದ ಸಹಾಯವನ್ನು ಮಾಡುತ್ತಾನೆ ಮತ್ತು ಮಾಡುವನು. ಇನ್‌ಶಾ ಅಲ್ಲಾಹ್. ನಾವು ಅವನ ಸಂಪ್ರೀತಿಯನ್ನು ಗಳಿಸಲಿಕ್ಕಾಗಿ ಅವನ ಮಾರ್ಗದಲ್ಲಿ ಖರ್ಚು ಮಾಡಲು ಅಲ್ಲಾಹನು ಸಂದರ್ಭ ಒದಗಿಸಿ ಕೊಡುತ್ತಾನೆ. ಹೀಗೆ ಅವನ ಅನುಗ್ರಹಗಳ

ವಾರಸುದಾರರಾಗುವಂತಾಗಲು. ನಾವು ಅಲ್ಲಾಹನ ಅನುಗ್ರಹಗಳನ್ನು ಹೀರಿಕೊಳ್ಳುವವರಾಗಲು ಅಲ್ಲಾಹನು ನಮಗೆ ಸೌಭಾಗ್ಯ ನೀಡಲಿ.

ಈ ವರ್ಷ ಜನವರಿಯಲ್ಲಿ ವಖ್ಫೇ ಜದೀದಿನ ಹೊಸ ವರ್ಷ ಶುರುವಾಗಿದೆ. 2021ರಲ್ಲಿ ವಖ್ಫೇ ಜದೀದಿನ 64ನೇ ವರ್ಷದಲ್ಲಿ ಜಮಾಅತಿನ ಸದಸ್ಯರು ಒಂದು ಕೋಟಿ 12 ಲಕ್ಷ 77 ಸಾವಿರ ಪೌಂಡಿನ ಧನತ್ಯಾಗ ಮಾಡಿರುವರು. ಅದು 2020ಕ್ಕೆ ಹೋಲಿಸಿದರೆ 7 ಲಕ್ಷ 42 ಸಾವಿರ ಪೌಂಡ್‌ನಷ್ಟು ಹೆಚ್ಚಾಗಿದೆ. ಭಾಗೀದಾರರ ಸಂಖ್ಯೆ ಕೂಡ 14 ಲಕ್ಷ 45 ಸಾವಿರ ಆಗಿದೆ.

ಲೋಕದ ಆರ್ಥಿಕ ಸ್ಥಿತಿಗತಿಗಳನ್ನು ನೋಡುವುದಾದರೆ ಇದು ಅಲ್ಲಾಹನ ಬಹಳ ದೊಡ್ಡ ಕೃಪೆಯಾಗಿದೆ. ಈ ವರ್ಷವೂ ಒಟ್ಟು ವಸೂಲಿಯ ಪ್ರಕಾರ ಬ್ರಿಟನಿಗೆ ಮೊದಲನೆಯ ಸ್ಥಾನವಿದೆ. ಕರೆನ್ಸಿ ಬೆಲೆ ಕಡಿಮೆಯಾದ ಕಾರಣದಿಂದ ಪಾಕಿಸ್ತಾನದ ಪೊಸಿಶನ್ ಕೆಳಗಾದರು ಕೂಡ ಜಮಾಅತಿನ ಸದಸ್ಯರು ತಮ್ಮ ಶಕ್ತಿಯಾನುಸಾರ ಬಹಳ ತ್ಯಾಗ ಮಾಡುತ್ತಿದ್ದಾರೆ. ಹೇಗಿದ್ದರೂ ಒಟ್ಟು ವಸೂಲಿಯ ಪ್ರಕಾರ ಬ್ರಿಟನಿಗೆ ಮೊದಲನೆಯ ಸ್ಥಾನವಿದೆ. ಅನಂತರ ಜರ್ಮನಿ. ಅಲ್ಲಾಹನ ಅನುಗ್ರಹದಿಂದ ಬ್ರಿಟನ್ ಸಾಕಷ್ಟು ತ್ಯಾಗವನ್ನು ಮಾಡಿದೆ. ಜರ್ಮನಿ ಮತ್ತು ಬ್ರಿಟನಿನ ನಡುವೆ ಸಾಕಷ್ಟು ಅಂತರವಿದೆ. ಮೂರನೆ ಸ್ಥಾನ ಕೆನಡದ್ದಾಗಿದೆ, ಅನಂತರ ಅಮೇರಿಕ, ಅನಂತರ ಭಾರತ, ಆಸ್ಟ್ರೇಲಿಯ, ಇಂಡೋನೇಶಿಯ, ಮಿಡಲ್ ಈಸ್ಟಿನ ಒಂದು ಜಮಾಅತ್, ಘಾನ, ಬೆಲ್ಜಿಯಂ.

ತಲಾ ಪಾವತಿಯ ಪ್ರಕಾರ ಪ್ರಥಮ ಅಮೇರಿಕ, ಅನಂತರ ಸ್ವಿಟ್ಜರ್‌ಲ್ಯಾಂಡ್, ಬ್ರಿಟನ್.

ವಸೂಲಿಯ ಪ್ರಕಾರ ಆಫ್ರಿಕಾದಲ್ಲಿ ಪ್ರಮುಖ ಜಮಾಅತ್‌ಗಳೆಂದರೆ: ನಂಬರ್ ಒನ್ ಘಾನಾ, ನಂತರ ಮಾರಿಶಸ್ ಇದೆ. ನಂತರ ನೈಜೀರಿಯಾ ಇದೆ. ನಂತರ ಬುರ್ಕಿನಾ ಫಾಸೊ ಇದೆ. ನಂತರ ತಾಂಜಾನಿಯಾ ಇದೆ. ನಂತರ ಸಿಯೆರಾ ಲಿಯೋನ್ ಇದೆ. ನಂತರ ಲೈಬೀರಿಯಾ ಇದೆ. ನಂತರ ಗ್ಯಾಂಬಿಯಾ. ನಂತರ ಉಗಾಂಡಾ. ಕೊನೆಯಲ್ಲಿ ಹತ್ತನೇ ಸ್ಥಾನದಲ್ಲಿ ಬೆನಿನ್.

ಸರ್ವಶಕ್ತನಾದ ಅಲ್ಲಾಹನ ಅನುಗ್ರಹಂದ, ಭಾಗವಹಿಸುವವರ ಸಂಖ್ಯೆಯೂ ಹದಿನಾಲ್ಕು ಲಕ್ಷ ನಲವತ್ತ ಐದು ಇದೆ.

ವಸೂಲಿಯ ವಿಷಯದಲ್ಲಿ ಬ್ರಿಟನ್‌ನ ಹತ್ತು ಜಮಾಅತ್‌ಗಳೆಂದರೆ: ಇಸ್ಲಾಮಾಬಾದ್ ಮೊದಲ ಸ್ಥಾನದಲ್ಲಿದೆ, ನಂತರ ಫರ್ನ್‌ಹ್ಯಾಮ್, ನಂತರ ವೋರ್ಸೆಸ್ಟರ್ ಪಾರ್ಕ್, ನಂತರ ಸೌತ್ ಚೀಮ್. ನಂತರ ಆಲ್ಡರ್‌ಶಾಟ್ ನಂತರ ಬರ್ಮಿಂಗಮ್ ಸೌತ್, ನಂತರ ವಾಲ್ಸಾಲ್, ಗಿಲ್ಲಿಂಗ್ಹ್ಯಾಮ್, ಗಿಲ್ಫೋರ್ಡ್, ಈವೆಲ್.

ಬೈತ್-ಉಲ್-ಫುತುಹ್ ಒಟ್ಟು ವಸೂಲಿಯ ವಿಷಯದಲ್ಲಿ ಅಗ್ರ ಐದು ಪ್ರದೇಶಗಳಲ್ಲಿ ಮೊದಲನೆಯದ್ದಾಗಿದೆ, ನಂತರ ಮಸ್ಜಿದ್ ಫಝಲ್, ನಂತರ ಬೈತ್-ಉಲ್-ಇಹ್ಸಾನ್. ನಂತರ ಮಿಡ್ಲ್ಯಾಂಡ್ಸ್.

ಅತ್ಫಾಲ್-ದಫ್ತರ್ ಅತ್ಫಾಲ್‌ನ ಪ್ರಕಾರ ಹತ್ತು ಜಮಾಅತ್‌ಗಳು: ಇಸ್ಲಾಮಾಬಾದ್ ನಂಬರ್ ಒನ್, ಆಲ್ಡರ್‌ಶಾಟ್ ಸಂಖ್ಯೆ ಎರಡು. ನಂತರ ಫರ್ನ್ಹ್ಯಾಮ್, ರೋಹ್ಯಾಂಪ್ಟನ್, ನಂತರ ಗಿಲ್ಫೋರ್ಡ್, ಎವೆಲ್, ಮಿಚಮ್ ಪಾರ್ಕ್, ಬೈತುಲ್ ಫುತುಹ್, ವಾಲ್ಸಾಲ್, ಬರ್ಮಿಂಗ್ಹ್ಯಾಮ್ ವೆಸ್ಟ್.

ವಸೂಲಿಯ(ಸಂಗ್ರಹಣೆ) ವಿಷಯದಲ್ಲಿ ಜರ್ಮನಿಯ ಐದು ಸ್ಥಳೀಯ ಅಮಾರತ್‌ಗಳು: ಹ್ಯಾಂಬರ್ಗ್ ಮೊದಲ ಸ್ಥಾನದಲ್ಲಿದೆ, ನಂತರ ಫ್ರಾಂಕ್‌ಫರ್ಟ್ ನಂತರ ಗ್ರೊಸ್ ಗೆರಾವ್ ನಂತರ ವೈಸ್‌ಬಾಡೆನ್ ನಂತರ ಡಯೆಟ್ಜೆನ್‌ಬಾಚ್.

ವಸೂಲಿಯ ವಿಷಯದಲ್ಲಿ ಅಗ್ರ ಹತ್ತು ಜಮಾಅತ್‌ಗಳ ಪಟ್ಟಿ: ಮೊದಲ ಸ್ಥಾನದಲ್ಲಿ ರೋಡರ್‌ಮಾರ್ಕ್. ನಂತರ ರೋಡಗೌ. ನಂತರ ನೋಯಿಸ್, ನಂತರ ರೋಡರ್ಸ್‌ಹಾಯಿಮ್, ನಂತರ ಮೆಹದಿಯಾಬಾದ್ ಫ್ರೈಡ್‌ಬರ್ಗ್. ಹಾನಾವ್, ಫ್ಲೋರ್ಶೈಮ್, ಫ್ರಾಂಕೆಂತಾಲ್, ಕೊಬ್ಲೆಂಜ್ ಮತ್ತು ನಿಡ್ಡಾ.

ದಫ್ತರ್ ಅತ್ಫಾಲ್‌ನ ಮೊದಲ ಐದು ಪ್ರದೇಶಗಳೆಂದರೆ: ಹ್ಯಾಂಬರ್ಗ್ ಮೊದಲ ಸ್ಥಾನದಲ್ಲಿದೆ, ನಂತರ ಸೌತ್ ವೆಸ್ಟ್ ಹೆಸ್ಸೆನ್, ತೌನಸ್, ಹೆಸ್ಸೆನ್-ಮಿಟ್ಟೆ, ರೈನ್‌ಲ್ಯಾಂಡ್-ಫ್ಫಾಲ್ಜ್.

ವಸೂಲಿಯ ವಿಷಯದಲ್ಲಿ ಕೆನೆಡದಲ್ಲಿ ನಂಬರ್ ಒನ್ ವಾನ್ ದೇಶವಾಗಿದೆ, ನಂತರ ಕ್ಯಾಲ್ಗರಿ, ನಂತರ ಪೀಸ್ ವಿಲೇಜ್, ನಂತರ ವ್ಯಾಂಕೋವರ್. ಬ್ರಾಂಪ್ಟನ್-ವೆಸ್ಟ್.

ಕೆನಡಾದ ಹತ್ತು ದೊಡ್ಡ ಜಮಾಅತ್‌ಗಳಲ್ಲಿ ಹದಿಕಾ ಅಹ್ಮದ್ ಮೊದಲ ಸ್ಥಾನದಲ್ಲಿದ್ದಾರೆ, ಮಿಲ್ಟನ್-ವೆಸ್ಟ್, ಬ್ರಾಡ್‌ಫೋರ್ಡ್ ಡರ್ಹಾಮ್, ಮಿಲ್ಟನ್ ಈಸ್ಟ್, ರೆಜಿನಾ, ಒಟ್ಟಾವಾ-ವೆಸ್ಟ್, ವಿನ್ನಿಪೆಗ್, ಹ್ಯಾಮಿಲ್ಟನ್ ಮೌಂಟೆನ್, ಅಬಾಟ್ಸ್‌ಫೋರ್ಡ್.

ಮತ್ತು ದಫ್ತರ್ ಅತ್ಫಾಲ್‌ನ ಮೊದಲ ಹತ್ತು ಜಮಾಅತ್‌ಗಳೆಂದರೆ: ವಾಘನ್ ನಂಬರ್ ಒನ್, ನಂತರ ಪೀಸ್ ವಿಲೇಜ್, ನಂತರ ಕ್ಯಾಲ್ಗರಿ, ಟೊರೊಂಟೊ-ವೆಸ್ಟ್, ಬ್ರಾಂಪ್ಟನ್-ವೆಸ್ಟ್.

ದಫ್ತರ್ ಅತ್ಫಾಲ್‌ನ ಐದು ಪ್ರಮುಖ ಜಮಾಅತ್‌ಗಳು: ಹದಿಕಾ ಅಹ್ಮದ್ ನಂಬರ್ ಒನ್, ಬ್ರಾಡ್‌ಫೋರ್ಡ್, ಡರ್ಹಾಮ್, ಲಂಡನ್, ಮಿಲ್ಟನ್-ವೆಸ್ಟ್.

ಅಮೇರಿಕದ ವಸೂಲಿಯ ವಿಷಯದಲ್ಲಿ ಹತ್ತು ಜಮಾಅತ್‌ಗಳೆಂದರೆ: ಮೇರಿಲ್ಯಾಂಡ್, ಲಾಸ್ ಎಂಜಲೀಸ್, ಡೆಟ್ರಾಯಿಟ್, ಸಿಲಿಕಾನ್ ವ್ಯಾಲಿ, ಬೋಸ್ಟನ್, ಆಸ್ಟನ್, ಫೀನಕ್ಸ್, ಸಿರಾಕೋಸ್, ಲಾಸ್ ವೇಗಾಸ್ ಮತ್ತು ಫಿಚ್‌ಬರ್ಗ್.

ದಫ್ತರ್ ಅತ್ಫಾಲ್‌ನಿಂದ ಟಾಪ್ ಟೆನ್ ಜಮಾಅತ್‌ಗಳು: ಮೇರಿಲ್ಯಾಂಡ್, ಲಾಸ್ ಎಂಜಲಿಸ್, ಸಿಯಾಟಲ್, ಒರ್ಲ್ಯಾಂಡೊ, ಆಸ್ಟನ್, ಸಿಲಿಕಾನ್ ವ್ಯಾಲಿ, ಫೀನಕ್ಸ್, ಫಿಚ್‌ಬರ್ಗ್, ಲಾಸ್ ವೆಗಾಸ್, ಮತ್ತು ಝಿಯಾಯಿನ್.

ಪಾಕಿಸ್ತಾನದಲ್ಲಿ ವಯಸ್ಕ ದಾನಿಗಳ ಮೊದಲ ಮೂರು ಜಮಾಅತ್‌ಗಳು: ಮೊದಲ ಲಾಹೋರ್, ರಬ್ವಾಹ್ ನಂತರ ಕರಾಚಿ, ಮತ್ತು ಜಿಲ್ಲೆಗಳ ಪ್ರಕಾರ ಸ್ಥಾನಗಳು ಹೀಗಿವೆ: ಇಸ್ಲಾಮಾಬಾದ್ ಮೊದಲ ಸ್ಥಾನದಲ್ಲಿದೆ. ನಂತರ ಫೈಸಲಾಬಾದ್, ಗುಜರಾತ್, ಗುಜ್ರಾನ್ವಾಲಾ, ಸರ್ಗೋಧಾ, ಮುಲ್ತಾನ್, ಉಮರ್ಕೋಟ್, ಹೈದರಾಬಾದ್, ಮಿರ್ಪುರ್ ಖಾಸ್, ಡೇರಾ ಘಾಜಿ ಖಾನ್.

ಒಟ್ಟು ವಸೂಲಿಯಲ್ಲಿ ಅಗ್ರ ಹತ್ತು ಜಮಾಅತ್‌ಗಳೆಂದರೆ: ಇಸ್ಲಾಮಾಬಾದ್ ಸಿಟಿ, ಡಿಫೆನ್ಸ್ ಲಾಹೋರ್, ಟೌನ್‌ಶಿಪ್ ಲಾಹೋರ್, ಕ್ಲಿಫ್ಟನ್ ಕರಾಚಿ, ದಾರುಲ್ ಜಿಕ್ರ್ ಲಾಹೋರ್, ಮಾಡೆಲ್ ಟೌನ್ ಲಾಹೋರ್, ಗುಲ್ಶನಾಬಾದ್ ಕರಾಚಿ, ಸಮನಾಬಾದ್ ಲಾಹೋರ್, ಅಜೀಜಾಬಾದ್ ಕರಾಚಿ, ಅಲ್ಲಾಮ ಇಕ್ಬಾಲ್ ಟೌನ್ ಲಾಹೋರ್.

ದಫ್ತರ್ ಅತ್ಫಾಲ್‌ನ ಮೂರು ಪ್ರಮುಖ ಜಮಾಅತ್‌ಗಳು: ಮೊದಲ ಲಾಹೋರ್, ಎರಡನೇ ಕರಾಚಿ – ಮೂರನೇ ರಬ್ವಾ. ದಫ್ತರ್ ಅತ್ಫಾಲ್‌ನಲ್ಲಿ ಜಿಲ್ಲೆಗಳ ಸ್ಥಾನಗಳು ಹೀಗಿವೆ: ಇಸ್ಲಾಮಾಬಾದ್ ನಂಬರ್ ಒನ್, ಸಿಯಾಲ್ಕೋಟ್ ನಂತರ ರಾವಲ್ಪಿಂಡಿ, ಸರ್ಗೋಧಾ, ಫೈಸಲಾಬಾದ್, ಗುಜರಾತ್ ಹೈದರಾಬಾದ್, ಮೀರ್ಪುರ್ ಖಾಸ್, ಉಮರ್ಕೋಟ್, ನರೋವಲ್.

ಅಸಾಧಾರಣ ತ್ಯಾಗಗಳು ಮಾಡಿರುವ ಜಮಾಅತ್‌ಗಳೆಂದರೆ: ಡ್ರಗ್ ರೋಡ್ ಕರಾಚಿ, ನೂರ್ಪುರ ಲಾಹೋರ್, ಗುಜ್ರಾನ್ವಾಲಾ ನಗರ, ಬೈತ್-ಉಲ್-ಫಜ್ಲ್ ಫೈಸಲಾಬಾದ್, ಪೇಶಾವರ ನಗರ, ದೆಹಲಿ ಗೇಟ್ ಲಾಹೋರ್, ಕೊಟ್ಲಿ ಆಜಾದ್ ಕಾಶ್ಮೀರ, ನಂಕಾನಾ ಸಾಹಿಬ್.

ಭಾರತದ ಮೊದಲ ಹತ್ತು ರಾಜ್ಯಗಳು ಅನುಕ್ರಮವಾಗಿ ಕೇರಳ, ಜಮ್ಮು ಕಾಶ್ಮೀರ, ತಮಿಳುನಾಡು, ತೆಲಂಗಾಣ, ಕರ್ನಾಟಕ, ಒಡಿಶ, ಪಂಜಾಬ್, ಪಶ್ಚಿಮ ಬಂಗಾಳ, ದೆಹಲಿ, ಮಹಾರಾಷ್ಟ್ರ.

ವಸೂಲಿ ಪ್ರಕಾರ ಮೊದಲ ಹತ್ತು ಜಮಾಅತುಗಳು: ಹೈದರಾಬಾದ್, ಖಾದಿಯಾನ್, ಕರುಳಾಯಿ, ಪತ್ತಪಿರಿಯಂ, ಕೋಯಂಬತೂರ್, ಬೆಂಗಳೂರು, ಕಲ್ಕತ್ತ, ಕ್ಯಾಲಿಕಟ್, ರಿಶಿನಗರ್, ಮೇಲಪಾಲಯಂ.

ಆಸ್ಟ್ರೇಲಿಯಾದ ಹತ್ತು ಜಮಾಅತ್‌ಗಳಿವೆ: ಮೆಲ್ಬೋರ್ನ್ ಲ್ಯಾಂಗ್ವಾರಿನ್, ಕ್ಯಾಸಲ್ ಹಿಲ್, ಮಾರ್ಸ್ಡೆನ್ ಪಾರ್ಕ್, ಅಡಿಲೇಡ್ ಸೌಥ್, ಮೆಲ್ಬೋರ್ನ್ ಬರ್ವಿಕ್, ಪರ್ತ್, ಪೆನ್ರಿತ್, ಅಡಿಲೇಡ್ ವೆಸ್ಟ್ ಮತ್ತು ಲೋಗನ್ ಈಸ್ಟ್.

ಆಸ್ಟ್ರೇಲಿಯನ್ ವಯಸ್ಕ ಜಮಾಅತ್‌ಗಳು: ಮೆಲ್ಬೋರ್ನ್ ಲ್ಯಾಂಗ್ವಾರಿನ್, ಕ್ಯಾಸಲ್ ಹಿಲ್ ಮಾರ್ಸ್ಡೆನ್ ಪಾರ್ಕ್, ಅಡಿಲೇಡ್ ಸೌತ್, ಮೆಲ್ಬೋರ್ನ್ ಬರ್ವಿಕ್, ಪರ್ತ್ ಪೆನ್ರಿತ್, ಅಡಿಲೇಡ್ ವೆಸ್ಟ್, ಬ್ಲ್ಯಾಕ್‌ಟೌನ್ ಮತ್ತು ಕ್ಯಾನ್‌ಬೆರಾ.

ದಫ್ತರ್ ಅತ್ಫಾಲ್‌ನಲ್ಲಿ ಆಸ್ಟ್ರೇಲಿಯಾದ ಹತ್ತು ಜಮಾಅತ್‌ಗಳಿವೆ: ಮೆಲ್ಬೋರ್ನ್ ಲ್ಯಾಂಗ್ವಾರಿನ್, ಅಡಿಲೇಡ್ ಸೌಥ್, ಮೆಲ್ಬೋರ್ನ್ ಬರ್ವಿಕ್, ಲೋಗನ್ ಈಸ್ಟ್, ಪರ್ತ್, ಕ್ಯಾಸಲ್ ಹಿಲ್, ಮೆಲ್ಬೋರ್ನ್ ಪೂರ್ವ, ಮೌಂಟ್ ಡ್ರುಯಿಟ್, ಪೆನ್ರಿತ್, ಬ್ರಿಸ್ಬೇನ್ ಸೆಂಟ್ರಲ್.

ಅಲ್ಲಾಹನು ಎಲ್ಲ ತ್ಯಾಗಶಾಲಿಗಳ ಸಂಪತ್ತು ಮತ್ತು ಸಂತಾನಗಳಲ್ಲಿ ಅಪರಿಮಿತವಾದ ಅನುಗ್ರಹ ದಯಪಾಲಿಸಲಿ.

****************

**ವಿಶೇಶ ಸೂಚನೆ**

**"ಬದರ್" ವಾರಪತ್ರಿಕೆಯ ಚಂದಾದಾರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.**

**ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)**

*(ಪುಟ ಸಂಖ್ಯೆ 02ರ ಉಳಿದ ಭಾಗ)*

**ಜುನುಬಿ ವಸ್ಸಾಹಿಬಿ ಬಿಲ್‌ಜಂಬಿ ವಬ್‌ನಿಸ್ಸಬೀಲ್. ವಮಾಮಲಕತ್ ಐಮಾನುಕುಮ್, ಇನ್ನಲ್ಲಾಹ ಲಾ ಯುಹಿಬ್ಬು ಮನ್ ಕಾನ ಮುಖ್ತಲನ್** ¥ಔÆgï (ಅನ್ನಿನಾಅ–37) ನೀವು ಅಲ್ಲಾಹನನ್ನು ಆರಾಧಿಸಿರಿ. ಬೇರೇನನ್ನೂ ಅವನ ಸಹಭಾಗಿಯನ್ನಾಗಿ ಮಾಡಬೇಡಿರಿ. ಮಾತಪಿತೃರಿಗೆ ನೀವು ಒಳಿತನ್ನು ಮಾಡಿರಿ. ನಿಕಟ ಬಂಧುಗಳಿಗೂ, ಅನಾಥರಿಗೂ ನಿರ್ಗತಿಕರಿಗೂ, ನಿಕಟ ಸಮಬಂಧಿಯಾದ ನೆರೆಹೊರೆಯವನಿಗೂ, ಅನ್ಯ ನೆರೆಹೊರೆಯವನಿಗೂ, ನಿಕಟ ಸಂಗಡಿಗನಿಗೂ, ಯಾತ್ರಿಕನಿಗೂ ನಿಮ್ಮ ಅಧೀನದಲ್ಲಿರುವವರಿಗೂ, ಅಹಂಭಾವಗಳನ್ನೂ ಜಂಭ ಕೊಚ್ಚುವವರನನ್ನೂ ಅಲ್ಲಾಹನು ಎಂದಿಗೂ ಇಷ್ಟಪಡುವುದಿಲ್ಲ. ಹುಝೂರೆ ಅನ್ವರ್ ಹೇಳಿದರು. ಮನುಷ್ಯನು ಅದರಂತೆ ಜೀವನ ಕಳೆದರೆ ಶಾಂತಿ ಭಂಗ ಮಾಡುವ ಎಲ್ಲ ಮಾರ್ಗಗಳು ಅಂತ್ಯ ಕಾಣುವುದು. ಸಮಾಜದ ಎಲ್ಲ ಸ್ತರದ ಜನರು ಅದರಲ್ಲಿ ಸೇರುತ್ತವೆ.

* ಕ್ರೋಧದ ಬಗ್ಗೆ ಹುಝೂರ್ ಅನ್ವರ್ ಹೇಳಿದರು. ಕ್ರೋಧದಿಂದ ಜಗಳಗಳು ಉಂಟಾಗುತ್ತವೆ. ಬುದ್ಧಿ ಮತ್ತು ಆವೇಶದಲ್ಲಿ ಭಯಂಕರವಾದ ವೈರತ್ವವಿದೆ. ಯಾವ ವ್ಯಕ್ತಿ ಕೋಪ್ರೋದ್ರಿಕ್ತನಾಗುತ್ತಾನೋ ಅವನ ನಾಲಿಗೆ ಮೇಲೆ ಜಾಣ್ಮೆಯ ಮತ್ತು ಜ್ಞಾನದ ಮಾತುಗಳು ಖಂಡಿತ ಬರಲಾರವು. ಸೂರಃ ಅನ್ನಹ್ಲ್ ವಚನ 91 ಪ್ರಸ್ತಾಪಿಸಿದರು. ನ್ಯಾಯನಿಷ್ಠೆಗೆ ಪ್ರಥಮ ಸ್ಥಾನವಿದೆ ಪರಸ್ಪರ ನ್ಯಾಯನಿಷ್ಠೆಯಿಂದ ವರ್ತಿಸಬೇಕು. ಎರಡನೇ ದರ್ಜೆ ಔದಾರ್ಯವಾಗಿದೆ. ಅದರಲ್ಲಿ ಇತರರಿಗೆ ಸಹಾಯ ಬಡವರಿಗೆ ಸಹಾಯ, ದಾನಧರ್ಮ ಎಲ್ಲವೂ ಸೇರಿದೆ. ಅದಕ್ಕಿಂತಲೂ ಮಿಗಿಲಾದ ಒಂದು ದರ್ಜೆ ಈತಾಯಿ ಝಿಲ್‌ಖುರ್‌ಬಾ" ದ್ದಾಗಿದೆ. ಅದು ನಿಕಟ ಬಂಧುಗಳಿಗೆ ಎಂಬಂತೆ ಪರರಿಗೂ ಸಹಾಯ ಮಾಡುವುದಾಗಿದೆ. ಅದು ಓರ್ವ ತಾಯಿಯು ತನ್ನ ಮಕ್ಕಳಿಗೆ ಪ್ರೀತಿಸುವ ಹಾಗೆ ನಿಸ್ವಾರ್ಥ ಸೇವೆಯಾಗಿದೆ.

* ಹುಝೂರ್ ಅನ್ವರ್ ಹೇಳಿದರು. ಅಲ್ಲಾಹನು ನಮಗೆ ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ರವರನ್ನು ನಂಬಿದ ಮೇಲೆ ಇಸ್ಲಾಮಿನ ಯಥಾರ್ಥ ಶಿಕ್ಷಣದ ಮೇಲೆ ನಡೆಯುತ್ತಾ ಲೋಕದಲ್ಲಿ ತನ್ನ ಮಾದರಿ ಸ್ಥಾಪಿಸುವಂತೆ ಭಾಗ್ಯ ದಯಪಾಲಿಸಲಿ. ಶಾಂತಿಯ ನೆಲೆಯಲ್ಲಿ ನಾನು ವಿವರಿಸಿದ ಮಾತುಗಳನ್ನು ಸ್ವಯಂ ನಾವು ನಿಜ ಅರ್ಥದಲ್ಲಿ ನಡೆಯುವಂತಾಗಲಿ. ಲೋಕವನ್ನು ಎಚ್ಚರಿಸಬೇಕು. ಲೋಕವು ಸ್ವಾರ್ಥ ಸ್ವಹಿತಾಭಾವನೆಯಿಂದಾಗಿ ವಿನಾಶದ ಅಂಚಿಗೆ ಹೋಗುತ್ತಿದೆ. ನಿಜವಾದ ಶಾಂತಿಯು ಅಲ್ಲಾಹನ ಆಜ್ಞೆಗಳ ಮೇಲೆ ನಡೆಯುವಾಗ ಮಾತ್ರ ಸಾಧ್ಯ. ಮತ್ತ್ಯಾವ ಲೌಕಿಕ ವ್ಯವಸ್ಥೆಯು ದೀರ್ಘಕಾಲದ ಶಾಂತಿ ಸ್ಥಾಪಿಸಲಾರದು. ಆದುದರಿಂದ ಪ್ರತಿಯೊಬ್ಬ ಅಹ್ಮದಿಯ ದೊಡ್ಡ ಜವಾಬ್ಧಾರಿಯಾಗಿದೆ. ಅಲ್ಲಾಹನು ಅದನ್ನು ಪಾಲಿಸುವ ಭಾಗ್ಯ ದಯಪಾಲಿಸಲಿ. ಜಲ್ಸದ ಭಾಗಿದಾರರು ಜಲ್ಸದ ಅನುಗ್ರಹಗಳನ್ನು ಸಹ ಜೊತೆಯಲ್ಲಿ ಕೊಂಡೋಯಷಯುವವರಾಗಲಿ. ಲೋಕದಲ್ಲಿ ಎಲ್ಲ ಕಡೆಯೂ ಈ ಜಲ್ಸ ಆಲಿಸುವವರಲ್ಲಿ ಒಂದು ಹೊಸ ಉತ್ಸಾಹ ಭಾವನೆ ಉಂಟುಮಾಡುವಂತಾಗಲಿ ಮತ್ತು ತಮ್ಮ ತಮ್ಮ ಕ್ಷೇತ್ರಗಲಲ್ಲಿ ಇಸ್ಲಾಮಿನ ಪವಿತ್ರವಾದ ಶಿಕ್ಷಣದ ಪ್ರಕಾಶದಲ್ಲಿ ಒಂದು ಕ್ರಾಂತಿಯನ್ನು ಉಂಟು ಮಾಡುವವರಾಗಲಿ. ಎಲ್ಲ ಉಪಸ್ಥಿತರಿಗೆ ಅಲ್ಲಾಹನು ಕುಶಲ ರೀತಿಯಲ್ಲಿ ಅವರವರ ಮನೆಗೆ ಸೇರಿಸುವಂತಾಗಲಿ. ಖಾದಿಯಾನಿಗೆ ಬಂದವರಿಗು, ಆಫ್ರಿಕಾದ ಗನಿವಾಸಾವ್ ಬಂದವರಿಗೂ, ಅಲ್ಲಾಹನು ಎಲ್ಲರಿಗೂ ತನ್ನ ರಕ್ಷಣೆ ಒದಗಿಸುವಂತಾಗಲಿ.

* ಈಗ ನಾವು ಪ್ರಾರ್ಥಿಸೋಣ. ವಿಶೇಷವಾಗಿ ಪ್ರಾರ್ಥಿಸುವ ಅಲ್ಲಾಹನು ಜಮಾಅತನ್ನು ಎಲ್ಲ ಉಪದ್ರವಗಳಿಂದ ರಕ್ಷಿಸುವಂತಾಗಲಿ ಮತ್ತು ನಮಗೆ ಯಥಾರ್ಥ ರೀತಿಯಲ್ಲಿ ಬೈಅತ್ತಿನ ಹಕ್ಕನ್ನು ಪಾಲಿಸುವ ಭಾಗ್ಯ ದೊರೆಯುವಂತಾಗಲಿ. ಹಝ್ರತ್ ಮಸೀಹ್ ಮೌಊದ್(ಅ) ರವರ ಆಶಯದಂತಾಗಲಿ. ಈಗ ದುಆ ಮಾಡೋಣ.

* ಹುಝೂರ್ ಅನ್ವರ್ ಭಾರತೀಯ ಸಮಯಾನುಸಾರ ಸಂಜೆ 5.25 ಗಂಟೆಗೆ ದುಆ ಮಾಡಿಸಿದರು. ಇಸ್ಲಾಮಾಬಾದ್ ಮತ್ತು ಖಾದಿಯಾನ್ ಅಲ್ಲದೇ ಲೋಕದ ಎಲ್ಲಾ ಭಾಗಗಳಲ್ಲಿ ವಾಸಿಸುವ ಅಹ್ಮದಿ ಮುಸ್ಲಿಮರು ಎಂ.ಟಿ.ಎ ಯ ಅನುಗ್ರಹಪೂರ್ಣ ಪ್ರಸಾರ ಮಾಧ್ಯಮದ ಮೂಲಕ ತನ್ನ ಇಮಾಮರ ನೇತೃತ್ವದಲ್ಲಿ ದುಆದಲ್ಲಿ ಶಾಮೀಲಾದರು.

* ದುಆ ನಂತರ ಹುಝೂರ್ (ಅಬಿಅ) ಹೇಳಿದರು. ಜಲ್ಸ ಸ್ಥಳದಲ್ಲಿ ಕುಳಿತವರ ಹಾಜರಿ 2118 ಆಗಿದೆ. 8 ದೇಶಗಳು ಪ್ರತಿನಿಧಿಸಿವೆ. ಅದಲ್ಲದೆ ವಿವಿಧ ಸ್ಥಳಗಳಲ್ಲಿ ಜನರು ಕುಳಿತು ಜಲ್ಸ ಆಲಿಸುತ್ತಿದ್ದಾರೆ. ಅವರ ಸಂಖ್ಯೆಯೂ ಸಾಕಷ್ಟಿದೆ. ಖಾದಿಯಾನಿನಲ್ಲಿ ಜಲ್ಸ ಆಲಿಸುವವರ ಒಟ್ಟು ಸಂಖ್ಯೆ ಆರು ಸಾವಿರಕ್ಕಿಂತ ಹೆಚ್ಚಾಗಬಹುದು.

* ಅನಂತರ ಹುಝೂರ್ ಅನ್ವರ್ ಪ್ರೀತಿಪೂರ್ವಕವಾಗಿ ಕವನಗಳನ್ನು ಪ್ರಸ್ತುತಪಡಿಸಲು ಅನುಮತಿ ನೀಡಿದರು. ಪುರುಷರ ಜಲ್ಸಸ್ಥಳದಿಂದ 8 ತಂಡಗಳು ಮತ್ತು ಲಜ್ನ ಮಹಿಳೆಯರ ಜಲ್ಸ ಸ್ಥಳದಿಂದ ಎರಡು ತಂಡಗಳು ಉರ್ದು ಅರಬಿ ಮತ್ತು ಕಾಶ್ಮೀರಿ ಭಾಷೆಗಳಲ್ಲಿ ಕವನಗಳನ್ನು ಪ್ರಸ್ತುತಪಡಿಸಿದರು. ಕವನಗಳ ನಂತರ 5 ಗಂಟೆ 52 ನಿಮಿಷಕ್ಕೆ ಹುಝೂರ್ ಅನ್ವರ್(ಅಬಿಅ) ಲೋಕದಾದ್ಯಂತ ಉಪಸ್ಥಿತರಿಗೆ ಅಸಸಲಾಮು ಅಲೈಕುಂ ವ ರಹಮತುಲ್ಲಾ ಹಿ ವ ಬರಕಾತುಹು ಉಡುಗೊರೆ ನೀಡಿದರು. ಹುಝೂರ್ ಅನ್ವರ್(ಅಬಿಅ) ರವರ ಉಪದೇಶಗಳನ್ನು ಮತ್ತು ನಿರ್ದೇಶನಗಳನ್ನು ಪಾಲಿಸುವ ಭಾಗ್ಯ ದಯಪಾಲಿಸಲಿ. ಆಮೀನ್.

### ಮಹಿಳೆಯರ ಜಲ್ಸಾ

ದಿನಾಂಕ: 25 ಡಿಸೆಂಬರ್ 2021 ಶನಿವಾರ ಮಹಿಳೆಯರ ಸಮ್ಮೇಳನ ಜರುಗಿತು. ಮುಕರ್ರಮಾ ಬುಶ್ರಾ ತಯ್ಯಬಾ ನಾರಿ ಸಾಹಿಬಾ ಅಧ್ಯಕ್ಷತೆ ವಹಿಸಿದ್ದರು. ಖುರ್‌ಆನ್ ಪಾರಾಯಣ ಮುಕರ್ರಮಾ ಆಮ್ತುಲ್ ಹಾದಿ ಶೀರೀನ್ ಸಾಹಿಬಾ ನೆರವೇರಿಸಿ ಅನುವಾದ ಪ್ರಸ್ತುತಪಡಿಸಿದರು. ಮುಕರ್ರಮಾ ಅಮ್ತುಲ್ ಬಾಸಿತ್ ಬುಶ್ರಾ ಸಾಹಿಬಾ ಕವನ "ತುಜ್ಹೆ ಹಮ್ದು ಸನಾ ಝೇಬಾ ಹೈ ಪ್ಯಾರೆ" ಹಝ್ರತ್ ಮಸೀಹ್ ಮೌಊದ್(ಅ) ರವರ ಕವನ ಸಂಗ್ರಹದಿಂದ ಅತ್ಯಂತ ಮಧುರ ಸ್ವರದಲ್ಲಿ ಪಠಿಸಿದರು. ಮೊದಲ ಭಾಷಣ ಮುಕರ್ರಮಾ ಝುಕಿಯಾ ತಸ್ನಿಮ್ ಸಾಹಿಬಾ "ಇಸ್ಲಾಮಿನಲ್ಲಿ ದಾಂಪತ್ಯ ಜೀವನ" (ತಲಾಖ್ ಖುಲಅ್ ತಡೆಗಟ್ಟುವಿಕೆ) ಇಸ್ಲಾಮಿ ಶಿಕ್ಷಣದ ಪ್ರಕಾಶದಲ್ಲಿ" ಎಂಬ ವಿಷಯದಲ್ಲಿ ಮಾಡಿದರು.

ಅನಂತರ ಒಂದು ಕವನ ಮುಕರ್ರಮಾ ವಜೀಹ್ ಬಿಶಾರತ್ ಸಾಹಿಬಾ "ತೇರಿ ಮುಹಬ್ಬತ್ ಮೇ ಮೇರೆ ಪ್ಯಾರೆ ಹರ್ ಏಕ್ ಮುಸೀಬತ್ ಉಟಾಯೆ ಹಮ್" ಅತ್ಯಂತ ಮಧುರ ಕಂಠದಿಂದ ಪಠಿಸಿದರು.

ಅನಂತರ ಸಭೆಯ ಎರಡನೇ ಭಾಷಣ ಮುಕರ್ರಮಾ ಬುಶ್ರಾ ಪಾಶಾ ಸಾಹಿಬಾ ಸದರ್ ಲಜ್ನಾ ಇಮಾವುಲ್ಲಾಹ್ ಭಾರತ "ಅಹ್ಮದಿ ಮಹಿಳೆಯರ ತ್ಯಾಗಗಳು ಹಝ್ರತ್ ಅಮೀರುಲ್ ಮೂಮಿನೀನ್(ಅಬಿಅ) ರವರ ಭಾಷಣಗಳ ಪ್ರಕಾಶದಲ್ಲಿ" ಎಂಬ ವಿಷಯದಲ್ಲಿ ಮಾಡಿದರು. ಅನಂತರ ಸಭಾ ಅಧ್ಯಕ್ಷೆ ಸಮಾರೋಪ ಭಾಷಣ ಮಾಡಿದರು. ಅದರಲ್ಲಿ ಅವರು ವಾರ್ಷಿಕ ಇಜ್ತಿಮಾ ಲಜ್ನ ಇಮಾವುಲ್ಲಾಹ್ ಭಾರತ ಸಂದರ್ಭದಲ್ಲಿ ಹುಝುರೆ ಅನ್ವರ್(ಅಬಿಅ) ರವರು ಕಳುಹಿಸಿದ ಸಂದೇಶದ ಕೆಲ ಉಪದೇಶಗಳನ್ನು ಅವಗಾಹನೆಗೆ ತಂದರು. ದುಆದ ನಂತರ ಜಲ್ಸದ ಎಲ್ಲಾ ಕಾರ್ಯಕ್ರಮಗಳು ಸುಸೂತ್ರವಾಗಿ ನಡೆದು ಅಂತ್ಯಗೊಂಡಿತು. ಅಲ್ ಹಮ್ದುಲಿಲ್ಲಾಹ್.

ಜಲ್ಸದ ನಡುವೆ ಪ್ರತಿ ಎರಡು ಭಾಷಣಗಳ ನೇರ ಅನುವಾದ ಇಂಗ್ಲೀಷ್, ತಮಿಳು, ಮಲಯಾಳಂ ಭಾಷೆಗಳಲ್ಲಿ ಮಾಡಲಾಯಿತು. ಮಲಯಾಳಂ ಭಾಷೆಯಲ್ಲಿ ಮುಕರ್ರಮಾ ಜವೇರಿಯಾ ಗೌಹರ್ ಶಸ್ವ ಸಾಹಿಬಾ, ಸದರ್ ಲಜ್ನ ಕಣ್ಣೂರ್ ಹಾಗೂ ಕಾಸರಗೋಡು (ಕೇರಳ) ಅನುವಾದಿಸಿದರು. ತಮಿಳು ಭಾಷೆಯ ಅನುವಾದ ಮುಕರ್ರಮಾ ನಜ್ಮಾ ತಾರಿಖ್ ಸಹಿಬಾ ಮತ್ತು ಮುಕರ್ರಮಾ ಶಮಿನಾ ಮುಬಾರಕ್ ಸಾಹಿಬಾ ನೆರವೇರಿಸಿದರು. ಇಂಗ್ಲಿಷ್ ಭಾಷೆಯಲ್ಲಿ ಅನುವಾದ ಮುಕರ್ರಮಾ ಮಲಿಹಾ ಶಮೀಮ್ ಸಾಹಿಬಾ ನೇರ ಅನುವಾದ ಮಾಡಿದರು.

ದಿನಾಂಕ: 22 ಡಿಸೆಂಬರ್ ರಿಂದ 28 ಡಿಸೆಂಬರ್ ಮಸ್ಜಿದ್ ಅಖ್ಸ ಮತ್ತು ಮಸ್ಜಿದ್ ಅನ್ವಾರ್‌ನಲ್ಲಿ ಮತ್ತು ಜಲ್ಸದ ಮೂರು ದಿನಗಳವರೆಗೆ ಖಾದಿಯಾನಿನ ಎಲ್ಲಾ ಮಸೀದಿಗಳಲ್ಲಿ ಜಮಾತಾಗಿ ತಹಜ್ಜುದ್ ನಮಾಝ್ ನಿರ್ವಹಿಸುತ್ತಿದ್ದರು. ತಹಜ್ಜುದ್‌ಗಿಂತ ಮುಂಚೆ ತರಬೇತಿ ವಿಭಾಗದವರಿಂದ ಧ್ವನಿವರ್ಧಕ ಮೂಲಕ ದುರೂದ್ ಶರೀಫ್ ಮತ್ತು ಪವಿತ್ರವಾದ ಕವನದ ಸಾಲುಗಳನ್ನು ಉಚ್ಚರಿಸುತ್ತಾ ತಹಜ್ಜದ್ ನಮಾಝ್‌ಗೋಸ್ಕರ ಜಾಗೃತಿ ನೀಡುತ್ತಿದ್ದರು. ಫಜರ್ ನಮಾಝ್ ನಂತರ ತಫ್ಸೀರ್ ಕಬೀರ್ ಪಾಠ ನಡೆಸಲಾಗುತಿತ್ತು. ಖಾದಿಯಾನಿನ ಎಲ್ಲಾ ಓಣಿಗಳಲ್ಲಿ ಮತ್ತು ಜಲ್ಸ ಸ್ಥಳಗಳಲ್ಲಿ ಬ್ಯಾನರ್ಸ್ ಹಾಕಲಾಗಿತ್ತು.

ಸರಕಾರದ ಗೈಡ್‌ಲೈನ್ ಪ್ರಾರ ಒಂದು ಸ್ಥಳದಲ್ಲಿ 700 ಸಂಖ್ಯೆಗೆ ಅನುಗುಣವಾಗಿ ಪುರುಷ ಜಲ್ಸ ಸ್ಥಳದ ಎರಡು ಬೇರೆ ಬೇರೆ ಪೆಂಡಾಲುಗಳು ಏಳೇಳು ನೂರುಗಳಂತೆ ತಯಾರು ಮಾಡಲಾಗಿದ್ದವು. ಮಹಿಳೆಯರೆಡೆಯೂ ಸಹ 700 ರಷ್ಟು ಕುಳಿತುಕೊಳ್ಳುವ ವ್ಯವಸ್ಥೆ ಮಾಡಲಾಗಿತ್ತು. ಈ ವರ್ಷ ಎಲ್ಲರಿಗಾಗಿ ಕುರ್ಚಿಗಳ ಮೇಲೆಯೇ ಕುಳಿತುಕೊಳ್ಳುವ ವ್ಯವಸ್ಥೆ ಮಾಡಲಾಗಿತ್ತು. ಪುರುಷರ ಜಲ್ಸ ಸ್ಥಳದಲ್ಲಿ ಎರಡು ಮತ್ತು ಮಹಿಳೆಯರ ಜಲ್ಸ ಸ್ಥಳದಲ್ಲಿ ಒಂದು ದೊಡ್ಡ ಗಾತ್ರದ LED ಮೂಲಕ ಆಲಿಸುವ ವ್ಯವಸ್ಥೆ ಮಾಡಲಾಗಿತ್ತು. ಕೋವಿಡ್ ನಿಯಮಗಳನ್ನು ಪೂರ್ಣ ರೀತಿಯಲ್ಲಿ ಪಾಲಿಸಲಾಗುತಿತ್ತು. ಜಲ್ಸ ಸ್ಥಳದಲ್ಲಿ 6 ಅಡಿ ದೂರದಲ್ಲಿ ಕುರ್ಚಿಗಳನ್ನು ಹಾಕಲಾಗಿತ್ತು.

ಹವಮಾನ ಇಲಾಖೆಯ ಪ್ರಕಾರ ದಿನಾಂಕ: 26ರಂದು ಮಳೆ ಆಗಬೇಕಿತ್ತು. ಮೊದಲ ಅಧಿವೇಶನದ ಅಂತಿಮ ಚರಣಕ್ಕಿಂತ ಮೊದಲು

ಸಣ್ಣ ಹನಿ ಪ್ರಾರಂಭವಾಗಿತ್ತು. ಎರಡನೇ ಅಧಿವೇಶನದಲ್ಲಿ ಹುಝೂರೆ ಅನ್ವರ್(ಅಬಿಅ) ರವರ ಸಮಾರೋಪ ಭಾಷಣ Live ಪ್ರಸಾರವಾಗಬೇಕಿತ್ತು. ಹಾಗೆ ಎಲ್ಲರು ತುಂಬ ಚಿಂತಿತರಾಗಿದ್ದರು. ಹಾಗೆ ಮೊದಲ ಅಧಿವೇಶನದ ಸ್ಥಿತಿಯನ್ನು ವಿವರಿಸಿ ಹುಝೂರೆ ಅನ್ವರ್ ಅವರ ಸಮ್ಮುಖದಲ್ಲಿ ಪ್ರಾರ್ಥಿಸಲು ಬೇಡಿಕೊಂಡಿದ್ದೆವು. ಅಲ್ಲಾಹನು ಹುಝೂರೆ ಅನ್ವರ್ ಅವರ ಪ್ರಾರ್ಥನೆಗಳಿಂದ ವಾತಾವರಣ ನಿಚ್ಛಳಗೊಂಡಿತ್ತು. ಮತ್ತು ಮಳೆ ಆಗಲಿಲ್ಲ. ಆದರಿಂದ ಜಲ್ಸ ಸ್ಥಳ ಪೂರ್ಣ ರೀತಿಯಲ್ಲಿ ತುಂಬಿ ಹೋಗಿತ್ತು ಸಭಿಕರೆಲ್ಲ ತುಂಬ ಗಂಭೀರವಾಗಿ ಹುಝೂರೆ ಅನ್ವರ್ ಅವರ ಭಾಷಣ ಆಲಿಸಿದರು. ಅಲ್ಹಮ್ದುಲಿಲ್ಲಾಹ್ ಅಲಾ ಝಾಲಿಕ್.

ಜಲ್ಸ ಸಾಲಾನದ ಪೂರ್ಣ ಕಾರ್ಯಕ್ರಮಗಳೆಲ್ಲ Live streaming ಮೂಲಕ ಪ್ರಸಾರ ಮಾಡಲಾಗುತಿತ್ತು. ಅದರಿಂದ ಕೇವಲ ಭಾರತದ ಜಮಾಅತುಗಳು ಮಾತ್ರವಲ್ಲ, ವಿದೇಶಗಳಲ್ಲೂ ಕಾರ್ಯಕ್ರಮಗಳನ್ನು ನೋಡುವ ಹಾಗೂ ಆಲಿಸುವ ಭಾಗ್ಯ ಪಡೆದಂತಾಯಿತು. ಪ್ರಸಾರ ವಿಭಾಗದ ವರದಿಯ ಪ್ರಕಾರ ಒಂದು ಲಕ್ಷ ಆರು ಸಾವಿರದ ಆರು ನೂರ ನಲವತ್ತರು ಜನರು ಜಲ್ಸ ಸಾಲಾನದ ಕಾರ್ಯಕ್ರಮಗಳನ್ನು ನೋಡುವ ಮತ್ತು ಆಲಿಸುವ ಭಾಗ್ಯ ಪಡೆದರು.

ಈ ವರ್ಷ ಅತಿಥಿಗಳ ವಸತಿಗೆ ಸುಮಾರು 15 ಸ್ಥಳಗಳಲ್ಲಿ ವ್ಯವಸ್ಥೆಮಾಡಲಾಗಿತ್ತು. 4 ಆಯೋಜಕರ ಸಹಾಯಕರು, ಉಪ ಸಹಾಯಕರು ಹಗಲಿರುಳು ಸೇವೆಯಲ್ಲಿ ತೊಡಗಿದ್ದರು.

ಜಲ್ಸ ಕಾರ್ಯಕ್ರಮಗಳನ್ನು ಇಂಗ್ಲೀಷ್, ಭಾಂಗ್ಲಾ ಕನ್ನಡ, ಮಲಯಾಳಂ, ತಮಿಳು, ತೆಲುಗು ಹೀಗೆ ಆರು ಭಾಷೆಗಳಲ್ಲಿ ಅನುವಾದ ಮಾಡಲಾಯಿತು. ಸಯ್ಯದ್‌ನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ರವರ ಕುತುಬಾ ಜುಮಅ ಮತ್ತು ಸಮಾರೋಪ ಭಾಷಣಗಳ ನೇರ ಅನುವಾದ ಮಾಡಲಾಯಿತು. Live streaming ಮೂಲಕ ಪ್ರಸಾರಗೊಳ್ಳುವ ಕಾರ್ಯಕ್ರಮಗಳ ಅನುವಾದ ತಮಿಳು ಮತ್ತು ಮಲಯಾಳಂನಲ್ಲಿ ಮಾಡಲಾಯಿತು. ಲಜ್ನಾ ಇಮಾವುಲ್ಲಾಹ್ ಜಲ್ಸದ ಕಾರ್ಯಕ್ರಮಗಳ ಸಹ ಅನುವಾದ ಐದೂ ಭಾಷೆಗಳಲ್ಲಿ ಮಾಡಲಾಯಿತು.

ಮಹಿಳೆಯರ ವಸತಿ ವ್ಯವಸ್ಥೆ ಅತಿಥಿ ಗೃಹ ನಂಬರ್ 1 ಮತ್ತು 2 ರಲ್ಲಿ ಮಾಡಲಾಗಿತ್ತು. 6 ರಾಜ್ಯಗಳಿಂದ ಜಮ್ಮು ಕಾಶ್ಮೀರ, ಪಂಜಾಬ್, ಕೇರಳ, ಕರ್ನಾಟಕ, ಆಂಧ್ರಪ್ರದೇಶ ಮತ್ತು ಹಿಮಾಚಲ ಪ್ರದೇಶದ ಮಹಿಳಾ ಅತಿಥಿಗಳು ಅದರಲ್ಲಿ ತಂಗಿದ್ದರು. ದಿನಾಂಕ: 21 ಡಿಸೆಂಬರ್ ರಂದು ಕಾರ್ಯಕರ್ತರ ಕಾರ್ಯವೈಖರಿ ವೀಕ್ಷಿಸಲಾಯಿತು. ಅದರಲ್ಲಿ ಎಲ್ಲಾ ಕಾರ್ಯಕರ್ತರು ಪಾಲ್ಗೊಂಡಿದ್ದರು. ಹುಝೂರೆ ಅನ್ವರ್(ಅಬಿಅ) ರವರ ಪ್ರತಿನಿಧಿ ಈ ವಸತಿ ಗೃಹಗಳ ವೀಕ್ಷಣೆ ಮಾಡಿದರು ಮತ್ತು ಅವಶ್ಯಕ ಮಾರ್ಗದರ್ಶನ ನೀಡಿದರು. ರಕ್ಷಣಾ ವಿಭಾಗದನ್ವಯ ದಾರುಲ್ ಮಸೀಹ್, ಗೇಟ್, ಬಿಹಿಶ್ತಿ ಮುಕಬ್ಬರ, ಮಹಿಳೆಯರ ವಸತಿ ವ್ಯವಸ್ಥೆ, ಮತ್ತು ಮಹಿಳೆಯ ಜಲ್ಸ ಸ್ಥಳ, ಲಜ್ನ ಇಮಾವುಲ್ಲಾಹ್ ಭಾರತದನ್ವಯ ರಕ್ಷಣಾ ಕರ್ತವ್ಯಗಳನ್ನು ಪಾಲಿಸಲಾಯಿತು. ನಮಾಝಿನ ಸಮಯದಲ್ಲಿ ಪಾಳಿ (Shift) ಪ್ರಕಾರ ಮಸ್ಜಿದ್ ಅಖ್ಸಾ Basement ನಲ್ಲಿ ಲಜ್ನ ಇಮಾವುಲ್ಲಾಹ್ ಸದಸ್ಯೆಯರು Duty ಪಾಲಿಸಿದರು. ವೈದ್ಯ ವಿಭಾಗದನ್ವಯ ಹೋಮಿಯೋ ವೈದ್ಯರು ನಮಾಝ್ ಸಮಯಗಳಲ್ಲಿ Duty ಮಾಡುತ್ತಿದ್ದರು.

ಈ ಸಂದರ್ಭದಲ್ಲಿ ಭಾರತದಾದ್ಯಂತದಿಂದ ಜಮಾಅತುಗಳಿಂದ ಬಂದ ಮರಬ್ಬಿಗಳು, ಅಮೀರುಗಳು ಮತ್ತು ಸದರ್ ಸಾಹೇಬರುಗಳು, ಜೊತೆಗೆ ಮುಕರ್ರಮ್ ನಾಝಿರ್ ಆಲಾ ಸಾಹಿಬ್ ಹಾಗೂ ನಾಯಿಬ್ ನಾಝಿರ ಆಲಾ ಸಾಹಿಬ್ ದಕ್ಷಿಣ ಭಾರತದವರು ಸಭೆ ಸೇರಿದರು. ಮತ್ತು ಅವರಿಗೆ ಅವಶ್ಯಕ ಮಾರ್ಗದರ್ಶನ ನೀಡಿದರು. ಅದೇ ರೀತಿ ಅಹ್ಮದಿಯಾ ಮೆಡಿಕಲ್ ಅಸೋಸಿಯೇಷನ್ ಆಫ್ ಇಂಡಿಯಾ ಅವರು ಸಹ ಒಂದು ಸಭೆ ಕರೆದಿದ್ದರು. ಅದರಲ್ಲಿ ಭಾರತದಿಂದ ಬಂದ ಡಾಕ್ಟರುಗಳೆಲ್ಲ ಭಾಗವಹಿಸಿದ್ದರು.

ಜಲ್ಸಾ ಸಂದರ್ಭದಲ್ಲಿ ಜಮಾಅತ್ ಬಾಂಧವರಿಗೆ ತಮ್ಮ ಮಕ್ಕಳ ವಿವಾಹ ಪವಿತ್ರ ಪಟ್ಟಣದಲ್ಲಿ ನೆರವೇರಿಸಬೇಕೆಂಬ ಹಂಬಲವಿರುತ್ತದೆ. ಹಾಗೆ ಜಲ್ಸದ ಎರಡನೇ ದಿನ ಮಗ್ರಿಬ್ ನಮಾಝ್‌ಗಳ ನಂತರ ಮಸ್ಜಿದ್ ದಾರುಲ್ ಅನ್ವಾರ್‌ನಲ್ಲಿ ಮಹಿಳೆಯರ ವೇದಿಕೆ ವ್ಯವಸ್ಥೆ ಮಾಡಲಾಗಿತ್ತು.

ಜಲ್ಸ ಸಾಲಾನ ಖಾದಿಯಾನಿನ ಒಂದು ಪ್ರಮುಖ ವಿಭಾಗ ಜನ ಸೇವಾ ವಿಭಾಗ" ಸಹ ಇದೆ. ಅದರನ್ವಯ ಮೂಲಭೂತವಾಗಿ ಶಿಸ್ತು ಪಾಲನೆ ಮತ್ತು ರಕ್ಷಣ ಕಾರ್ಯವನ್ನು ನಿರ್ವಹಿಸಲಾಗುತ್ತದೆ. ಈ ವರ್ಷ 500ಜನ ಸ್ವಯಂ ಸೇವಕರಾಗಿ ಕಾರ್ಯ ನಿರ್ವಹಿಸಿದರು. ಅವರಲ್ಲದೆ ಅನ್ಸಾರರ ಒಂದು ತಂಡ ಮತ್ತು ಲಜ್ನ ಇಮವುಲ್ಲಾಹ್ ಅವರ ಒಂದು ತಂಡ ಸಹ ಕಾರ್ಯಾ ನಿರ್ವಹಿಸಿದರು. ಈ ವರ್ಷ ಪ್ರತಿಯೊಂದು Cwy UÆUE Covid Test ಮಾಡಿಸಲಾಯಿತು. Negative ವರದಿ ಬಂದರೆ ಮಾತ್ರ ರಿಜಿಸ್ಟ್ರೇಶನ್ Card issue ಮಾಡಲಾಗುತಿತ್ತು. ಅದರ ನಂತರವೇ ವಸತಿ ನಿಲಯಗಳಿಗೆ ಹೋಗಲು ಅನುಮತಿ ಕೊಡಲಾಗುತಿತ್ತು. ಖುದ್ದಾಮ್ (ಯುವ ವಿಭಾಗದವರು) ಶಿಸ್ತು ಪಾಲನೆಯ ಕಾರ್ಯ ನಿರ್ವಹಿಸಿದರು. ದಾರುಲ್ ಮಸೀಹ್, ಬಿಹಿಶ್ತಿ ಮುಖ್‌ಬರ, ಜಲ್ಸ ಸ್ಥಳ, ಖಾದಿಯಾನಿನ ಎಲ್ಲಾ ಕೇಂದ್ರೀಯ ಮಸೀದಿಗಳು, ಮತ್ತು ಎಲ್ಲಾ ವಸತಿ ನಿಲಯಗಳು ಹಾಗೂ ಪ್ರವೇಶ ದ್ವಾರದಲ್ಲಿ ಖುದ್ದಮರಿಗೆ (ಯುವಕರಿಗೆ) ಸತತವಾಗಿ ಕಾರ್ಯ ನಿರ್ವಹಿಸಲು ಆದೇಶವಾಗಿತ್ತು. Lost and found ಮತ್ತು Arrangement ಕಛೇರಿಗಳು ಸಹ ಸ್ಥಾಪಿಸಲಾಗಿತ್ತು. First Aid ಮತ್ತು ತುರ್ತು ಕಾರ್ಯಗಳಿಗಾಗಿ 24 ಗಂಟೆಯು ಒಂದು Dedicated Team ಹಾಜರಿತ್ತು. ಅದು ಅತಿಥಿಗಳ ಸೇವೆ ಮತ್ತು ಆರಾಮಗೋಸ್ಕರ ಕಾರ್ಯ ನಿರ್ವಹಿಸುತ್ತಿದ್ದರು ಮಸೀದಿ, ಜಲ್ಸ ಸ್ಥಳ ಮತ್ತು ವಸತಿ ನಿಲಯಗಳಲ್ಲಿ Sanitlization ಹಾಗೂ ಸ್ವಚ್ಛತಾ ಕಾರ್ಯಗಳಿಗೆ ಸಹ ಒಂದು ತಂಡ ಸೇವೆ ನಿರ್ವಹಿಸುತಿತ್ತು.

ಅಲ್ಲಾಹನು ಈ ಜಲ್ಸವನ್ನು ಅತ್ಯಂತ ಹಿತಕರ ಹಾಗೂ ಅನುಗ್ರಹಪೂರ್ಣ ಆಗುವಂತೆ ದಯಪಾಲಿಸಲಿ ಮತ್ತು ಎಲ್ಲಾ ಕಾರ್ಯಕರ್ತರ, ಕಾರ್ಯಕರ್ತೆಯರ ಮತ್ತು ಸೇವೆ ಸಲ್ಲಿಸುವವರಿಗೆ ಅಲ್ಲಾಹನು ತಕ್ಕುದಾದ ಪ್ರತಿಫಲ ನೀಡಲಿ. **ಆಮೀನ್.**

*********

*(ಪುಟ ಸಂಖ್ಯೆ 12ರ ಉಳಿದ ಭಾಗ)*

**ರಷ್ಯಾದಿಂದ ಬಂದ ತಂಡದೊಂದಿಗೆ ಹುಝೂರ್ ಅನ್ವರ್ ಅವರ ಭೇಟಿ.**

* ಅನಂತರ ಕಾರ್ಯಕ್ರಮದನ್ವಯ ರಷ್ಯಾದಿಂದ ಬಂದ ತಂಡವು ಭೇಟಿಯ ಭಾಗ್ಯ ಪಡೆಯಿತು. ಹುಝೂರ್ ಅನ್ವರ್ ತಂಡದ ಸದಸ್ಯರೆಲ್ಲರ ಕ್ಷೇಮ ವಿಚಾರಿಸಿದರು ಮತ್ತು ಪರಿಚಯ ಮಾಡಿಕೊಂಡರು.

ಮಾಸ್ಕೋದ ಗಸ್ಸಾನ್ ಖಯಾತ್ ಸಾಹಿಬ ತನ್ನ ಪತ್ನಿ ಮತ್ತು ಪುತ್ರ ಅಬ್ದುಲ್ಲ ಖಯಾತ್ ಸಾಹಿಬ್ ಜರ್ಮನಿ ಜಲ್ಸಕ್ಕೆ ಆಗಮಿಸಿದ್ದರು. ಅದೇ ರೀತಿ ಕಾಝಾನ (ತಾತಾರಿಸ್ತಾನ) ದಿಂದ ಶ್ರೀಮತಿ ಗುಲ್ನಾರಾ ಸಾಹಿಬಾ ಜಲ್ಸದಲ್ಲಿ ಪಾಲ್ಗೊಂಡಿದ್ದರು.

ಅಬ್ದುಲ್ಲ ಖಯಾತ್ ಸಾಹಿಬ್ ಹೇಳಿದರು. ನಾನು ಈ ಸಮಯ ಹಾಲೆಂಡ್‌ನ ಒಂದು ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣ ಪಡೆಯುತ್ತಿದ್ದೇನೆ. ಆರ್ಕಿಟಿಕ್ ಇಂಜಿನಿಯರ್ ಆಗುತ್ತಿದ್ದೇನೆ, ಜೊತೆಯಲ್ಲಿ ಇಂಗ್ಲೀಷ್ ಮತ್ತು ಡಚ್ ಭಾಷೆ ಕಲಿಯುತ್ತಿದ್ದೇನೆ. ನನಗೆ ನಿನ್ನೆ ಬೈಅತ್ ಮಾಡುವ ಭಾಗ್ಯ ಸಿಕ್ಕಿತು.

* ಅವರ ತಂದೆ ಗಸೋಆನ್ ಖಯಾತ್ ಸಾಹಿಬ್ ಹೇಳಿದರು. ಮಾಸ್ಕೋದಲ್ಲಿ ಜಮಾಅತಿನ ಸೆಂಟರ್ ಇದೆ. ಅದೊಂದು ಫ್ಲಾಟ್‌ನಲ್ಲಿದೆ. ಅಲ್ಲಿ ಜನರು ಬರಲಾಗುವಂತಹ ಜಾಗದಲ್ಲಿದೆ. ಈಗ ನಮಗೆ ದೊಡ್ಡ ಹಾಗೂ ಖಾಲಿ ಜಾಗದ ಅವಶ್ಯಕತೆ ಇದೆ.

ಆಗ ಹುಝೂರ್ ಅನ್ವರ್ ಕೆಲ ಸಲಹೆಗಳನ್ನು ನೀಡಿದರು. ನೀವು ಮರಳಿ ಹೋಗಿ ಇನ್ನಷ್ಟು ಪರಿಶೀಲನೆ ನಡೆಸಿ. ಎಲ್ಲ ರೀತಿಯಿಂದ ಉಚಿತವಿರುವಂತಹ, ಸರಿಯಾದ ಬೆಲೆವುಳ್ಳದ್ದನ್ನು ಜಾಗ ನೋಡಿರಿ. ನಗರದಿಂದ ದೂರವಿರುವ ಜಾಗ ನೋಡಿರಿ. ಮರಳಿ ಹೋಗಿ ಪರಿಶೀಲನೆ ನಡೆಸಿ ವರದಿ ನೀಡಬೇಕು. ಏನು ಸಾಧ್ಯತೆಗಳಿವೆ. Requirements ಏನಾಗಿವೆ, ಯಾವ ಜಾಗ ನೋಡಿದರೂ ಅದು ಸಾರ್ವಜನಿಕ ಸಾರಿಗೆ ವ್ಯವಸ್ಥೆ ಆಗುವಂತಿರಬೇಕು. ಹತ್ತಿರದಲ್ಲಿ ಹೆದ್ದಾರಿ ಇರಬೇಕು. ಜನರು ಬರುವ ಸೌಲಭ್ಯಗಳಿರಬೇಕು. ನೀರು, ವಿದ್ಯುತ್ ಮತ್ತು ಫೋನ್ ಇತ್ಯಾದಿಗಳ ಸವಲತ್ತುಗಳಿರಬೇಕು. ಫ್ಲಾಟ್ ನಿರ್ಮಾಣ ಮಾಡುವುದರಲ್ಲಿ ಹೆಚ್ಚು ಲಾಭವಿದೆಯೋ ಅಥವಾ ನಿರ್ಮಾಣಗೊಂಡ ಕಟ್ಟಡ ಖರೀದಿಸುವುದರಲ್ಲಿ ಲಾಭವಿದೆಯೊ ಪರಿಶೀಲಿಸಬೇಕು.

ಅವರು ಹೇಳಿದರು. ಎಲ್ಲಿಯವರೆಗೆ ಯುಕ್ರೇನ್ ಸಮಸ್ಯೆ ಪರಿಹಾರಗೊಳ್ಳುವುದಿಲ್ಲ, ಬೆಲೆಗಳು ಕಡಿಮೆಯಿರುವುದು. ಯುಕ್ರೇನ್ ಸಮಸ್ಯೆಯಲ್ಲಿ ಅಮೇರಿಕಾ, ರಷ್ಯಾ, ಸಂಧಾನ ಏರ್ಪಡಿಸಿಕೊಂಡರೆ ಬೆಲೆಗಳು ಏರುವವು. ಆಗ ಹುಝೂರ್ ಅನ್ವರ್ ಹೇಳಿದರು. ನೀವು ಸರಿ ಹೇಳಿದ್ದೀರಿ.

* ಕಾಝಾನ್ (ತಾತಾರಿಸ್ತಾನ್) ಯಿಂದ ಬಂದ ಮಹಿಳೆ ಗುಲ್ನಾರಾ ಸಾಹಿಬ್ ಹೇಳಿದರು. ನಾನು 2007 ರಲ್ಲಿ ಬೈಅತ್ ಮಾಡಿದ್ದೆ. ಅವರು ಪ್ರಪ್ರಥಮ ಕಾಝಾನ್ ಮುಬಲ್ಲಿಗ್ ಸಾಹಿಬರ ಸಲಾಂ ಹೇಳಿದರು. ಅವರ ಕುಟುಂಬ ಸದಸ್ಯರಿಗೆ ದುಆ ಮಾಡಲು ಹೇಳಿದರು, ಮತ್ತು ಹೇಳಿದರು. ಇಲ್ಲಿಯ ಪರಿಸರ ತುಂಬ ಒಳ್ಳೆಯದಾಗಿದೆ ಮತ್ತು ಜಲ್ಸಾದ ಎಲ್ಲಾ ವ್ಯವಸ್ಥೆಗಳು ತುಂಬ ಚೆನ್ನಾಗಿದ್ದವು. ನನಗೆ ತುಂಬ ಸಂತೋಷವಾಯಿತು.

ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ರಷ್ಯಾ ಕುರಿತು

ಮಾಡಿರುವ ಭವಿಷ್ಯವಾಣಿಯಿದೆ. ಅಲ್ಲಿ ಜಮಾಅತ್ ಮರಳಿನಂತೆ ಹರಡುವುದು ಎಂದು ನನಗೆ ಭಾಸವಾಗುತ್ತಿದೆ. ಈಗ ಅದರ ಆರಂಭವಾಗಿದೆ. ಆಕಾಶದಲ್ಲಿ ಅಹ್ಮದಿಅತ್ತಿನ ನಕ್ಷತ್ರ ಮಿನುಗುತ್ತಿದೆ.

ಅವರು ಹೇಳಿದರು. ನನಗೆ ಪದೇ ಪದೇ ಜಲ್ಸಕ್ಕೆ ಬರಲು ಮನಸ್ಸಾಗುತ್ತಿದೆ.

ಹುಝೂರ್ ಹೇಳಿದರು. ಅವಶ್ಯವಾಗಿ ಬರುತ್ತೀರಿ. ಮತ್ತೊಮ್ಮೆ ಮಗದೊಮ್ಮೆ ಬರುತ್ತೀರಿ. ಯು.ಕೆ ಜಲ್ಸಾದಲ್ಲೂ ಬನ್ನಿ.

ರಷ್ಯನ್ ತಂಡದೊಂದಿಗಿನ ಈ ಭೇಟಿ 8 ಗಂಟೆ 15 ನಿಮಿಷದವರೆಗೆ ನಡೆಯಿತು. ಕೊನೆಯಲ್ಲಿ ತಂಡದ ಸದಸ್ಯರೆಲ್ಲರೂ ಹುಝೂರ್‌ರ ಜೊತೆ ಚಿತ್ರ ತೆಗೆಯಿಸಿಕೊಂಡರು. ಹುಝೂರ್ ತಂಡದ ಸದಸ್ಯರೆಲ್ಲರಿಗೆ ಲೇಖನಿ ನೀಡಿದರು.

**ಅಲ್ಬಾನಿಯದಿಂದ ಬಂದ ತಂಡದ ಹುಝೂರ್‌ರೊಡನೆ ಭೇಟಿ.**

* ಅನಂತರ ಕಾರ್ಯಕ್ರಮದನ್ವಯ ಅಲ್ಬಾನಿಯಾ ದೇಶದ ತಂಡದವರು ಹುಝೂರ್‌ರೊಡನೆ ಭೇಟಿಯಾಗುವ ಭಾಗ್ಯ ಪಡೆದರು.

ಅಲ್ಬಾನಿಯಾದಿಂದ ಈ ವರ್ಷ ಜರ್ಮನಿ ಜಲ್ಸಕ್ಕೆ 16 ಜನರ ಒಳಗೊಂಡ ತಂಡ ಬಂದಿತ್ತು. ಅದರಲ್ಲಿ 7 ಮಹಿಳೆಯರು ಹಾಗೂ ಒಂದು ಮಗು ಸೇರಿದ್ದವು.

ಹುಝೂರ್ ಅನ್ವರ್ ತಂಡದ ಸದಸ್ಯರೆಲ್ಲರಿಂದ ಪರಿಚಯ ಪಡೆದರು ಮತ್ತು ಅವರ ಕ್ಷೇಮ ವಿಚಾರಿಸಿದರು.

* ತಂಡದ ಸದಸ್ಯರೊಬ್ಬರು ಹೇಳಿದರು. ನಾನು ಶಿಕ್ಷಕಿಯಾಗಿದ್ದೇನೆ. ಮೊದಲ ಸಲ ಜಲ್ಸದಲ್ಲಿ ಭಾಗವಹಿಸುತ್ತಿದ್ದೇನೆ. ಯಾವ ರೀತಿಯ ಕಾರ್ಯಕ್ರಮಗಳು ನಡೆಯುತ್ತಿವೆ ಎಂಬ ಅಂದಾಜು ನನಗೆ ಇರಲಿಲ್ಲ. ಇಲ್ಲಿ ಇಷ್ಟು ದೊಡ್ಡ ಸಂಖ್ಯೆ ಮತ್ತು ಶಿಸ್ತು ಹಾಗೂ ಶಾಂತಿಪೂರ್ಣ ಪರಿಸರ ಕಂಡು ಬೆರಗಾದೆ. ಇಷ್ಟೊಂದು ದೊಡ್ಡ ಸಮೂಹವಿದ್ದರೆ ಜನರು ಕಚ್ಚಾಡುತ್ತಿರುತ್ತಾರೆ. ಆದರೆ ನಾನು ಯಾರಿಗೂ ಜಗಳವಾಡುತ್ತಿದ್ದನ್ನು ಕಾಣಲಿಲ್ಲ. ನಾನು ಪುರುಷರ ಕಡೆಗೆ ಹೋಗಿದ್ದೆ. ಮತ್ತು ಮಹಿಳೆಯರ ಕಡೆಗೆ ಹೋಗಿದ್ದೆ. ಆದರೆ ಯಾವ ಜಗಳವು ಕಾಣಲಿಲ್ಲ. ನಾನು ಮತ್ತು ನನ್ನ ಮಗಳು ತುಂಬ ಪ್ರಭಾವಿತರಾಗಿದ್ದೇವೆ.

* ಅಲ್ಬಾನಿಯಾದ ಮಿತ್ರರೊಬ್ಬರು Muharram Xhepa ಸಾಹಿಬ್ ತನ್ನ ಭಾವನೆಗಳನ್ನು ವ್ಯಕ್ತಪಡಿಸುತ್ತಾ ಹೀಗೆ ಹೇಳಿದರು.

ನಾನು ಮೊದಲ ಬಾರಿಗೆ ಬಂದಿರುತ್ತೇನೆ. ಜಲ್ಸದ ವ್ಯವಸ್ಥೆಗಳು ಅಸಾಮಾನ್ಯವಾಗಿದ್ದವು. ಓ ಖಲೀಫತುಲ್ ಮುಸ್ಲಿಮೀನ್! ನಾನು ನನ್ನ ಪುತ್ರ ಮತ್ತು ಸೊಸೆ ಈ ಜಲ್ಸಕ್ಕೆ ಶಾಮೀಲಾಗಿದ್ದು ತುಂಬ ಹೆಮ್ಮೆಯ ವಿಷಯವಾಗಿದೆ. ನಾನು ತನ್ನ ಪತ್ನಿ ಮಕ್ಕಳ ಪರವಾಗಿ ಹುಝೂರ್‌ರಿಗೆ ಸಲಾಂ ಸಲ್ಲಿಸುತ್ತೇನೆ ಮತ್ತು ಆತ್ಮೀಯವಾಗಿ ಶುಭಾಶಯಗಳನ್ನು ಕೋರುತ್ತೇನೆ. ನನಗೆ ತಿಳಿದಿದೆ. ತಾವು ಯಾವಾಗಲೂ ಕಾರ್ಯಗಳಲ್ಲಿ ಮಗ್ನನಾಗಿರುತ್ತೀರಿ. ಆದರೆ ಈ ವಿನೀತನು ತಮ್ಮಲ್ಲಿ ಬೇಡಿಕೊಳ್ಳುವುದೇನೆಂದರೆ ಅಲ್ಬಾನಿಯಕ್ಕೂ ಆಗಮಿಸಬೇಕು.

ಅವರು ಹೇಳಿದರು. ಇಲ್ಲಿ ಬಂದು ನನ್ನ ಭಾವನೆಗಳೆಲ್ಲ ಬದಲಾಗಿವೆ ಮತ್ತು ನಾನು ತುಂಬ ಸಂತುಷ್ಟನಾಗಿದ್ದೇನೆ. ನಾನು ಇದಕ್ಕಿಂತ ಮುಂಚೆ ಅಲ್ಬಾನಿಯಾ ಜಲ್ಸಾದಲ್ಲಿ ಭಾಗವಹಿಸಿದ್ದೆ. ಆದರೆ ಇಲ್ಲಿ ಬಂದು ಮನ: ಪೂರ್ವಕವಾಗಿ ನಾನು ಅಹ್ಮದಿಅತ್ ಸ್ವೀಕರಿಸಿದ್ದೇನೆ.

ಆಗ ಹುಝೂರ್ ಹೇಳಿದರು. ಅಲ್ಲಾಹನು ನಿಮ್ಮ ಭಾವನೆಯನ್ನು ಜೀವಂತವಾಗಿರಿಸಲಿ, ಹುಝೂರ್ ಅನ್ವರ್ ಹೇಳಿದರು. ನೀವು ನನಗೆ ಅಲ್ಬಾನಿಯಾ ಬರಲು ಆಹ್ವಾನಿಸುತ್ತಿದ್ದೀರಿ. ಮೊದಲು ಅಲ್ಲಿ ನೂರು ಇನ್ನೂರು ಜನರ ಜಮಾಅತ್ ಆದರೂ ಸಿದ್ಧಪಡಿಸಿರಿ.

* Lindita Kosturu ಹೆಸರಿನ ಮಹಿಳೆ ಹೇಳಿದರು. ಜಲ್ಸದ ವ್ಯವಸ್ಥೆಗಳು ಎಲ್ಲಾ ರೀತಿಯಿಂದಲೂ ಪರಿಪೂರ್ಣವಾಗಿದ್ದವು. ಅದರಲ್ಲಿ ಯಾವ ನ್ಯೂನತೆಗಳು ಇರಲಿಲ್ಲ. ನಾನು ಪುರುಷರ ವಿಭಾಗದಲ್ಲೂ ಹೋಗಿದ್ದೆ. ಮಹಿಳೆಯರ ವಿಭಾಗದಲ್ಲೂ ಹೋಗಿದ್ದೆ. ಆದರೆ ಎಲ್ಲಾ ಕಡೆಯೂ ವ್ಯವಸ್ಥೆಗಳು ಅತ್ಯುತ್ತಮವಾಗಿದ್ದವು

* Ervin Xhepa ಸಾಹಿಬ್ ತನ್ನ ಪತ್ನಿಯೊಂದಿಗೆ ಜಲ್ಸದಲ್ಲಿ ಶಾಮೀಲಾಗಿದ್ದರು. ಇಬ್ಬರೂ ಕಾನೂನು ಪದವಿಗೆ ಸೇರಿದವರಾಗಿದ್ದಾರೆ. ಅವರ ಪತ್ನಿ ಜಲ್ಸದಲ್ಲಿ ಭಾಗವಹಿಸುವ ಮುಂಚೆ ಬೈಅತ್ ಮಾಡಿರಲಿಲ್ಲ. ಆದರೆ ಅಲ್‌ಹಮ್ದು ಲಿಲ್ಲಾಹ್ ಜಲ್ಸದಲ್ಲಿ ಭಾಗವಹಿಸಿ ಹುಝೂರರೊಂದಿಗೆ ಭೇಟಿಯ ನಡುವೆ ಅವರು ಅಹ್ಮದಿಅತ್ ಸ್ವೀಕಾರದ ಘೋಷಣೆ ಮಾಡಿದರು. ಅವರು ಹೇಳಿದರು. ಜಲ್ಸದ ಅನುಭವಗಳು ಅಸಾಮಾನ್ಯ ರೀತಿಯದ್ದಾಗಿವೆ. ಯಾವ ಪ್ರೀತಿ ಆತ್ಮೀಯತೆ ಮತ್ತು ನಿಸ್ವಾರ್ಥ ಸೇವೆಗಳ ಪ್ರದರ್ಶನ ಇಲ್ಲಿ ಕಂಡಿದ್ದೇವೆ. ಅವು ನಮ್ಮ ಮನಸ್ಸಿನ ಮೇಲೆ ಗಾಢವಾದ ಪ್ರಭಾವ ಬೀರಿವೆ.

ಅವರು ಇನ್ನೂ ಬೈಅತ್ ಮಾಡಲಿಲ್ಲ ಎಂದು ಹುಝೂರ್ ತಿಳಿದು ಹೇಳಿದರು. ಓರ್ವ ವಕೀಲನನ್ನು ಮನ್ನಿಸುವಂತೆ ಮಾಡಲು ಪುರಾವೆಗಳ ಅವಶ್ಯಕತೆ ಇರುತ್ತದೆ. ಆದುದರಿಂದ ನಿಮ್ಮ ಪತಿಗೆ ನಿಮ್ಮನ್ನು ಪ್ರಬಲ ಪುರಾವೆಯೊಂದಿಗೆ ಅರ್ಥೈಸಬೇಕಾಗುತ್ತದೆ. ಪತಿಯು ಸಾಕ್ಷ್ಯಗಳು ಪ್ರಬಲವಾಗಿರಬೇಕಾಗಿದೆ. ಆಗ ಅವರು ಹೇಳಿದರು. ನನ್ನ ಪತಿ ಅಹ್ಮದಿಅತ್ ವಿಷಯದಲ್ಲಿ ತುಂಬ ಪ್ರಚಾರ ಮಾಡಿದ್ದಾರೆ. ನಾನು ಮೊದಲಿನಿಂದಲೇ ತನ್ನ ಮನಸ್ಸಿನಲ್ಲಿ ಅಹ್ಮದಿಅತ್ ಸ್ವೀಕರಿಸಿದ್ದೆ. ಇಲ್ಲಿ ಬಂದ ನಂತರ ತುಂಬ ಪ್ರಭಾವಿತನಾದೆ. ಇಂದು ನಾನು ಪರಿಪೂರ್ಣ ದೃಢತೆಯಿಂದ ಮತ್ತು ಮನ:ಪೂರ್ವಕವಾಗಿ ಹೇಳುತ್ತಿದ್ದೇನೆ. ನಾನು ಅಹ್ಮದಿಯಾಗಿದ್ದೇನೆ. ಮತ್ತು ಅಹ್ಮದಿಯಾ ಜಮಾಅತಿಗೆ ಸೇರುತ್ತೇನೆ. ಇಷ್ಟು ಹೇಳಿ ಅವ್ಯಹತವಾಗಿ ಅಳುತ್ತಿದ್ದರು.

ಹುಝೂರ್ ಅನ್ವರ್(ಅಬಅ) ಅವರ ಪತಿಯನ್ನು ಸಂಬೋಧಿಸಿ ಹೇಳಿದರು. ನೀವು ಪತ್ನಿಗೆ ಅಹ್ಮದಿಅತ್ ಸಂತೋಷದಲ್ಲಿ ಉಡುಗೊರೆ ನೀಡಿ.

ಮಿತ್ರರೊಬ್ಬರು ಹೇಳಿದರು. ನಾನು ಶಿಕ್ಷಕನಾಗಿದ್ದೇನೆ. ಜಲ್ಸದಲ್ಲಿ ಮೊದಲ ಬಾರಿಗೆ ಬಂದಿರುತ್ತೇನೆ. ಇಲ್ಲಿಯ ಅತಿಥಿ ಸ್ಕಾರ ಮತ್ತು ಆತ್ಮೀಯತೆಯು ನನ್ನ ಮನಸ್ಸು ಗೆದ್ದುಕೊಂಡಿದೆ. ನಾನು ತನ್ನ ಜೀವನದಲ್ಲಿ ಮೊದಲ ಸಲ ಇಂತಹ ಭಾವನೆಯನ್ನು ಹೊಂದಿದ್ದೇನೆ. ಇನ್‌ಶಾಅಲ್ಲಾಹ್ ಬರುವ ವರ್ಷ ಇನ್ನೂ ಹೆಚ್ಚಿನ ಮಿತ್ರರನ್ನು ಕಳೆದುಕೊಂಡು ಬರುವೆನು.

* ಇಬ್ರಾಹಿಂ ತ್ರಿಶೂಲ ಸಾಹಿಬ್ ಸಹ ಹುಝೂರ್ ಅನ್ವರ್ ಜೊತೆಯ ಭೇಟಿಯ ನಡುವೆಯೇ ಅಹ್ಮದಿಯಾ ಜಮಾಅತಿಗೆ ಸೇರುವ ಘೋಷಣೆ ಮಾಡಿದರು. ಅವರು ಹೇಳಿದರು. ನಾನು ದೀರ್ಘ ಅವಧಿಯಿಂದ ಅಹ್ಮದಿಅತ್ತಿನಿಂದ ಪರಿಚಿತನಾಗಿದ್ದೇನೆ ಮತ್ತು ಜಮಾಅತಿನ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಬಂದಿದ್ದೇನೆ. ಆದರೆ ಬೈಅತ್ ಮಾಡಲಿಲ್ಲ. ನಾನು ನಿರ್ಣಯ ಕೈಗೊಳ್ಳುವುದರಲ್ಲಿ ಬಹಳ ತಡ ಮಾಡಿದ್ದು ಹೌದಾದರೂ ನನ್ನ ಬಳಿ ಇನ್ನು ತುಂಬ ಸಮಯವಿದೆ. ಆದ್ದರಿಂದ ಇಂದು ಪೂರ್ಣ ದೃಢತೆಯಿಂದ ಅಹ್ಮದಿಯಾ ಜಮಾಅತಿನಲ್ಲಿ ಸೇರುವ ಪ್ರತಿಜ್ಞೆ ಮಾಡುತ್ತೇನೆ. ಅವರು ಹುಝೂರ್ ಅನ್ವರ್ ಅವರ ಸಮಕ್ಷಮದಲ್ಲಿ- ತನ್ನನ್ನು ಓರ್ವ ಶುದ್ಧ ಹಾಗೂ ಸಕ್ರಿಯಾ ಅಹ್ಮದಿಯಾಗಿರುವಂತೆ, ತ್ಯಾಗಮಯಿ ಅಹ್ಮದಿಯಾಗಲು ಅಲ್ಲಾಹ್‌ನಲ್ಲಿ ಪ್ರಾರ್ಥಿಸಲು ಕೇಳಿಕೊಂಡರು. ನಿಸ್ಸಂಶಯವಾಗಿಯೂ ಅಹ್ಮದಿಯಾ ಜಮಾಅತ್ ಪ್ರಸ್ತುತಪಡಿಸುತ್ತಿರುವ ಇಸ್ಲಾಮ್ ಯಥಾರ್ಥ ಇಸ್ಲಾಂ ಆಗಿದೆ. ಯಾವ ಸತ್ಯವನ್ನು ಅಹ್ಮದಿಯಾ ಜಮಾಅತ್ ಪ್ರಸ್ತುತಪಡಿಸುತ್ತಿದೆ ಅದು ವಿಜಯಿಯಾಗುವುದು. ನನಗೆ ಜಲ್ಸದ ಪರಿಸರದಲ್ಲಿ ಒಂದು ಅಸಾಮಾನ್ಯ ರೀತಿಯ ಆಧ್ಯಾತ್ಮಿಕತೆ ಅನುಭವಿಸುವ ಅವಕಾಶ ದೊರೆತಿದೆ. ನಾನು ಭರವಸೆ ಹೊಂದಿದ್ದೇನೆ. ಓರ್ವ ಸತ್ಯಸಂಧಕ ಅಹ್ಮದಿಯಾಗುವೆ. ಇಲ್ಲಿ ಅಹ್ಮದಿಯರ ರೀತಿ, ಅವರನ್ನು ಇಲ್ಲಿ ಸೇವೆ ಸಲ್ಲಿಸುತ್ತಿರುವುದನ್ನು ನಾನು ಕಂಡಿದ್ದೇನೆ. ನಾನು ಇಲ್ಲಿ ಎಲ್ಲಾ ಏರ್ಪಾಡುಗಳನ್ನು ಸ್ವಯಂ ಸೇವಕರಾಗಿ ಮಾಡುತ್ತಿದ್ದನ್ನು ಕಂಡಿದ್ದೇನೆ. ಅಹ್ಮದಿಯರ ಈ ಸಾಹಸ, ಈ ಉತ್ಸಾಹ, ದೃಢ ನಿಲುವು ಮತ್ತು ಅನುಸರಣೆಯಿಂದ ಸಾಬೀತಾಗುವುದೇನೆಂದರೆ ಈ ಜಮಾಅತ್ ಸತ್ಯವಾಗಿದೆ.

* ಅಲ್ಬಾನಿಯನ್ ತಂಡದಲ್ಲಿ ಶಾಮೀಲಾದ ಮಿತ್ರರೊಬ್ಬರು Hatim Nako ಸಾಹಿಬ್ ತನ್ನ ಪತ್ನಿಯ ಜೊತೆಯಲ್ಲಿ ಜಲ್ಸದಲ್ಲಿ ಭಾಗವಹಿಸಿದ್ದರು. ಅವರು ಜಲ್ಸ ಕುರಿತು ತಮ್ಮ ಭಾವನೆಗಳನ್ನು ಹೀಗೆ ಹಂಚಿಕೊಂಡರು. ಜಲ್ಸಕ್ಕೆ ಬರುವ ಮುಂಚೆ ಈ ಜಲ್ಸ ಹೀಗಿರಬಹುದೆಂದು ಅಂದಾಜಿಸಿರಲಿಲ್ಲ. ಆದರೆ ಇಲ್ಲಿ ಬಂದು ನನಗೆ ಇಲ್ಲಿಯ ಸುವ್ಯವಹಾರ, ಅತಿಥಿ ಸತ್ಕಾರ ಮತ್ತು ಪರಸ್ಪರ ಸದ್ವರ್ತನೆಯ ಉನ್ನತ ಮಟ್ಟ ಕಾಣಲು ಸಾಧ್ಯವಾಯಿತು. ಬರುವ ವರ್ಷ ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ನನ್ನ ಮಿತ್ರರನ್ನು ಈ ಆಧ್ಯಾತ್ಮಿಕ ಜಲ್ಸದಲ್ಲಿ ಕರೆ ತರುವ ಬಯಕೆ ಇದೆ.

* ಮಹಿಳೆಯೋರ್ವಳು Mimoza koxhaj ಸಾಹಿಬಾ ತನ್ನ ಅನಿಸಿಕೆಗಳನ್ನು ಹೀಗೆ ವ್ಯಕ್ತಪಡಿಸಿದರು. ಇಲ್ಲಿ ಬರುವ ಮುಂಚೆ ಈ ಜಲ್ಸ ಈ ತರದಲ್ಲಿ ಇರುವುದೆಂದು ಭಾವಿಸಿರಲಿಲ್ಲ. ಆದರೆ ಇಲ್ಲಿ ಬಂದು ಜಲ್ಸದಲ್ಲಿ ಅಹ್ಮದಿಯಾ ಜಮಾಅತಿನ ಪ್ರೀತಿ, ಸ್ನೇಹ, ಶಾಂತಿ ಮತ್ತು ಅತಿಥಿ ಸತ್ಕಾರದ ಅದ್ವಿತೀಯ ಮಾದರಿಗಳನ್ನು ಕಾಣುವ ಭಾಗ್ಯ ದೊರೆತಿದೆ. ಜಲ್ಸದ ಎಲ್ಲಾ ಏರ್ಪಾಡುಗಳು ಎಲ್ಲಾ ರೀತಿಯಿಂದಲು ಮಾದರೀಯು ಹಾಗೂ ಪರಿಪೂರ್ಣವಾಗಿದ್ದವು.

**(ಮುಂದುವರಿಯುವುದು)**

**ಇನ್ಸಾನಿಯತ್ ಝಿಂದಾಬಾದ್**
**ಮಾನವೀಯತೆ ಚಿರಕಾಲ ಬಾಳಲಿ**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.03, Thursday, 10 February 2022, Issue No. 06

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 05ರ ವರದಿಯ ಉಳಿದ ಭಾಗ)**

* ಹಂಗೇರಿಯಿಂದ ಬಂದ ಈ ತಂಡದಲ್ಲಿ ಇಸ್ಮಾಈಲ್ ಸಾಹಿಬ್ ಸಹ ಒಬ್ಬರಾಗಿದ್ದರು. ಅವರು ಬೋರ್‌ಕೇನ ಫಾಸೋ ದವರಾಗಿದ್ದರು. ಆದರೆ ಹಂಗೇರಿಯಲ್ಲಿ ವಾಸಿಸುತ್ತಿದ್ದಾರೆ. ಅವರು ಕೆಲ ಸಮಯದ ಹಿಂದೆ ಬೈಅತ್ ಮಾಡಿದವರಾಗಿದ್ದರು. ಆದರೆ ಜಮಾತಿನ ಸಂಪರ್ಕದಲ್ಲಿರಲಿಲ್ಲ. ಈಗ ಒಬ್ಬ ಮಿತ್ರರ ಸಂಪರ್ಕದಿಂದ ಅವರಿಗೆ ಈ ಜಲ್ಸದಲ್ಲಿ ಆಹ್ವಾನಿಸಲಾಗಿತ್ತು. ಅವರು ತಮ್ಮ ಮಗಳು ಮತ್ತು ಮಕ್ಕಳ ಅಜ್ಜಿಯರೊಂದಿಗೆ ಜಲ್ಸದಲ್ಲಿ ಭಾಗವಹಿಸಿದ್ದರು. ಅವರು ಹಂಗರಿಯ ಮಹಿಳೆಯೊಬ್ಬರನ್ನು ಮದುವೆಯಾಗಿದ್ದರು. ಅವರಿಂದ ಇಬ್ಬರು ಹೆಣ್ಣು ಮಕ್ಕಳಿವೆ. ಹುಡುಗಿಯರಿಗೆ ಈ ರೀತಿ ಇಸ್ಲಾಮಿ ಸಮಾವೇಶದಲ್ಲಿ ಹೋಗಲು ಅವರ ತಾಯಿಗೆ ಸಮ್ಮತಿ ಇರಲಿಲ್ಲ. ಹಾಗಾಗಿ ಅವರ ಜೊತೆ ಅವರ ಅಜ್ಜಿಯನ್ನು ಕಳುಹಿಸಿದ್ದರು. ಅವರು ಸಹ ಜಲ್ಸಾದಲ್ಲಿ ಭಾಗವಹಿಸಿದ್ದರು.

ಇಸ್ಮಾಯಿಲ್ ಸಾಹಿಬ್ ಭೇಟಿಯ ನಡುವೆ ಹೇಳಿದರು ಅಲ್ಲಾಹನ ಅನುಗ್ರಹದಿಂದ ನಾನು ಈ ಪವಿತ್ರ ಜಮಾಅತಿಗೆ ಸೇರಿದವನಾಗಿದ್ದೇನೆ. ಮತ್ತು ಲೌಕಿಕ ಅಶ್ಲೀಲತೆಯಿಂದ ಹಾಗೂ ಅನ್ಯಪಂಥದ ಪರಸ್ಪರ ಜಗಳಗಳಿಂದ ಸುರಕ್ಷಿತನಾಗಿದ್ದೇನೆ.

ಹಂಗ್‌ರಿಯ ಮುಬಲ್ಲಿಗರು ತಿಳಿಸಿದರು. ಹುಡುಗಿಯರ ಅಜ್ಜಿ ಕೋವಮಾರೋಯಿ ಬಾರ್‌ಬಾಲ ಸಾಹಿಬಾ ಅವರು ತನ್ನ ಹುಡುಗಿಯರಿಗೋಸ್ಕರ ಬಂದಿದ್ದರು. ರಸ್ತೆಯಲ್ಲಿ One Community One Leader ವೀಡಿಯೋ ತೋರಿಸಲಾಯಿತು. ಆ ವೀಡಿಯೋ ಅವರ ಮೇಲೆ ಬಹಳ ಪ್ರಭಾವ ಬೀರಿತು. ಜಲ್ಸಾಕ್ಕೆ ತಲುಪುವ ಮೊದಲು ವಿಷಾದವಾಗತೊಡಗಿತು. ನಾನು ನನ್ನ ಶಿರವನ್ನು ಮುಚ್ಚಿಕೊಳ್ಳಲು ಏನೂ ತಂದಿಲ್ಲವಲ್ಲ ಎಂದು. ಮತ್ತೆ ಸಂಗಡಿಗ ಮಹಿಳೆಯರಲ್ಲಿ ಕೇಳಿ ಸ್ಕಾರ್ಫ್ ಪಡೆದಳು ಹಾಗೂ ಜಲ್ಸಾ ನಡುವೆ ಮತ್ತು ಭೇಟಿಯ ವೇಳೆ ಶಿರ ಮುಚ್ಚಿಕೊಂಡಿದ್ದರು.

ಭೇಟಿಯ ಸಮಯ ಭಾವುಕತೆಯಿಂದ ಏನೂ ಹೇಳಲಿಕ್ಕಾಗದೆ, ಅಷ್ಟೊಂದು ಶಾಂತಿಪೂರ್ಣ, ಸಮಾಧಾನದ ಪರಿಸರ ನೋಡಿ ಅಲ್ಲಾಹನಿಗೆ ವಂದನೆ ಸಲ್ಲಿಸುತ್ತಾ ಹೇಳಿದರು. ಇಲ್ಲಿ ಬಂದು ಯಾವ ಲೋಕವನ್ನು ನಾನು ಕಂಡಿದ್ದೇನೆ. ಈಗ ಅದರೊಂದಿಗೆಯೇ ಸಂಬಂಧ ಇರಿಸಲು ನನ್ನ ಮನಸ್ಸಾಗುತ್ತದೆ.

* ಹಂಗ್‌ರಿಯಿಂದ ಬಂದ ತಂಡದ ಈ ಭೇಟಿ ಏಳುವರೆ ಗಂಟೆಯವರೆಗೆ ಜಾರಿಯಲ್ಲಿತ್ತು. ಕೊನೆಯಲ್ಲಿ ತಂಡದ ಸದಸ್ಯರೆಲ್ಲರೂ ಹುಝೂರ್ ಅನ್ವರ್ ಜೊತೆಯಲ್ಲಿ ಭಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು. ಹುಝೂರ್ ಅನ್ವರ್ ತಂಡದ ಸದಸ್ಯರೆಲ್ಲರಿಗೆ ಲೇಖನಿ ನೀಡಿದರು ಮತ್ತು ಮಕ್ಕಳಿಗೆ ಚಾಕ್ಲೇಟ್ ನೀಡಿದರು.

**Latavia ತಂಡದೊಂದಿಗೆ ಹುಝೂರ್ ಅನ್ವರ್ ಅವರ ಭೇಟಿ.**

* ಅನಂತರ Latavia ದಿಂದ ಬಂದ ಅತಿಥಿಯರು ಹುಝೂರ್‌ರೊಡನೆ ಭೇಟಿಯಾಗುವ ಭಾಗ್ಯ ಪಡೆದರು. Latavia ದಿಂದ Hon. Valdis ಸಾಹಿಬ್ ತನ್ನ ಪತ್ನಿಯೊಂದಿಗೆ ಬಂದಿದ್ದರು. ಅವರು ಮೂರು ಸಲ ದೇಶದ ರಾಷ್ಟ್ರಪತಿ ಚುನಾವಣೆಯಲ್ಲಿ ಪಾಲ್ಗೊಂಡಿದ್ದಾರೆ, ಅವರಿಗೆ ಶೈಕ್ಷಣಿಕ ಮತ್ತು ದೇಶಸೇವೆಯ ಬಗ್ಗೆ ಉನ್ನತ ದರ್ಜೆಯ ಪದವಿಗಳಿಂದ, ಪುರಸ್ಕಾರಗಳಿಂದ ಸನ್ಮಾನಿಸಲಾಗಿದೆ. ಅವರು Letovia ದ Conservative ಪಕ್ಷದ ಅಧ್ಯಕ್ಷರೂ ಆಗಿದ್ದಾರೆ.

ಅವರು ಸುಮಾರು ಒಂದು ವರ್ಷದಿಂದ ಜಮಾಅತಿನ ಸಂಪರ್ಕದಲ್ಲಿದ್ದರು. ಆದರೆ ಅವರಿಗೆ ಜಮಾಅತಿನ ಪರಿಚಯ ಆದದ್ದು. ಒಂದೂವರೆ ತಿಂಗಳ ಹಿಂದೆ ಹುಝೂರ್ ಅನ್ವರ್ ಅವರ ಭಾಷಣಗಳ ಸಂಗ್ರಹ ಒಳಗೊಂಡ ಗ್ರಂಥಗಳು ಉಡುಗೊರೆಯಾಗಿ ನೀಡಲಾಗಿತ್ತು. ಅವರು ಈ ಗ್ರಂಥಗಳನ್ನು ಗಾಢವಾಗಿ ಅಧ್ಯಯನ ಮಾಡಿ ಹೇಳಿದರು. ಇಸ್ಲಾಮಿನ ನಿಜವಾದ ಸಂದೇಶ ನನಗೆ ಈಗ ತಲುಪಿದೆ ನಾನು ಇಸ್ಲಾಮಿನ ಶಿಕ್ಷಣದಿಂದ ತುಂಬಾ ಪ್ರಭಾವಿತನಾಗಿದ್ದೇನೆ.

ಅವರು ಹುಝೂರ್ ಅನ್ವರ್ ಅವರೊಂದಿಗೆ ಹೇಳಿದರು. ಜಲ್ಸಾದ ಎಲ್ಲಾ ಏರ್ಪಾಡುಗಳು ತುಂಬ ಉತ್ತಮವಾಗಿದೆ. ಜನರು ತುಂಬ ಪ್ರೀತಿಯಿಂದ ಭೇಟಿಯಾದರು ಮತ್ತು ಅವರಲ್ಲಿ ಪರಸ್ಪರ ಸಹೋದರತೆ ಕಂಡಿದ್ದೇನೆ. ಇದು ತುಂಬ ಆಶ್ಚರ್ಯದ ಮಾತಾಗಿದೆ. ಇಷ್ಟು ದೊಡ್ಡ ಜಮಾವಣೆಯಿದೆ. ಆದರೆ ಒಬ್ಬ ಪೋಲೀಸರು ಸಹ ಇಲ್ಲಿಲ್ಲ. ಎಲ್ಲ ಕಾರ್ಯಗಳು ಸುಸೂತ್ರವಾಗಿ ನಡೆದಿವೆ. ಇಂತಹ ದೃಶ್ಯ ನನ್ನ ಜೀವನದಲ್ಲಿ ಎಂದೂ ಕಂಡಿಲ್ಲ. ನನಗೆ ತುಂಬ ಆಶ್ಚರ್ಯವಾಗುತ್ತಿತ್ತು. ನಾನು ಇದು ಏನು ನೋಡುತ್ತಿದ್ದೇನೆ ಎಂದು.

ಹುಝೂರ್ ಅನ್ವರ್ ಹೇಳಿದರು. ವಾಸ್ತವವೇನೆಂದರೆ ನಾವೆಲ್ಲರೂ ಮಾನವರಾಗಿದ್ದೇವೆ. ನಮಗೆ ನಮ್ಮಲ್ಲಿರುವ ಭಿನ್ನತೆಗಳನ್ನು ಮರೆತು ಮಾನವೀಯತೆಯ ಮೌಲ್ಯಗಳನ್ನು ಸ್ಥಾಪಿಸಬೇಕಾಗಿದೆ. ಧರ್ಮದಲ್ಲಿರುವ ಸಮಾನತೆಯ ವಿಷಯಗಳನ್ನು ಆಧರಿಸಿ ನಾವೆಲ್ಲ ಒಗ್ಗೂಡಬೇಕಾಗಿದೆ.

ಅವರು ಹೇಳಿದರು. ಇಂದು ನಮ್ಮ ದೇಶ ಸಾಲದ ಅಡಿಯಲ್ಲಿ ದಮನಿಸಿ ಹೋಗಿದೆ. ಆರ್ಥಿಕ ನೆಲೆಯಲ್ಲಿ ನಾವು ಗುಲಾಮರಾಗಿದ್ದೇವೆ.

ಆಗ ಹುಝೂರ್ ನುಡಿದರು ನೀವು ಅರ್ಥ ವ್ಯವಸ್ತೆಯ ಕುರಿತು ಹಝ್ರತ್ ಖಲೀಫತುಲ್ ಮಸೀಹ್ ದ್ವಿತೀಯ ಅವರ ಗ್ರಂಥ The Econimic System Of Islam ಅಧ್ಯಯನ ಮಾಡಿ, ಅದೇ ರೀತಿ Islam's Response to contemporary Issues ಅಧ್ಯಯನ ಮಾಡಿ.

ಅವರು ಹೇಳಿದರು. ಯೂರೋಪ್ ಯೂನಿಯನ್ ದೇಶಗಳ ಅಭಿವೃದ್ಧಿಗೋಸ್ಕರ ಕೆಲಸವೇನು ಮಾಡುತ್ತಿದೆ. ಆದರೆ ಲೆಟೋವಿಯಾಕ್ಕೆ ಸಹಾಯ ನೀಡುತ್ತಿಲ್ಲ. ಸೋವಿಯತ್ ಯೂನಿಯನ್‌ನಲ್ಲಿ ಇರುವಾಗ ನಾವು ಎಲ್ಲ ಕಾರ್ಯಗಳನ್ನು ನಿರ್ವಹಿಸುತ್ತಿದ್ದೇವೆ. ದೇಶವನ್ನು ಅಭಿವೃದ್ಧಿಪಡಿಸುತ್ತಿದ್ದೇವೆ. ಯೂರೋಪಿಯನ್‌ಗೆ ಸೇರಿದಾಗಿನಿಂದ ದೇಶ ಅಭಿವೃದ್ಧಿ ಹೊಂದುತ್ತಿಲ್ಲ.

ಅವರು ಹೇಳಿದರು. ಲೆಟೆವಿಯಾದಲ್ಲಿ ಹಲವು ವಿಶ್ವವಿದ್ಯಾಲಯಗಳಿವೆ. ಆಗ ಹುಝೂರ್ ಹೇಳಿದರು. ಶೈಕ್ಷಣಿಕ ಮೈದಾನದಲ್ಲಿ UNICEF ನಿಮಗೆ ನೆರವು ನೀಡುತ್ತಿದೆಯೇ? ಆಗ ಅವರು ಹೇಳಿದರು. ಅವರು ತಮ್ಮ ಆಶಯದನ್ವಯ ಇರುವ ಸಂಶೋಧನೆಗಳ ಮೇಲೆ ನೆರವು ನೀಡುತ್ತದೆ. ಅದಾಗ್ಯೂ ನಾವು ಸ್ವತಂತ್ರ ದೇಶ ಹೊಂದಿದ್ದೇವೆ. ಆದರೆ ವಾಸ್ತವವಾಗಿ ನಾವು ಯೂರೋಪಿಯನ್‌ಗಳ ಗುಲಾಮರಾಗಿದ್ದೇವೆ. ನಾನು ತನ್ನ ಕಡೆಯಿಂದ ಈ ಅವಸ್ಥೆಯಿಂದ ತಮ್ಮ ದೇಶವನ್ನು ಹೊರತರಲು ಬಹಳಷ್ಟು ಪ್ರಯತ್ನ ಮಾಡುತ್ತಿದ್ದೇನೆ.

ಆಗ ಹುಝೂರ್ ಅನ್ವರ್ ಹೇಳಿದರು. ನೀವು ತಮ್ಮ ದೇಶದ ಸೇವೆಯನ್ನು ಮಾಡಿ, ತನ್ನ ದೇಶವನ್ನು ಶೈಕ್ಷಣಿಕ ಮೈದಾನದಲ್ಲಿ ಪ್ರಗತಿ ಹೊಂದಲು ಈ ಅವಸ್ಥೆಯಿಂದ ಹೊರತನ್ನಿ, ಖಡ್ಗಗಳಿಂದಲ್ಲ.

ಅವರ ಪತ್ನಿ ಹೇಳಿದರು. ಅವರು ಡಿಪ್ಲೋಮೆಟಿಕ್ ಸೇವೆಯಲ್ಲಿರುವವರು. ಅವರು ಹಝ್ರತ್ ಅಖ್‌ದಸ್ ಮಸೀಹ್ ಮೌಊದ್(ಅ) ರವರ ಗ್ರಂಥ Jesus In India ಓದಿರುತ್ತೇನೆ ಮತ್ತು ಹಝ್ರತ್ ಈಸಾ(ಅ) ನಿಧನ ಹೊಂದಿದರು ಎಂಬ ಮಾತಿಗೆ ಸಹಮತ ಹೊಂದಿದ್ದೇನೆ.

ಭೇಟಿಯ ಈ ಕಾರ್ಯಕ್ರಮ ಏಳು ಗಂಟೆಯಾಗಿ 55 ನಿಮಿಷಕ್ಕೆ ಕೊನೆಗೊಂಡಿತು. ಅನಂತರ ಅತಿಥಿಗಳು ಹುಝೂರ್ ಅನ್ವರ್ ಜೊತೆಯಲ್ಲಿ ಭಾವಚಿತ್ರ ತೆಗೆಸುವ ಭಾಗ್ಯ ಪಡೆದರು.

*(ಪುಟ ಸಂಖ್ಯೆ-10 ರಲ್ಲಿ ಮುಂದುವರಿಸಲಾಗಿದೆ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800–103–2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.